

prajavani.net prajavani | ಶನಿವಾರ, ಡಿಸೆಂಬರ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 357 | ಪುಟ 20 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 85,041 | ನಿಫ್ಟಿ 26,042 | $/₹ 89.90 | ಚಿನ್ನ (Std. 10g) ₹1,44,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,43,000 (ಬೆಂಗಳೂರು)

ಬೈರತಿಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: ರೌಡಿ ಶೀಟರ್ ಬಿಕ್ಲು ಶಿವು ಕೊಲೆ ಪ್ರಕರಣದ ಆರೋಪಿಯಾಗಿರುವ ಕೆ.ಆರ್.ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರಿಗೆ ಹೈಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ವಿವರ 7

'ಕಾಂಗ್ರೆಸ್ ಗೊಂದಲ ಬಗೆಹರಿಸಲಾಗುವುದು'

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಯಾವ ಗೊಂದಲಗಳೂ ಇಲ್ಲ. ಗೊಂದಲಗಳಿದ್ದರೆ ಪಕ್ಷದ ವೇದಿಕೆಯಲ್ಲೇ ಚರ್ಚಿಸಿ, ಬಗೆಹರಿಸಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ವಿವರ 8

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹಿಂದೂ ಹತ್ಯೆ: ಭಾರತ ಕಳವಳ

ಅಪರಾಧಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಬಾಂಗ್ಲಾದೇಶಕ್ಕೆ ಕೇಂದ್ರ ಸರ್ಕಾರದ ಒತ್ತಾಯ

ನವದೆಹಲಿ (ಪಿಟಿಐ): ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ನಿರಂತರವಾಗಿ ನಡೆಯುತ್ತಿರುವ ದಾಳಿಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿರುವ ಭಾರತವು, ಹಿಂದೂ ವ್ಯಕ್ತಿಯ ಹತ್ಯೆಯಲ್ಲಿ ಭಾಗಿಯಾದ ಅಪರಾಧಿಗಳ ವಿರುದ್ಧ ಕಠಿಣ ಕ್ರಮಕ್ಕೆ ಒತ್ತಾಯಿಸಿದೆ.

ಬಾಂಗ್ಲಾದೇಶದ ನ್ಯಾಷನಲಿಸ್ಟ್ ಪಕ್ಷದ (ಬಿಎನ್‌ಪಿ) ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್ 17 ವರ್ಷಗಳ ಬಳಿಕ ಸ್ವದೇಶಕ್ಕೆ ಮರಳಿದ್ದು, ಅಲ್ಲಿ ಹೊಸ ರಾಜಕೀಯ ಸ್ಥಿತ್ಯಂತರಕ್ಕೆ ವೇದಿಕೆ ಸಿದ್ಧಗೊಂಡಿರುವ ಬೆನ್ನಲ್ಲೇ, ಭಾರತ ಈ ಪ್ರತಿಕ್ರಿಯೆ ನೀಡಿದೆ.

'ಬಾಂಗ್ಲಾದೇಶದಲ್ಲಿ 2026ರ ಫೆಬ್ರುವರಿ 12ರಂದು ನಡೆಯಲಿರುವ ಸಾರ್ವತ್ರಿಕ ಚುನಾವಣೆಯು ಮುಕ್ತವಾಗಿ, ನ್ಯಾಯಯುತವಾಗಿ ಮತ್ತು ಎಲ್ಲರನ್ನೂ ಒಳಗೊಂಡು ನಡೆಯಬೇಕು. ಈಗಿನ ರಾಜಕೀಯ ಅಸ್ಥಿರತೆ ಕೊನೆಗಾಣಿಸಿ ಬಾಂಗ್ಲಾದಲ್ಲಿ ಕಾನೂನು ಸುವ್ಯವಸ್ಥೆ ಸ್ಥಿರಗೊಳ್ಳುವಂತೆ ಮಾಡುವುದು ಅಲ್ಲಿನ ಸರ್ಕಾರದ ಜವಾಬ್ದಾರಿ' ಎಂದು ಭಾರತ ಹೇಳಿದೆ.

'ಬಾಂಗ್ಲಾದೇಶದಲ್ಲಿ ಮಧ್ಯಂತರ ಸರ್ಕಾರದ ಅವಧಿಯಲ್ಲಿ ಹಿಂದೂಗಳು, ಕ್ರೈಸ್ತರು, ಬೌದ್ಧರನ್ನು ಒಳಗೊಂಡು ಅಲ್ಪಸಂಖ್ಯಾತರ ಮೇಲೆ 2,900ಕ್ಕೂ ಹೆಚ್ಚು ದಾಳಿಗಳು ನಡೆದಿವೆ. ಇದನ್ನು ಭಾರತ ಗಂಭೀರವಾಗಿ ಪರಿಗಣಿಸಿದೆ. ಜತೆಗೆ ಅಲ್ಲಿನ ರಾಜಕೀಯ ಬಿಕ್ಕಟ್ಟಿನ ಮೇಲೂ ನಿರಂತರವಾಗಿ ನಿಗಾ ವಹಿಸುತ್ತಿದೆ' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

12



ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲೆ ನಿರಂತರವಾಗಿ ನಡೆಯುತ್ತಿರುವ ದಾಳಿಯನ್ನು ರಾಜಕೀಯ ಹಿಂಸಾಚಾರ ಅಥವಾ ಮಾಧ್ಯಮಗಳ ಉತ್ಪ್ರೇಕ್ಷೆ ಎಂದು ತಳ್ಳಿ ಹಾಕುವಂತಿಲ್ಲ

ರಣಧೀರ್ ಜೈಸ್ವಾಲ್, ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ



ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲಿನ ದಾಳಿ ಖಂಡಿಸಿ ಲಖನೌನಲ್ಲಿ ರಾಷ್ಟ್ರೀಯ ಹಿಂದೂ ರಕ್ಷಾ ಪರಿಷದ್‌ನ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ತಂದೆಯ ಸಮಾಧಿಗೆ ತಾರಿಕ್ ನಮನ

ಢಾಕಾ/ನವದೆಹಲಿ (ಪಿಟಿಐ): ಸ್ವದೇಶಕ್ಕೆ ಮರಳಿರುವ ಬಾಂಗ್ಲಾದೇಶದ 'ಬಿಎನ್‌ಪಿ ಪಕ್ಷದ ಹಂಗಾಮಿ ಅಧ್ಯಕ್ಷ ತಾರಿಕ್ ರೆಹಮಾನ್, ಶುಕ್ರವಾರ ತಮ್ಮ ತಂದೆ, ಬಾಂಗ್ಲಾದೇಶದ ಮಾಜಿ ಅಧ್ಯಕ್ಷ ಜಿಯಾವುರ್ ರೆಹಮಾನ್ ಅವರ ಸಮಾಧಿ ಸ್ಥಳಕ್ಕೆ ಹಲವು ವರ್ಷಗಳ ಬಳಿಕ ಭೇಟಿ ನೀಡಿ, ನಮನ ಸಲ್ಲಿಸಿದರು.

ರೆಹಮಾನ್ ಅವರು, ಜಿಯಾವುರ್ ರೆಹಮಾನ್ ಅವರ ಸಮಾಧಿ ಸ್ಥಳಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಬಿಎನ್‌ಪಿ ಕಾರ್ಯಕರ್ತರು ರಸ್ತೆಯ ಎರಡೂ ಬದಿಗಳಲ್ಲಿ ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ಕಾರ್ಯಕರ್ತರ ದಟ್ಟಣೆಯಿಂದಾಗಿ ತಾರಿಕ್ ನಿವಾಸದಿಂದ, ಸಮಾಧಿ ಇರುವ ಜಿಯಾ ಉದ್ಯಾನದ 8 ಕಿ.ಮೀ ದಾರಿ ಕ್ರಮಿಸಲು 1 ಗಂಟೆ, 51 ನಿಮಿಷ ಬೇಕಾಯಿತು. ಬೆಂಬಲಿಗರು ಘೋಷಣೆಗಳನ್ನು ಕೂಗಿದರು. ಭಾರಿ ಸಂಖ್ಯೆಯಲ್ಲಿ ಸೇರಿದ್ದ ಜನರನ್ನು ನಿಯಂತ್ರಿಸಲು ಹೆಚ್ಚುವರಿ ಭದ್ರತೆ ಕೈಗೊಳ್ಳಲಾಗಿತ್ತು.

ದಿನದ ಬೆಳವಣಿಗೆ

- ಬಾಂಗ್ಲಾದೇಶದಲ್ಲಿ ಹಿಂದೂಗಳ ಹತ್ಯೆ ಖಂಡಿಸಿ ಕೋಲ್ಕತ್ತ, ವಾರಾಣಸಿ ಸೇರಿದಂತೆ ದೇಶದ ಹಲವೆಡೆ ಪ್ರತಿಭಟನೆ
- ಸಿಲಿಗುರಿ ಸುತ್ತಮುತ್ತ ಬಾಂಗ್ಲಾ ಪ್ರಜೆಗಳಿಗೆ ವಸತಿ ಸೌಕರ್ಯ ತಾತ್ಕಾಲಿಕವಾಗಿ ನಿಲ್ಲಿಸಲು ಪಶ್ಚಿಮ ಬಂಗಾಳದ ಹೋಟೆಲ್ ಉದ್ಯಮಿಗಳ ಸಂಘ ನಿರ್ಧಾರ
- ಶರೀಫ್ ಉಸ್ಮಾನ್ ಹಾದಿ ಹತ್ಯೆ ಖಂಡಿಸಿ ಢಾಕಾದಲ್ಲಿ ಬೃಹತ್ ಪ್ರತಿಭಟನೆ

ಸ್ಫೋಟ: ಮೃತರ ಸಂಖ್ಯೆ 3ಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಅಂಬಾವಿಲಾಸ ಅರಮನೆ ಮುಂಭಾಗದ ಜಯ ಮಾರ್ತಾಂಡ ದ್ವಾರದ ಬಳಿ ಗುರುವಾರ ರಾತ್ರಿ, ಬಲೂನ್‌ಗೆ ಹೀಲಿಯಂ ಗ್ಯಾಸ್ ತುಂಬುವ ಸಿಲಿಂಡರ್ ಸ್ಫೋಟದಿಂದ ಗಾಯಗೊಂಡಿದ್ದ ನಂಜನಗೂಡಿನ ಚಾಮಲಾಪುರ ಬೀದಿಯ ನಿವಾಸಿ ಮಂಜುಳಾ(28) ಮತ್ತು ಬೆಂಗಳೂರಿನ ಬ್ಯಾಡರಹಳ್ಳಿಯ ಲಕ್ಷ್ಮಿ(41) ಶುಕ್ರವಾರ ಮೃತಪಟ್ಟಿದ್ದು, ಇದರೊಂದಿಗೆ ಸಾವಿಗೀಡಾದವರ ಸಂಖ್ಯೆ ಮೂರಕ್ಕೇರಿದೆ.



ಲಕ್ಷ್ಮಿ ಮಂಜುಳಾ

ಉತ್ತರಪ್ರದೇಶದ ಕನೋಜ್ ಜಿಲ್ಲೆ ತೊಫಿಯ ಗ್ರಾಮದ ಸಲೀಂ(40) ಅರಮನೆ ಬಳಿ ಸೈಕಲ್‌ನಲ್ಲಿ ಹೀಲಿಯಂ ಬಲೂನ್ ಮಾರುತ್ತಿದ್ದರು.

8

ತನಿಖೆ ನಡೆಸಿ, ವರದಿಗೆ ಸೂಚನೆ

ಬೆಂಗಳೂರು: ಮೈಸೂರು ಅರಮನೆ ದ್ವಾರದ ಮುಂಭಾಗದಲ್ಲಿ ಗುರುವಾರ ಹೀಲಿಯಂ ಸಿಲಿಂಡರ್ ಸ್ಫೋಟ ಸಂಭವಿಸಿರುವ ಪ್ರಕರಣದ ವಿಸ್ತೃತ ತನಿಖೆ ನಡೆಸಿ, ವರದಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಹೀಲಿಯಂ ಬಲೂನು ಮಾರುತ್ತಿದ್ದದ್ದು ಲಖನೌ ವ್ಯಕ್ತಿ. ಕೆಲವೇ ದಿನಗಳ ಹಿಂದೆ ಆತ ಇಲ್ಲಿಗೆ ಬಂದು ಬಲೂನು ವ್ಯಾಪಾರ ಮಾಡುತ್ತಿದ್ದ. ಆತನಿಗೆ ಹೀಲಿಯಂ ಸಿಲಿಂಡರ್ ಹೇಗೆ ಲಭಿಸಿತು ಎಂಬುದರ ಬಗ್ಗೆ ಪರಿಶೀಲನೆ ನಡೆಸುವಂತೆ ಸೂಚಿಸಿದ್ದೇನೆ' ಎಂದು ತಿಳಿಸಿದರು.

ಬಸ್ ದುರಂತ: ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಗೋರ್ಲಡುಕು ಕ್ರಾಸ್ ಬಳಿ ಖಾಸಗಿ ಬಸ್ ಮತ್ತು ಕಂಟೇನರ್ ನಡುವೆ ಸಂಭವಿಸಿದ ಅಪಘಾತದಲ್ಲಿ ಗಂಭೀರವಾಗಿ ಗಾಯಗೊಂಡು ಹುಬ್ಬಳ್ಳಿಯ ಕೆಎಂಸಿ-ಆರ್‌ಐ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಸ್ ಚಾಲಕ ಹಾವೇರಿಯ ಮೊಹಮ್ಮದ್ ರಫೀಕ್ ಹುಲಗೂರ (45) ಮೃತಪಟ್ಟಿದ್ದಾರೆ. ಘಟನೆಯಲ್ಲಿ ಮೃತಪಟ್ಟವರ ಸಂಖ್ಯೆ ಏಳಕ್ಕೆ ಏರಿದಂತಾಗಿದೆ.

'ತುರ್ತುನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಮೊಹಮ್ಮದ್ ರಫೀಕ್ ಅವರ ಕಾಲು, ಹೊಟ್ಟೆಗೆ ಬಲವಾಗಿ ಪೆಟ್ಟು ಬಿದ್ದಿತ್ತು. ಬಹು ಅಂಗಾಂಗ ವೈಫಲ್ಯದಿಂದ ಚಿಕಿತ್ಸೆಗೆ ಸ್ಪಂದಿಸದೆ ಶುಕ್ರವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ಗಾಯಾಳು ಬಸ್ ಕ್ಲೀನರ್ ಮೊಹಮ್ಮದ್ ಸಾದಿಕ್ ಅವರಿಗೆ ಚಿಕಿತ್ಸೆ ಮುಂದುವರಿದಿದೆ' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಈಶ್ವರ ಹಸಬಿ ತಿಳಿಸಿದರು.



ಚಿತ್ರದುರ್ಗ ವರದಿ: ಅಪಘಾತದಲ್ಲಿ ಸುಟ್ಟು ಕರಕಲಾದವರ ಮೃತದೇಹಗಳ ಡಿಎನ್‌ಎ ಪರೀಕ್ಷೆಗಾಗಿ ಇಲ್ಲಿನ ವೈದ್ಯರ ತಂಡ ಹುಬ್ಬಳ್ಳಿಯ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ತೆರಳಿದೆ.

ಮೃತಪಟ್ಟವರ ಕುಟುಂಬ ಸದಸ್ಯರ ರಕ್ತದ ಮಾದರಿ ಹಾಗೂ ಮೃತದೇಹಗಳ ಮೂಳೆ ಮಾದರಿಗಳನ್ನು ಸಂಗ್ರಹಿಸಿದ್ದು, ಡಾ.ವೇಣು ಹಾಗೂ ಡಾ.ಅಜಯ್ ನೇತೃತ್ವದ ತಂಡ ಹುಬ್ಬಳ್ಳಿಗೆ ತೆರಳಿದೆ.

'ಡಿಎನ್‌ಎ ಪರೀಕ್ಷಾ ವರದಿ ಬರಲು ಎರಡು ದಿನ ಆಗುತ್ತದೆ. ನಂತರವಷ್ಟೇ ಮೃತದೇಹಗಳನ್ನು ಕುಟುಂಬ ಸದಸ್ಯರಿಗೆ ಹಸ್ತಾಂತರ ಮಾಡಲಾಗುವುದು. ಈ ವಿಷಯ ಕುಟುಂಬ ಸದಸ್ಯರ ಗಮನಕ್ಕೆ ತರಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ತಿಳಿಸಿದರು.

ಕುಟುಂಬ ಸದಸ್ಯರು ಈಗಾಗಲೇ ಮೃತದೇಹಗಳ ಗುರುತು ಪತ್ತೆ ಮಾಡಿದ್ದಾರೆ. ಆದರೂ ಪೊಲೀಸರು ನ್ಯಾಯಾಲಯದ ಅನುಮತಿಯೊಂದಿಗೆ ಡಿಎನ್‌ಎ ಪರೀಕ್ಷೆ ನಡೆಸಲು ಮುಂದಾಗಿದ್ದಾರೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಿಗ್ಗೆ, ರಾತ್ರಿಯ ವೇಳೆ ಚಳಿಯ ಅನುಭವ ಆಗಲಿದೆ. ಮುಂಜಾನೆ ಮಂಜು ಕವಿದ ವಾತಾವರಣ ಇರಲಿದೆ

ವರ್ಷಾಚರಣೆ: ಪೊಲೀಸರ ಹದ್ದಿನಕಣ್ಣು

ಮಹಾತ್ಮ ಗಾಂಧಿ ರಸ್ತೆ, ಚರ್ಚ್ ರಸ್ತೆ, ಕೋರಮಂಗಲದಲ್ಲಿ ಪೊಲೀಸ್ ಪಹರೆ

• ಆದಿತ್ಯ ಕೆ.ಎ.



ಕಳೆದ ವರ್ಷದಂತೆ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆಗೆ ಈ ಬಾರಿ ಮುಕ್ತ ಪ್ರವೇಶ ಇರುವುದಿಲ್ಲ. ನಿರೀಕ್ಷೆಗಿಂತಲೂ ಹೆಚ್ಚಿನ ಜನರು ಬಂದರೆ ಪ್ರವೇಶದ್ವಾರ ಬಂದ್ ಮಾಡಲಾಗುವುದು

ಸೀಮಾಂತ್‌ಕುಮಾರ್ ಸಿಂಗ್
ನಗರ ಪೊಲೀಸ್ ಕಮಿಷನರ್

ಬೆಂಗಳೂರು: ಕ್ರಿಸ್‌ಮಸ್ ಹಬ್ಬ ಮುಕ್ತಾಯವಾದ ಬೆನ್ನಲ್ಲೇ ನಗರವು ಹೊಸ ವರ್ಷದ ಸಂಭ್ರಮಕ್ಕೆ ತೆರೆದುಕೊಳ್ಳಲು ಸಜ್ಜುಗೊಳ್ಳುತ್ತಿದೆ.

ಡಿ.31ರ ರಾತ್ರಿ (ಬುಧವಾರ) ಯುವ ಸಮೂಹವನ್ನು ಸೆಳೆಯುವ ಮಹಾತ್ಮ ಗಾಂಧಿ ರಸ್ತೆ, ಚರ್ಚ್ ರಸ್ತೆ, ಕೋರಮಮಂಗಲದ ರಸ್ತೆಗಳು ವರ್ಷಾಚರಣೆಗೆ ಅಣಿಗೊಳ್ಳುತ್ತಿವೆ. ಪಬ್, ಕ್ಲಬ್, ರೆಸ್ಟೋರೆಂಟ್‌ಗಳಲ್ಲೂ ಭರ್ಜರಿ ಪಾರ್ಟಿಗೆ ತಯಾರಿ ನಡೆಯುತ್ತಿದೆ.

ಹೊಸ ವರ್ಷದ ಆಚರಣೆಗೆ ನಾಲ್ಕು ದಿನಗಳಷ್ಟೇ ಬಾಕಿಯಿದ್ದು, ನಗರ ದಾದ್ಯಂತ ಪೊಲೀಸ್ ಪಹರೆ ಹೆಚ್ಚಿಸ ಲಾಗಿದೆ. ವಾಹನ ತಪಾಸಣೆ ಬಿಗಿಗೊಳಿಸ ಲಾಗಿದೆ. ಯಾವುದೇ ಅಹಿತಕರ ಘಟನೆ ಗಳಿಗೆ ಆಸ್ಪದ ಆಗದಂತೆ ಪೊಲೀಸರು ಮುನ್ನೆಚ್ಚರಿಕೆ ಕೈಗೊಂಡಿದ್ದಾರೆ. ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್, ಕೇಂದ್ರ ವಲಯದ ಡಿಸಿಪಿ ಅಕ್ಷಯ್ ಹಾಕೇ, ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಅವರು ಎರಡು ದಿನಗಳಿಂದ ವಿವಿಧೆಡೆ ಭೇಟಿ ನೀಡಿ ಭದ್ರತಾ ವ್ಯವಸ್ಥೆ ಪರಿಶೀಲಿಸಿದ್ದಾರೆ.

ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಚರ್ಚ್ ರಸ್ತೆ, ಒಪೆರಾ ಜಂಕ್ಷನ್, ರೆಸ್ಟ್‌ಹೌಸ್ ರಸ್ತೆ, ಸೇಂಟ್ ಮಾರ್ಕ್ ರಸ್ತೆ, ರಿಚ್ಮಂಡ್ ರಸ್ತೆ, ರೆಸಿಡೆನ್ಸಿ ರಸ್ತೆಯಲ್ಲಿ ಬುಧವಾರದಂದು ನಡೆಯುವ ಸಂಭ್ರಮಾಚರಣೆಗೆ ಕಳೆದ ವರ್ಷಕ್ಕಿಂತ ಹೆಚ್ಚಿನ ಜನರು ಜಮಾವಣೆಗೊಳ್ಳುವ ನಿರೀಕ್ಷೆಯಿದೆ. ಅಲ್ಲಿ ಯಾವುದೇ ತೊಂದರೆ ಆಗದಂತೆ ಕ್ರಮ ತೆಗೆದುಕೊಳ್ಳುವಂತೆ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸೂಚನೆ ನೀಡಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪೊಲೀಸ್ ಕಮಿಷನರ್ ಅವರು ಬೈಕ್‌ನಲ್ಲಿ ತೆರಳಿ ಬಂದೋಬಸ್ತ್ ವ್ಯವಸ್ಥೆ ಪರಿಶೀಲಿಸಿದ್ದಾರೆ. ಅದರ ಬೆನ್ನಲ್ಲೇ ಶ್ವಾನ ದಳದ ಸಿಬ್ಬಂದಿ ಸೂಕ್ಷ್ಮ ಪ್ರದೇಶಗಳಲ್ಲಿ ವಿವಿಧೆಡೆ ಸಂಚಾರ ನಡೆಸಿ ಪರಿಶೀಲಿಸಿದ್ದಾರೆ.

ಸಂಭ್ರಮಾಚರಣೆ ನಡೆಯುವ ರಸ್ತೆಗಳಲ್ಲಿ ಬುಧವಾರ ಮಧ್ಯಾಹ್ನದ ಬಳಿಕ ವಾಹನ ನಿಲುಗಡೆಗೆ ನಿರ್ಬಂಧ ಇರಲಿದೆ. ದೂರದ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡಿ ಅಥವಾ ಮೆಟ್ರೊ ಮೂಲಕ ಬಂದು ಸಂಭ್ರಮಾಚರಣೆ ನಡೆಯುವ ಪ್ರದೇಶವನ್ನು ತಲುಪ ಬಹುದು ಎಂದು ಪೊಲೀಸರು ಮನವಿ ಮಾಡಿದರು.

ಹೆಚ್ಚುವರಿ ಸಿ.ಸಿ.ಟಿ.ವಿ ಅಳವಡಿಕೆ: ಸೂಕ್ಷ್ಮ ಪ್ರದೇಶ ಹಾಗೂ ಹೆಚ್ಚಿನ ಜನರು ಸೇರುವ ಪ್ರದೇಶಗಳಲ್ಲಿ ಹೆಚ್ಚುವರಿ ಸಿ.ಸಿ.ಟಿ.ವಿ ಅಳವಡಿಕೆ ಕಾರ್ಯವು ಪ್ರಗತಿಯಲ್ಲಿದೆ.

ಪಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ನೂತನ ವರ್ಷದ ಪಾರ್ಟಿ ಆಯೋಜಿಸ ಲಾಗಿದೆ. ಆಗಲೇ ನೋಂದಣಿ ಕಾರ್ಯವು ನಡೆಯುತ್ತಿದೆ. ಮೊದಲು ಬುಕ್ ಮಾಡಿದವರಿಗೆ ವಿಶೇಷ ರಿಯಾಯಿತಿ ಸಹ ಘೋಷಿಸಲಾಗಿದೆ.

ಎಲ್ಲೆಲ್ಲಿ ಆಚರಣೆ?: ಇಂದಿರಾನಗರದ 100 ಅಡಿ ರಸ್ತೆ, ಮಹದೇವಪುರದ ಐಟಿಪಿಎಲ್ ಮುಖ್ಯರಸ್ತೆ, ಗರುಡಾಚಾರ್ ಪಾಳ್ಯ, ಕೋರಮಂಗಲದ ನ್ಯಾಷನಲ್ ಗೇಮ್ ವಿಲೇಜ್– ಯುಕೊ ಬ್ಯಾಂಕ್ ರಸ್ತೆ, ವೈಡಿ ಮಠ ರಸ್ತೆ, ರಾಜಾಜಿನಗರದ ಓರಾಯನ್ ಮಾಲ್ ಎದುರೂ ಸಂಭ್ರಮಾಚರಣೆಗಳು ನಡೆಯಲಿವೆ. ಅಪಾರ್ಟ್‌ಮೆಂಟ್ ಆವರಣದಲ್ಲೂ ಆಚರಣೆಗೆ ಸಿದ್ಧತೆಗಳು ಭರದಿಂದ ಸಾಗುತ್ತಿವೆ.

ಹೊರ ಜಿಲ್ಲೆಗಳಿಂದ ಹೆಚ್ಚುವರಿ ಸಿಬ್ಬಂದಿ ಕರೆಸಿಕೊಳ್ಳಲಾಗುವುದು. ತರಬೇತಿ ಸಿಬ್ಬಂದಿ, ಕೆಎಸ್‌ಆರ್‌ಪಿ ತುಕಡಿಗಳನ್ನು ಬಂದೋಬಸ್ತ್‌ಗೆ ಬಳಸಿಕೊಳ್ಳಲಾಗುವುದು. ಹೋಟೆಲ್, ಪಬ್–ಕ್ಲಬ್ ಮಾಲೀಕರ ಸಭೆ ನಡೆಸಿ ಸಲಹೆ, ಸೂಚನೆ ನೀಡಲಾಗಿದೆ. ಸೂಚನೆ ಪಾಲನೆ ಮಾಡದ ಮಾಲೀಕರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪೊಲೀಸ್ ಮೂಲಗಳು ಹೇಳಿವೆ.



ಕೋರಮಂಗಲದಲ್ಲಿ ಬಂದೋಬಸ್ತ್ ವ್ಯವಸ್ಥೆ ಪರಿಶೀಲಿಸಿದ ಪೊಲೀಸ್ ಅಧಿಕಾರಿಗಳು

ಮಹಿಳೆಯರ ಸುರಕ್ಷತೆಗೆ ಕ್ರಮ

ಸಂಭ್ರಮಾಚರಣೆಗೆ ಬರುವ ಮಕ್ಕಳು, ಮಹಿಳೆಯರ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗುವುದು. ಅಲ್ಲಲ್ಲಿ ಸುರಕ್ಷತಾ ಟೆಂಟ್ ನಿರ್ಮಾಣ ಕಾರ್ಯ ನಡೆಯುತ್ತಿದೆ. ಆಂಬುಲೆನ್ಸ್, ವೈದ್ಯಕೀಯ ಸಿಬ್ಬಂದಿಯನ್ನು ನಿಯೋಜಿಸಲಾಗುವುದು. ಅಂದು ರಾತ್ರಿ 12 ಗಂಟೆ ಕಳೆದ ಬಳಿಕ ಸ್ಥಳದಿಂದ ತೆರಳುವಂತೆ ಸೂಚನೆ ನೀಡಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಮೇಲ್ಸೇತುವೆ ಬಂದ್

ಬುಧವಾರ ರಾತ್ರಿ ನಗರದ ಎಲ್ಲ ಮೇಲ್ಸೇತುವೆಗಳಲ್ಲಿ ವಾಹನ ಸಂಚಾರ ಬಂದ್ ಮಾಡಲಾಗುತ್ತದೆ. ಅಲ್ಲದೇ ಉದ್ಯಾನಗಳಿಗೂ ಪ್ರವೇಶ ನಿರ್ಬಂಧ ಇರಲಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಾರ್ಗಸೂಚಿ ಪಾಲಿಸಲು ಪಬ್ ಮಾಲೀಕರಿಗೆ ಸೂಚನೆ

ರಾತ್ರಿ 1ರ ವರೆಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷಾಚರಣೆ ಹಿನ್ನೆಲೆಯಲ್ಲಿ ನಗರ ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಬಾರ್, ಪಬ್, ಹೋಟೆಲ್ ಹಾಗೂ ಕಾರ್ಯಕ್ರಮ ಸಂಘಟಿಸುವ ಇತರೆ ಸ್ಥಳಗಳ ಮಾಲೀಕರ ಸಭೆ ಶುಕ್ರವಾರ ನಡೆಯಿತು.

ಬಾರ್ ಮತ್ತು ಪಬ್‌ಗಳಿಗೆ ಬುಧವಾರ ರಾತ್ರಿ 1ರವರೆಗೆ ಅವಕಾಶ ಕಲ್ಪಿಸಲಾಗುವುದು. ಎಲ್ಲ ಮಾಲೀಕರು ಮುನ್ನೆಚ್ಚರಿಕೆ ವಹಿಸಬೇಕು. ಯಾವುದೇ ಕಾರಣಕ್ಕೂ ಅಹಿತಕರ ಘಟನೆಗಳಿಗೆ ಅವಕಾಶ ನೀಡಬಾರದು ಎಂದು ಸಭೆಯಲ್ಲಿ ಸೂಚಿಸಲಾಯಿತು.

ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಮಾತನಾಡಿ, ಉಪವಿಭಾಗ, ಠಾಣಾ ವ್ಯಾಪ್ತಿಯಲ್ಲಿ ಎಲ್ಲಾ ಹೋಟೆಲ್, ಪಬ್ ಮತ್ತು ಬಾರ್ ಮಾಲೀಕರ ಸಭೆ ನಡೆಸಲಾಗಿದೆ. ಹೆಣ್ಣು ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕೆಂದು ಸೂಚಿಸಲಾಗಿದೆ. ಪಬ್, ಕ್ಲಬ್ ಹಾಗೂ ರೆಸ್ಟೋರೆಂಟ್‌ಗಳ ವ್ಯವಸ್ಥಾಪಕರು, ಸಿಬ್ಬಂದಿ ಮದ್ಯಪಾನ ಮಾಡಿರಬಾರದೆಂದು ಮಾಲೀಕರಿಗೆ ಸೂಚಿಸಲಾಗಿದೆ ಎಂದರು.

ಪಟಾಕಿ ಸಿಡಿಸುವಂತಿಲ್ಲ. ಕಾನೂನುಬಾಹಿರ ಪಾರ್ಟಿಗಳಿಗೆ ಅವಕಾಶ ಇಲ್ಲ. ಪ್ರಚೋದನಕಾರಿ ಹಾಡು ಹಾಕಬಾರದು. ಕುಟುಂಬ ಸದಸ್ಯರಿಗೆ, ಸ್ನೇಹಿತರಿಗೆ ಬೇರೆ ವ್ಯವಸ್ಥೆ ಇರಬೇಕು. ಕಾರ್ಯಕ್ರಮದ ಆಯೋಜನೆಯ ಬಗ್ಗೆ ಪೊಲೀಸರಿಗೆ ತಿಳಿಸಬೇಕು. ಜವಾಬ್ದಾರಿಯಿಂದ ಹೊಸ ವರ್ಷಾಚರಣೆ ಮಾಡಬೇಕು. ಬಾರ್ ಹಾಗೂ ಪಬ್ ಮಾಲೀಕರು ಹೆಚ್ಚುವರಿ ಸಮಯ ಕೇಳಿದ್ದರು. ರಾತ್ರಿ 1ರ ವರೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ಮಾಹಿತಿ ನೀಡಿದರು.

‘ಮಾದಕ ವಸ್ತುಗಳ ಸೇವನೆ, ಮಾರಾಟ ಅಥವಾ ಸಂಗ್ರಹದ ಕುರಿತು ಮಾಹಿತಿ ಲಭ್ಯವಾದಲ್ಲಿ ತಕ್ಷಣವೇ ಸ್ಥಳೀಯ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಉಲ್ಲಂಘನೆ ಕಂಡುಬಂದಲ್ಲಿ ಆಯೋಜಕರು ಹಾಗೂ ಕಟ್ಟಡದ ಮಾಲೀಕರು/ನಿರ್ವಾಹಕರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

‘ಗುಂಪು ಸೇರಿ ರೇವ್ ಪಾರ್ಟಿ ನಡೆಸಲು ಅವಕಾಶ ನೀಡಬಾರದು. ಯಾವುದೇ ಗಲಾಟೆ ಸಂಭವಿಸಿದಲ್ಲಿ ತಕ್ಷಣವೇ ಪೊಲೀಸರಿಗೆ ಮಾಹಿತಿ ನೀಡಬೇಕು. ನಗರ ಪೊಲೀಸರು ವಿತರಿಸುವ ಕ್ಯೂಆರ್ ಕೋಡ್ ಅನ್ನು ನಾಗರಿಕರಿಗೆ ಕಾಣುವಂತಹ ಸ್ಥಳಗಳಲ್ಲಿ ಅಳವಡಿಸಬೇಕು’ ಎಂದು ಅವರು ಹೇಳಿದರು.

ಮಾಲೀಕರಿಗೆ ಸೂಚನೆ...

- ಸ್ಥಳದ ಸಾಮರ್ಥ್ಯಕ್ಕೆ ಅನುಗುಣವಾಗಿ ಮಾತ್ರ ಪ್ರವೇಶ ಟಿಕೆಟ್ ಹಾಗೂ ಪಾಸ್ ವಿತರಿಸಬೇಕು
- ಬಾಲಕ/ಬಾಲಕಿಯರಿಗೆ ಮದ್ಯ ಪೂರೈಸುವಂತಿಲ್ಲ
- ತಪಾಸಣೆ ಬಿಗಿಗೊಳಿಸಬೇಕು
- ಸಂಶಯಾಸ್ಪದ ವಸ್ತುಗಳು ಹಾಗೂ ವ್ಯಕ್ತಿಗಳು ಕಂಡುಬಂದರೆ ಪೊಲೀಸರಿಗೆ ಮಾಹಿತಿ ನೀಡಬೇಕು
- ಕಾರ್ಯಕ್ರಮದ ಸ್ಥಳದಲ್ಲಿ ಅಗ್ನಿ ನಿರೋಧಕ ಉಪಕರಣ ಅಳವಡಿಸಬೇಕು. ಅಗ್ನಿ ಅವಘಡಗಳು ಹಾಗೂ ಕಾಲ್ತುಳಿತ ಸಂಭವಿಸದಂತೆ ಎಚ್ಚರಿಕೆ ವಹಿಸಬೇಕು
- ವಿದ್ಯುತ್ ಸಂಪರ್ಕ ಕಡಿತವಾದ ವೇಳೆ ಪರ್ಯಾಯ ವಿದ್ಯುತ್ ಸಂಪರ್ಕ ವ್ಯವಸ್ಥೆ ಹೊಂದಿರಬೇಕು
- ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿರುವ ಸ್ಥಳದಲ್ಲಿ ಮಹಿಳಾ ಭದ್ರತಾ ಸಿಬ್ಬಂದಿ ನಿಯೋಜಿಸಬೇಕು
- ಪ್ರವೇಶ ದ್ವಾರ, ನಿರ್ಗಮನ ದ್ವಾರ, ವಾಹನ ನಿಲುಗಡೆ ಸ್ಥಳ ಹಾಗೂ ಕಾರ್ಯಕ್ರಮದ ಸ್ಥಳಗಳಲ್ಲಿ ನೂಕುನುಗ್ಗಲು ಉಂಟಾಗದಂತೆ ಎಚ್ಚರ ವಹಿಸಬೇಕು
- ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಿ, ದೃಶ್ಯಾವಳಿಗಳನ್ನು ಕನಿಷ್ಠ 30 ದಿನಗಳವರೆಗೆ ಸಂಗ್ರಹಿಸುವ ವ್ಯವಸ್ಥೆ ಮಾಡಬೇಕು

ತಾವರೆಕೆರೆ ಕೃಷಿ ಪತ್ತಿನ ಸಹಕಾರ ಸಂಘಕ್ಕೆ ರತ್ನಮ್ಮ ಆಯ್ಕೆ

ಕೆಂಗೇರಿ: ಯಶವಂತಪುರ ವಿಧಾನಸಭಾ ಕ್ಷೇತ್ರದ ತಾವರೆಕೆರೆ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆಯಲ್ಲಿ ಸಾಮಾನ್ಯ ಸಾಲಗಾರರ ಕ್ಷೇತ್ರದ ನಿರ್ದೇಶಕಿಯಾಗಿ ರತ್ನಮ್ಮ ಮಂಜುನಾಥ್ ಗೆಲುವು ಸಾಧಿಸಿದ್ದಾರೆ.

ಮಂಜುನಾಥ್ ಅವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ರತ್ನಮ್ಮ 444 ಮತ ಪಡೆದರೆ, ಟಿ.ಸಿ ಉಮೇಶ್ ಜಿಂದಗಿ 68 ಮತ ಪಡೆದರು. ಟಿ.ವಿ. ನರಸಿಂಹಯ್ಯ-6, ಟಿ.ಎಚ್ ವೆಂಕಟೇಶಮೂರ್ತಿ-1 ಮತ ಗಳಿಸಿದರೆ, ಮೂರು ಮತ ತಿರಸ್ಕೃತಗೊಂಡಿವೆ ಎಂದು ಚುನಾವಣಾ ಅಧಿಕಾರಿ ಅಭಿಜಿತ್ ಎಸ್.ಆರ್ ತಿಳಿಸಿದರು.

ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ಟಿ.ಎಲ್. ಕೆಂಪೇಗೌಡ, ಸಂಘದ ಮಾಜಿ ಅಧ್ಯಕ್ಷ ಟಿ.ವಿ.ಸಿದ್ದಪ್ಪ, ಟಿ.ಎಲ್ ಚಂದ್ರಶೇಖರ್, ಬೆಂಗಳೂರಯ್ಯ, ಗ್ರಾ.ಪಂ ಸದಸ್ಯರಾದ ಕೃಷ್ಣಮೂರ್ತಿ, ಜಯಕುಮಾರ್, ಲಕ್ಷ್ಮೀಕಾಂತ ಉಪಸ್ಥಿತರಿದ್ದರು.

ಮೋಂಬತ್ತಿ ಹಿಡಿದು ಪ್ರತಿಭಟನೆ...

ಪ್ರಜಾವಾಣಿ ಚಿತ್ರ


ಹುಬ್ಬಳ್ಳಿಯಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಖಂಡಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ರಾತ್ರಿ ವಿವಿಧ ಸಂಘಟನೆಗಳ ಮುಖಂಡರು ಹಾಗೂ ವಿದ್ಯಾರ್ಥಿಗಳು ಮೋಂಬತ್ತಿ ಹಿಡಿದು ಪ್ರತಿಭಟಿಸಿದರು

ವಿದ್ಯುತ್ ನಿಲುಗಡೆ

ಬೆಂಗಳೂರು: ಮಂಡೂರು ಹಾಗೂ ಕೋನದಾಸಪುರ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈ ಮಾಸಿಕ ನಿರ್ವಹಣೆ ಇರುವುದರಿಂದ ಭಾನುವಾರ (ಡಿ.28) ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ನಗರದ ವಿವಿಧೆಡೆ ವಿದ್ಯುತ್ ನಿಲುಗಡೆ ಆಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಪ್ರದೇಶಗಳು: ಮಂಡೂರು ಕೇಂದ್ರ ವ್ಯಾಪ್ತಿಯ ಮಂಡೂರು, ಬೊಮ್ಮೇನಹಳ್ಳಿ, ಬೆಂಡಗಾನಹಳ್ಳಿ, ಪ್ರೆಸ್ಟೀಜ್ ಟ್ರಾಂಕ್ವಿಲಿಟಿ, ಬ್ರಿಗೇಡ್ ಭುವನವಿಸ್ಟ್, ಗುಂಡೂರು, ಬೈಯ್ಯಪ್ಪನಹಳ್ಳಿ, ಕಮ್ಮಸಂದ್ರ, ಚಿಕ್ಕಸಂದ್ರ, ಬಿದರಹಳ್ಳಿ, ಮಾರಸಂದ್ರ ಹಾಗೂ ಸುತ್ತಮುತ್ತಲಿನ ಪ್ರದೇಶ.

ಕೋನದಾಸಪುರ ಕೇಂದ್ರ ವ್ಯಾಪ್ತಿಯ ಆವಲಹಳ್ಳಿ, ಚಿಮಸಂದ್ರ, ಹಿರಂಡಹಳ್ಳಿ, ಕಿತ್ತಗನೂರು, ಹಳೆಹಳ್ಳಿ, ಕನ್ನಮಂಗಲ, ಶೀಗೆಹಳ್ಳಿ ಹಾಗೂ ಸುತ್ತಲಿನ ಪ್ರದೇಶ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕೆ.ಜಿ ರಸ್ತೆಯಲ್ಲಿ ಬಿಒಬಿ ‘ಫಿಜಿಟಲ್’ ಶಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ), ತನ್ನ ಎರಡನೇ ಫಿಜಿಟಲ್ ಶಾಖೆಯನ್ನು ನಗರದ ಕೆ.ಜಿ ರಸ್ತೆಯಲ್ಲಿ ಉದ್ಘಾಟಿಸಿದೆ.

ಈ ಫಿಜಿಟಲ್ ಶಾಖೆಯು ಅದರ ವರ್ಚುವಲ್ ರಿಲೇಶನ್‌ಶಿಪ್ ಮ್ಯಾನೇಜರ್ ‘ಅದಿತಿ’ ಮೂಲಕ ವರ್ಚುವಲ್ ನೆರವು ಒದಗಿಸಲಿದೆ ಎಂದು ಬ್ಯಾಂಕ್ ತಿಳಿಸಿದೆ.

ಈ ಶಾಖೆಯಲ್ಲಿ ಗ್ರಾಹಕರು ಪ್ಯಾನ್ ನವೀಕರಣ, ಇ–ಮೇಲ್ ಮೂಲಕ ಖಾತೆ ಹೇಳಿಕೆ ಸ್ವೀಕರಿಸುವುದು, ಟಿಡಿಎಸ್ ಪ್ರಮಾಣ ಪತ್ರ ಸ್ವೀಕಾರ, ನಾಮಿನಿ ನವೀಕರಣ ಇತ್ಯಾದಿ ಸೇವೆಗಳನ್ನು ಪಡೆಯಬಹುದು ಎಂದು ಹೇಳಿದೆ.

ಗೃಹ ಸಾಲದ ಬಗ್ಗೆ ವಿಚಾರಣೆ, ಉಳಿತಾಯ ಖಾತೆ, ಅವಧಿ ಠೇವಣಿ, ಕಾರು ಸಾಲ ಮುಂತಾದ ಎಲ್ಲಾ ವೈಯಕ್ತಿಕಗೊಳಿಸಿದ ಮತ್ತು ಹಣಕಾಸುಯೇತರ ಸೇವೆಗಳ ಸಹಾಯಕ್ಕಾಗಿ ಗ್ರಾಹಕರು ವಿಡಿಯೊ ಕರೆ ಮೂಲಕ ಬ್ಯಾಂಕ್‌ನ ಸಂಪರ್ಕ ಕೇಂದ್ರವನ್ನು ನೇರವಾಗಿ ಸಂಪರ್ಕಿಸಬಹುದು ಎಂದು ಬ್ಯಾಂಕ್ ತಿಳಿಸಿದೆ.

‘ಕೆ.ಜಿ.ರಸ್ತೆಯಲ್ಲಿರುವ ನಮ್ಮ ಫಿಜಿಟಲ್ ಶಾಖೆಯಲ್ಲಿ ಗ್ರಾಹಕರು ದಿನನಿತ್ಯದ ಬ್ಯಾಂಕಿಂಗ್ ವಹಿವಾಟುಗಳನ್ನು ಡಿಜಿಟಲ್ ಮತ್ತು ತ್ವರಿತವಾಗಿ ಪಡೆದುಕೊಳ್ಳಬಹುದು’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ದೇಬದತ್ತ ಚಂದ್ ಹೇಳಿದ್ದಾರೆ.

ಬ್ಯಾಂಕ್ ಆಫ್ ಬರೋಡಾದ ಬೆಂಗಳೂರು ವಲಯದ ಮುಖ್ಯ ಮಹಾಪ್ರಬಂಧಕ ಮತ್ತು ವಲಯ ಮುಖ್ಯಸ್ಥ ಮನೋಜ್ ಚಯಾನಿ, ಬೆಂಗಳೂರು ವಲಯದ ಮಹಾಪ್ರಬಂಧಕ ಅನಿಲ್ ಕುಮಾರ್ ಶ್ರೀವಾಸ್ತವ, ಉಪ ಮಹಾಪ್ರಬಂಧಕ ಮತ್ತು ಪ್ರಾದೇಶಿಕ ಮುಖ್ಯಸ್ಥ (ಬೆಂಗಳೂರು ಕೇಂದ್ರ ಪ್ರಾದೇಶಿಕ) ಶೈಲೇಂದ್ರ ಕುಮಾರ್ ಸಿಂಗ್ ಮತ್ತು ಬ್ಯಾಂಕ್‌ನ ಇತರೆ ಹಿರಿಯ ಕಾರ್ಯನಿರ್ವಾಹಕರು ಮತ್ತು ವಲಯದ ಸಿಬ್ಬಂದಿ ಇದ್ದರು.

ಜ.9ರಿಂದ ಮೂರು ದಿನ ಧಾತು ಅಂತರರಾಷ್ಟ್ರೀಯ ಬೊಂಬೆಯಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಕಪುರ ರಸ್ತೆಯ ಸಿಲ್ಕ್ ಇನ್‌ಸ್ಟಿಟ್ಯೂಟ್ ಮೆಟ್ರೊ ನಿಲ್ದಾಣ ಸಮೀಪದಲ್ಲಿರುವ ಮಂಡಲ ಸಾಂಸ್ಕೃತಿಕ ಕೇಂದ್ರದಲ್ಲಿ ಧಾತು ಬೊಂಬೆಗಳ ಥಿಯೇಟರ್ ಜನವರಿ 9ರಿಂದ ಮೂರು ದಿನ ಧಾತು ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವ ಹಮ್ಮಿಕೊಂಡಿದೆ.

ರಾಜ್ಯದ ನಾನಾ ಭಾಗಗಳ ಕಲಾವಿದರು ತಾವೇ ರೂಪಿಸಿಕೊಂಡಿರುವ ಬೊಂಬೆಗಳನ್ನು ಬಳಸಿ ರಾಮಾಯಣ, ಮಹಾಭಾರತ ಸಹಿತ ಪ್ರಮುಖ ಪ್ರಸಂಗಗಳ ಪ್ರದರ್ಶನ ನೀಡುವರು. ಇಟಲಿಯ ಕಲಾವಿದರ ತಂಡವೂ ಬೊಂಬೆ ಪ್ರದರ್ಶನ ನೀಡಲಿದೆ.

ಈಚನೂರು ಶೈಲಿಯ ತಂತಿ ಬೊಂಬೆ, ಮೂಡಲಪಾಯ, ದೊಡ್ಡಾಟ, ಯಕ್ಷಗಾನ, ಸೂತ್ರದ ಬೊಂಬೆ, ಮರದ ಬೊಂಬೆ, ಸಲಾಕಿ ಬೊಂಬೆ, ಕೀಲು ಬೊಂಬೆ, ತಾರಮ್ಮಯ್ಯ ಬೊಂಬೆಗಳು ಉತ್ಸವದ ಆಕರ್ಷಣೆಯಾಗಲಿವೆ.

ಅಮೆರಿಕದಲ್ಲಿ ಎಂಜಿನಿಯರ್ ಆಗಿರುವ ನಗರದ ಅನುಪಮಾ ಹೊಸಕೆರೆ ಅವರು, ಮೂರು ದಶಕದಿಂದ ಕರ್ನಾಟಕ ಮಾತ್ರವಲ್ಲದೇ ದೇಶದ ನಾನಾ ರಾಜ್ಯಗಳ ಬೊಂಬೆಗಳು, ಹಲವು ದೇಶಗಳ ಬೊಂಬೆಗಳನ್ನು ಸಂಗ್ರಹಿಸಿ ನಾಲ್ಕು ವರ್ಷದ ಹಿಂದೆ ತಲಘಟ್ಟಪುರದಲ್ಲಿ ಧಾತು ಬೊಂಬೆಗಳ ಥಿಯೇಟರ್ ರೂಪಿಸಿದ್ದಾರೆ.

ಥಿಯೇಟರ್‌ನಲ್ಲಿ ನಿಯಮಿತವಾಗಿ ಬೊಂಬೆಗಳ ಪ್ರದರ್ಶನಕ್ಕೂ ಅವಕಾಶವಿದೆ. ಮಕ್ಕಳು, ಆಸಕ್ತರಿಗೂ ವಾರಾಂತ್ಯ ಬೊಂಬೆಗಳ ಕುರಿತ ಕಾರ್ಯಾಗಾರಗಳನ್ನು ಆಯೋಜಿಸಲಾಗುತ್ತಿದೆ. 16ನೇ ಆವೃತ್ತಿಯ ಬೊಂಬೆಯಾಟ ಉತ್ಸವಕ್ಕೆ ಥಿಯೇಟರ್ ಸಿದ್ಧವಾಗುತ್ತಿದೆ ಎಂದು ಅನುಪಮಾ ತಿಳಿಸಿದರು.


ಕಾರ್ಯಾಗಾರದಲ್ಲಿ ಗಾಯತ್ರಿ ರಾವ್ ಅವರು ಬೊಂಬೆಗೆ ಉಡುಪು ಸಿದ್ಧಪಡಿಸುವುದನ್ನು ಹೇಳಿಕೊಟ್ಟರು

ಚಟಿಕೆ ಸುದ್ದಿ

ಬುಲೆಟ್ ಬೈಕ್ ಎಳೆದೊಯ್ದ ಕಾರು

ಬೆಂಗಳೂರು: ಸುಮನಹಳ್ಳಿ ಮೇಲ್ಸೇತುವೆಯಲ್ಲಿ ಎಸ್‌ಯುವಿ ಕಾರಿನ ಚಾಲಕ ಅಡ್ಡಾದಿಡ್ಡಿ ಚಾಲನೆ ಮಾಡಿದ್ದರಿಂದ ಬುಲೆಟ್ ಬೈಕ್ ಸಿಲುಕಿಕೊಂಡಿತ್ತು. ರಸ್ತೆ ಉದ್ದಕ್ಕೂ ಬೈಕ್ ಎಳೆದುಕೊಂಡು ಹೋಗಿದ್ದು ಅದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಕುಣಿಗಲ್‌ನ ಶ್ರೀನಿವಾಸ್ ಮದ್ಯದ ಅಮಲಿನಲ್ಲಿ ಎಸ್‌ಯುವಿ ಕಾರು ಚಲಾಯಿಸಿಕೊಂಡು ಸುಮನಹಳ್ಳಿ ಮೇಲ್ಸೇತುವೆಯಲ್ಲಿ ಅಡ್ಡಾದಿಡ್ಡಿಯಾಗಿ ಚಲಾಯಿಸುತ್ತಿದ್ದರು. ಕಾರಿನ ಮುಂದೆ ಚಲಿಸುತ್ತಿದ್ದ ಬುಲೆಟ್ ಬೈಕ್‌ಗೆ ಡಿಕ್ಕಿ ಹೊಡೆದಿದ್ದರು. ಡಿಕ್ಕಿ ಹೊಡೆದ ರಭಸಕ್ಕೆ ಬೈಕ್ ಸವಾರ ರೋಹಿತ್ ರಸ್ತೆಗೆ ಬಿದ್ದಿದ್ದರು. ಇತ್ತ ಬುಲೆಟ್ ಬೈಕ್ ಕಾರಿನ ಬಾನೆಟ್‌ಗೆ ಸಿಲುಕಿಕೊಂಡಿತ್ತು.

ಇಷ್ಟಾದರೂ ಕಾರು ನಿಲ್ಲಿಸದೇ ಶ್ರೀನಿವಾಸ್, ಬುಲೆಟ್ ಬೈಕ್ ಅನ್ನು ಸುಮಾರು ದೂರದ ವರೆಗೆ ಎಳೆದುಕೊಂಡು ಹೋಗಿದ್ದಾರೆ. ಕಾರಿನ ಪಕ್ಕದಲ್ಲಿದ್ದ ಮತ್ತೊಂದು ಕಾರಿನವರು ಎಚ್ಚರಿಕೆ ನೀಡಿದ್ದರೂ ಕಾರು ನಿಲುಗಡೆ ಮಾಡಿರಲಿಲ್ಲ. ನಾಯಂಡಹಳ್ಳಿ ಜಂಕ್ಷನ್ ಬಳಿ ಸಾರ್ವಜನಿಕರು ಕಾರನ್ನು ಅಡ್ಡಗಟ್ಟಿ ನಿಲ್ಲಿಸಿದ್ದರು. ಶ್ರೀನಿವಾಸ್‌ಗೆ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ.

ಮದ್ಯ ಸೇವನೆ 1,784 ಮಂದಿ ವಿರುದ್ಧ ಪ್ರಕರಣ

ಬೆಂಗಳೂರು: ಪಾನಮತ್ತರಾಗಿ ವಾಹನ ಚಾಲನೆ ಮಾಡುತ್ತಿದ್ದವರ ವಿರುದ್ಧ ಕಾರ್ಯಾಚರಣೆ ತೀವ್ರಗೊಳಿಸಿರುವ ನಗರ ಸಂಚಾರ ಪೊಲೀಸರು, ನಾಲ್ಕು ದಿನಗಳಲ್ಲಿ ನಿಯಮ ಉಲ್ಲಂಘಿಸಿದ್ದ 1,784 ವಾಹನ ಚಾಲಕರು ಹಾಗೂ ದ್ವಿಚಕ್ರ ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.



ಡಿ.22ರಿಂದ 25ರ ವರೆಗೆ ವಿಶೇಷ ಕಾರ್ಯಾಚರಣೆ ನಡೆಸಲಾಯಿತು. ಈ ಅವಧಿಯಲ್ಲಿ 1,27,938 ವಾಹನಗಳನ್ನು ತಪಾಸಣೆ ನಡೆಸಿ, ತಪ್ಪಿತಸ್ಥರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಅಪಘಾತಗಳನ್ನು ತಡೆಗಟ್ಟುವ ಉದ್ದೇಶದಿಂದ ಈ ರೀತಿಯ ಕಾರ್ಯಾಚರಣೆ ಮುಂದುವರೆಸಲಾಗುವುದು ಎಂದು ಪೊಲೀಸರು ಹೇಳಿದರು.

ಮಹಿಳೆ ಕೊಲೆ, ಸಹೋದ್ಯೋಗಿ ಸೆರೆ

ಮದುವೆಯಾಗು ಎಂದು ಒತ್ತಾಯಿಸಿದ್ದಕ್ಕೆ ಕೃತ್ಯ ಎಸಗಿದ ಪ್ರಿಯಕರ

ಪ್ರಜಾವಾಣಿ ವಾರ್ತೆ


ಮಮತಾ


ಸುಧಾಕರ್

ಬೆಂಗಳೂರು: ಮಹಿಳೆಯ ಕತ್ತು ಕೊಯ್ದು ಕೊಲೆ ಮಾಡಿದ್ದ ಸಹೋದ್ಯೋಗಿಯನ್ನು ಕುಮಾರಸ್ವಾಮಿ ಲೇಔಟ್ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕಿನ ಮಮತಾ (39) ಕೊಲೆಯಾದವರು.

ಕೊಲೆ ಆರೋಪದಡಿ ಮಮತಾ ಅವರೊಂದಿಗೆ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಹಾಸನದ ಅರಸೀಕೆರೆಯ ಕತ್ರಿಗುಪ್ಪೆ ನಿವಾಸಿ ಸುಧಾಕರ್ (26) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ಕೆ.ಎಸ್.ಲೇಔಟ್‌ನ ಪ್ರಗತಿಪುರದ ಮನೆಯಲ್ಲಿ ಡಿ.24ರ ರಾತ್ರಿ ಮಹಿಳೆಯ ಕತ್ತು ಸೀಳಿ ಕೊಲೆ ಮಾಡಿ ಆರೋಪಿ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಒಂದು ವರ್ಷದಿಂದ ಮಮತಾ ಅವರು ಕೆಲಸ ಮಾಡುತ್ತಿದ್ದರು. ತನ್ನ ಸ್ನೇಹಿತೆಯೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಡಿ.24ರಂದು ಮಮತಾ ಅವರ ಸ್ನೇಹಿತೆ ಊರಿಗೆ ತೆರಳಿದ್ದರು. ಅಂದು ಮನೆಗೆ ನುಗ್ಗಿದ್ದ ಆರೋಪಿ ಕೊಲೆ ಮಾಡಿ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

ಮದುವೆ ಆಗುವಂತೆ ಒತ್ತಡ ಹೇರಿದ್ದ ಮಹಿಳೆ: ಸುಧಾಕರ್ ಹಾಗೂ ಮಮತಾ ಇಬ್ಬರೂ ಸ್ಟಾಫ್ ನರ್ಸ್ ಆಗಿ ಕೆಲಸ ಮಾಡಿಕೊಂಡಿದ್ದರು ಎಂಬುದು ಗೊತ್ತಾಗಿದೆ. ಒಂದು ವರ್ಷದಿಂದ ಪರಸ್ಪರ ಪ್ರೀತಿಸುತ್ತಿದ್ದರು. ಇತ್ತೀಚೆಗೆ ಬೇರೆ ಯುವತಿಯ ಜತೆಗೆ ಆರೋಪಿ ಸುಧಾಕರ್ ನಿಶ್ಚಿತಾರ್ಥ ಮಾಡಿಕೊಂಡಿದ್ದ. ಈ ವಿಚಾರ ತಿಳಿದಿದ್ದ ಮಮತಾ ಅವರು ತನ್ನನ್ನೇ ಮದುವೆ ಆಗುವಂತೆ ಸುಧಾಕರ್ ಮೇಲೆ ಒತ್ತಡ ಹೇರುತ್ತಿದ್ದರು. ಇದರಿಂದ ಭಯಗೊಂಡು ಮಮತಾ ಅವರು ನೆಲಸಿದ್ದ ಮನೆಗೆ ಆರೋಪಿ ಬಂದು ಕೊಲೆ ಮಾಡಿ ಪರಾರಿ ಆಗಿದ್ದ ಎಂದು ಪೊಲೀಸರು ಹೇಳಿದರು.

ಆರೋಪಿ ಸಿಕ್ಕಿ ಬಿದ್ದಿದ್ದು ಹೇಗೆ?

ಕೊಲೆ ಮಾಡಿದ ಬಳಿಕ ಆರೋಪಿ ಸುಧಾಕರ್, ತನಗೇನೂ ಗೊತ್ತೇ ಇಲ್ಲ ಎಂಬಂತೆ ಓಡಾಡಿಕೊಂಡಿದ್ದ. ಮೃತದೇಹ ಸ್ಥಳಾಂತರಿಸುವ ವೇಳೆಯೂ ಪೊಲೀಸರ ಜೊತೆಗಿದ್ದ. ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ್ ಅವರ ಮಾರ್ಗದರ್ಶನದಲ್ಲಿ ತನಿಖೆ ಕೈಗೆತ್ತಿಕೊಂಡ ಪೊಲೀಸರು, ಮಮತಾ ಅವರ ಮೊಬೈಲ್ ಕರೆಗಳ ವಿವರ ಸಂಗ್ರಹಿಸಿದ್ದರು. ಜೊತೆಗೆ ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯಾವಳಿಗಳನ್ನೂ ಪರಿಶೀಲಿಸಿದ್ದರು. ಆ ವೇಳೆ ಸುಧಾಕರ್ ಮನೆಗೆ ಬಂದು ಹೋಗಿರುವುದು ದೃಢಪಟ್ಟಿತ್ತು. ಬಳಿಕ ಆತನನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಕೊಲೆ ರಹಸ್ಯ ಬಯಲಾಗಿದೆ.

ನವ ವಿವಾಹಿತೆ ಸಾವು: ಶವವಿಟ್ಟು ಪ್ರತಿಭಟನೆ

ಬೆಂಗಳೂರು: ಪತಿ ಹಾಗೂ ಅವರ ಕುಟುಂಬಸ್ಥರ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಯತ್ನಿಸಿ ಆಸ್ಪತ್ರೆಗೆ ದಾಖಲಾಗಿದ್ದ ನವ ವಿವಾಹಿತೆ ಗಾನವಿ (24) ಅವರು ಮೃತಪಟ್ಟಿದ್ದಾರೆ.

ಬಿ.ಚನ್ನಸಂದ್ರ ನಿವಾಸಿ ಗಾನವಿ ಅವರು ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಯತ್ನಿಸಿ ತೀವ್ರ ಅಸ್ವಸ್ಥಗೊಂಡಿದ್ದರು. ಅವರ ಮಿದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ತಿಳಿಸಿದ್ದರು. ಐಸಿಯುನಲ್ಲಿ ಚಿಕಿತ್ಸೆ ಮುಂದುವರೆಸಲಾಗಿತ್ತು. ಆಸ್ಪತ್ರೆಯಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ.

ಗಾನವಿ ಪೋಷಕರು ಹಾಗೂ ಕುಟುಂಬಸ್ಥರು ಮೃತದೇಹವನ್ನು ಪತಿ ಸೂರಜ್ ಅವರ ವಿದ್ಯಾರಣ್ಯಪುರದ ಮನೆಗೆ ಕೊಂಡೊಯ್ದು ಪ್ರತಿಭಟನೆ ನಡೆಸಿದರು. ತಕ್ಷಣವೇ ಆರೋಪಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಪೊಲೀಸರು ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ಕೈಬಿಡಲಾಯಿತು.

ಪತಿ ಸೂರಜ್, ಅವರ ಸಹೋದರ ಸಂಜಯ್ ಹಾಗೂ ತಾಯಿ ಜಯಂತಿ ವಿರುದ್ಧ ಗಾನವಿ ಪೋಷಕರು ವರದಕ್ಷಿಣೆ ಹಾಗೂ ಕೌಟುಂಬಿಕ ದೌರ್ಜನ್ಯ ಆರೋಪದಡಿ ದೂರು ನೀಡಿದ್ದಾರೆ. ರಾಮಮೂರ್ತಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆರೋಪಿಗಳು ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ಪೊಲೀಸರು ಮುಂದಾಗಿದ್ದಾರೆ.

ಸೂರಜ್ ಅವರು ಡಿಪ್ಲೊಮಾ ಪದವಿ ಪಡೆದಿದ್ದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಅ.29ರಂದು ನಗರದ ಕಲ್ಯಾಣ ಮಂಟಪವೊಂದರಲ್ಲಿ ಗಾನವಿ ಅವರನ್ನು ಮದುವೆ ಆಗಿದ್ದರು.



ಗಾನವಿ ಹಾಗೂ ಸೂರಜ್

‘₹40 ಲಕ್ಷ ಖರ್ಚು ಮಾಡಿ ಅರಮನೆ ಮೈದಾನದಲ್ಲಿ ಆರತಕ್ಷತೆ ಮಾಡಲಾಗಿತ್ತು. ಅಲ್ಲದೆ, ದಂಪತಿಯನ್ನು ಶ್ರೀಲಂಕಾಕ್ಕೆ ಹನಿಮೂನ್‌ಗೂ ಕಳುಹಿಸಲಾಗಿತ್ತು. ಆದರೆ, ದಂಪತಿ ಐದನೇ ದಿನಕ್ಕೆ ವಾಪಸ್ ಬಂದಿದ್ದರು. ಈ ಸಂಬಂಧ ಸೂರಜ್ ಹಾಗೂ ಅವರ ಕುಟುಂಬಸ್ಥರನ್ನು ಕೇಳಿದಾಗ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ನಿಮ್ಮ ಮಗಳನ್ನು ಕರೆದುಕೊಂಡು ಹೋಗಿ ಎಂದು ಬೆದರಿಸಿದ್ದರು. ಹೀಗಾಗಿ, ಗಾನವಿ ತನ್ನ ತವರು ಮನೆಗೆ ಬಂದಿದ್ದರು. ಬುಧವಾರ ಮಧ್ಯಾಹ್ನ ಕೊಠಡಿಗೆ ತೆರಳಿ ಆತ್ಮಹತ್ಯೆಗೆ ಯತ್ನಿಸಿದ್ದರು. ಅದನ್ನು ಗಮನಿಸಿದ ಕುಟುಂಬದ ಸದಸ್ಯರು ಕೂಡಲೇ ನೇಣು ಕುಣಿಕೆಯಿಂದ ಆಕೆಯನ್ನು ಇಳಿಸಿ, ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು’ ಎಂದು ಪೊಲೀಸರು ಹೇಳಿದರು.

‘ವಿವಾಹದ ಆರಂಭಿಕ ದಿನಗಳಲ್ಲೇ ದಾಂಪತ್ಯದಲ್ಲಿ ಕಲಹ ಉಂಟಾಗಿತ್ತು. ಹನಿಮೂನ್‌ಗೆ ತೆರಳಿದ್ದ ದಂಪತಿ ಇದೇ ಕಾರಣಕ್ಕೆ ಮಧ್ಯದಲ್ಲೇ ವಾಪಸ್ ಬಂದಿದ್ದರು ಎಂದು ಕುಟುಂಬಸ್ಥರು ಹೇಳಿಕೆ ನೀಡಿದ್ದಾರೆ. ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಮಹಿಳಾ ಸಿಬ್ಬಂದಿ ಬಟ್ಟೆ ಬದಲಿಸುವ ದೃಶ್ಯ ಚಿತ್ರೀಕರಣ: ಆರೋಪಿ ಸೆರೆ

ಬೆಂಗಳೂರು: ನಾಗರಬಾವಿ ಎರಡನೇ ಹಂತದ ಖಾಸಗಿ ಆಸ್ಪತ್ರೆಯ ಶಸ್ತ್ರ ಚಿಕಿತ್ಸೆ ವಿಭಾಗದ ಡ್ರೆಸಿಂಗ್ ಕೊಠಡಿಯಲ್ಲಿ ಮಹಿಳಾ ಸಿಬ್ಬಂದಿ ಬಟ್ಟೆ ಬದಲಾಯಿಸುವ ದೃಶ್ಯವನ್ನು ಮೊಬೈಲ್ ಇಟ್ಟು ಚಿತ್ರೀಕರಿಸುತ್ತಿದ್ದ ಟೆಕ್ನಿಷಿಯನ್‌ನನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.


ಸುವೆಂದು ಮೊಹತಾ

ಪಶ್ಚಿಮ ಬಂಗಾಳದ ಸುವೆಂದು ಮೊಹತಾ (23) ಬಂಧಿತ ಆರೋಪಿ. ಆಸ್ಪತ್ರೆಯಲ್ಲಿ ಕಳೆದ ಒಂದು ವರ್ಷದಿಂದ ಜೂನಿಯರ್ ಟೆಕ್ನಿಷಿಯನ್ ಆಗಿ ಮೊಹತಾ ಕೆಲಸ ಮಾಡುತ್ತಿದ್ದ. ಕೊಟ್ಟಿಗೆಪಾಳ್ಯದ ಪೇಯಿಂಗ್ ಗೆಸ್ಟ್‌ನಲ್ಲಿ ವಾಸವಿದ್ದ ಎಂದು ಪೊಲೀಸರು ಹೇಳಿದರು.

ಡ್ರೆಸಿಂಗ್ ರೂಂನಲ್ಲಿ ರಹಸ್ಯವಾಗಿ ಮೊಬೈಲ್ ಇಟ್ಟಿದ್ದ ಆರೋಪಿ, ಸ್ಟಾಫ್ ನರ್ಸ್‌ಗಳು ಬಟ್ಟೆ ಬದಲಾಯಿಸುವುದನ್ನು ವಿಡಿಯೊ ಮಾಡುತ್ತಿದ್ದ. ಡಿ.20ರಂದು ಬಟ್ಟೆ ಬದಲಾವಣೆಗೆ ತೆರಳಿದ್ದ ನರ್ಸ್‌ವೊಬ್ಬರು ಮೊಬೈಲ್ ಗಮನಿಸಿದ್ದರು. ಮೊಬೈಲ್ ಪರಿಶೀಲಿಸಿದಾಗ ರಹಸ್ಯವಾಗಿ ವಿಡಿಯೊ ಚಿತ್ರೀಕರಿಸುತ್ತಿರುವುದು ಗೊತ್ತಾಗಿ ಆಸ್ಪತ್ರೆಯ ಆಡಳಿತ ಮಂಡಳಿಯ ಗಮನಕ್ಕೆ ತಂದಿದ್ದರು ಎಂದು ಮೂಲಗಳು ಹೇಳಿವೆ.

ಬಳಿಕ ಆಸ್ಪತ್ರೆಯ ನಿರ್ದೇಶಕ ಚೇತನ್ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಏರ್‌ಪೋರ್ಟ್ ಟ್ಯಾಕ್ಸಿಗಳಿಗೆ 15 ನಿಮಿಷ ಉಚಿತ ವಾಹನ ನಿಲುಗಡೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್–1ರ ಆಗಮನ ದ್ವಾರದ ಪಿಕಪ್ ಪ್ರದೇಶದಲ್ಲಿ ವಾಣಿಜ್ಯ ವಾಹನ ಹಾಗೂ ಟ್ಯಾಕ್ಸಿಗಳಿಗೆ ಇದುವರೆಗೆ ನಿಗದಿಪಡಿಸಲಾಗಿದ್ದ 10 ನಿಮಿಷಗಳ ಉಚಿತ ಪಾರ್ಕಿಂಗ್ ಅವಧಿಯನ್ನು 15 ನಿಮಿಷಕ್ಕೆ ವಿಸ್ತರಿಸಲಾಗಿದೆ.

ಈ ಸೌಲಭ್ಯವು ಟರ್ಮಿನಲ್–1ರ ಆಗಮನ ದ್ವಾರದ ಪಿಕಪ್ ವಲಯದಲ್ಲಿ ಕಾರ್ಯಾಚರಣೆಯಲ್ಲಿ ತೊಡಗುವ ಎಲ್ಲಾ ವಾಣಿಜ್ಯ ವಾಹನಗಳಿಗೆ ಅನ್ವಯವಾಗಲಿದೆ ಎಂದು ವಿಮಾನ ನಿಲ್ದಾಣದ ನಿರ್ವಹಣಾ ಸಂಸ್ಥೆಯಾದ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ (ಬಿಐಎಎಲ್) ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಯಾಣಿಕರು, ಟ್ಯಾಕ್ಸಿ ಚಾಲಕರು ಹಾಗೂ ಇತರ ಪ್ರಯಾಣಿಕರ ಪ್ರತಿಕ್ರಿಯೆಗಳನ್ನು ಪರಿಗಣಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಪ್ರಯಾಣಿಕರು ಹಾಗೂ ಅವರ ಕುಟುಂಬ ಸದಸ್ಯರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ಪರಿಷ್ಕರಣೆ ಮಾಡಲಾಗಿದೆ ಎಂದು ಬಿಐಎಎಲ್ ಸ್ಪಷ್ಟಪಡಿಸಿದೆ.

ಡಿ.13ರಂದು ಟರ್ಮಿನಲ್–1ರಲ್ಲಿ ಜಾರಿಗೆ ತರಲಾದ ಹೊಸ ಪಿಕಪ್ ನಿಯಮಗಳ ಪ್ರಕಾರ, ವಾಣಿಜ್ಯ ವಾಹನಗಳು ಪಿ–3 ಮತ್ತು ಪಿ–4 ಎಂದು ಗುರುತಿಸಲಾದ ಪಾರ್ಕಿಂಗ್ ವಲಯಗಳಲ್ಲಿ ಕಾಯಬೇಕಿತ್ತು. ಅಲ್ಲಿ 10 ನಿಮಿಷಗಳ ಉಚಿತ ಪಾರ್ಕಿಂಗ್ ಸೌಲಭ್ಯ ನೀಡಲಾಗುತ್ತಿತ್ತು. ಇದೀಗ ಅದನ್ನು 15 ನಿಮಿಷಗಳಿಗೆ ವಿಸ್ತರಿಸಲಾಗಿದೆ.

ಉಚಿತ ಅವಧಿ ಮೀರಿದ ಬಳಿಕ, ಕ್ಯಾಬ್ ಚಾಲಕರು ಮೊದಲ ಅರ್ಧ ಗಂಟೆಗೆ ಫ್ಲಾಟ್ ದರವಾಗಿ ₹100 ಪಾವತಿಸಬೇಕಾಗಿದ್ದು, ನಂತರ ಪ್ರತಿ ಹೆಚ್ಚುವರಿ ಗಂಟೆಗೆ ₹50 ಶುಲ್ಕ ವಿಧಿಸಲಾಗುತ್ತದೆ.



ಮೆಟ್ರೊದಲ್ಲಿ ಯುವತಿಯ ಮೈ ಮುಟ್ಟಿ ಅಸಭ್ಯ ವರ್ತನೆ

ಬೆಂಗಳೂರು: ಮೆಟ್ರೊ ರೈಲಿನಲ್ಲಿ ಪ್ರಯಾಣಿಸುವಾಗ ಯುವತಿಯ ಮೈ ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ ವ್ಯಕ್ತಿಯನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ವಶಕ್ಕೆ ಪಡೆದು ಎಚ್ಚರಿಕೆ ಕೊಟ್ಟು ಕಳುಹಿಸಿದ್ದಾರೆ.


ಬೆಳಗಾವಿ ಜಿಲ್ಲೆಯ ಮುತ್ತಪ್ಪ (55) ಎಂಬಾತ ಡಿ.23ರಂದು ಸಂಜೆ ವಿಧಾನಸೌಧ ನಿಲ್ದಾಣದಿಂದ ನಾಡಪ್ರಭು ಕೆಂಪೇಗೌಡ (ಮೆಜೆಸ್ಟಿಕ್) ನಿಲ್ದಾಣಕ್ಕೆ ಮೆಟ್ರೊ ರೈಲಿನಲ್ಲಿ ತೆರಳುತ್ತಿದ್ದ. ಪಕ್ಕದಲ್ಲಿದ್ದ ಹೊರ ರಾಜ್ಯದ ಯುವತಿಯ ಮೈ ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ ಎನ್ನಲಾಗಿದೆ.

ರೈಲು ಮೆಜೆಸ್ಟಿಕ್ ತಲುಪಿದಾಗ ಯುವತಿಯು ಮುತ್ತಪ್ಪನ ಅಸಭ್ಯ ವರ್ತನೆ ಬಗ್ಗೆ ನಿಲ್ದಾಣದ ಭದ್ರತಾ ಸಿಬ್ಬಂದಿಗೆ ದೂರು ನೀಡಿದ್ದರು. ನಂತರ, ಮೆಟ್ರೊ ಸಿಬ್ಬಂದಿ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡು ಯುವತಿಯೊಂದಿಗೆ ಠಾಣೆಗೆ ಕರೆದುಕೊಂಡು ಹೋಗಿದ್ದರು.

‘ಯುವತಿ ಲಿಖಿತ ದೂರು ನೀಡಲು ಒಪ್ಪಲಿಲ್ಲ. ದುರ್ವತನೆ ತೋರಿದ ಆರೋಪದ ಅಡಿ ವ್ಯಕ್ತಿಗೆ ಎಚ್ಚರಿಕೆ ನೀಡಿ ಕಳುಹಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ವಿಜಯನಗರದಲ್ಲಿ ವಾಸ ಆಗಿರುವ ಮುತ್ತಪ್ಪ, ಕಾಲ್‌ಸೆಂಟರ್‌ನಲ್ಲಿ ಮಾಡುತ್ತಿದ್ದಾನೆ.

ನಿಧನ ವಾರ್ತೆ

ಶ್ರೀರಂಗ ಪ್ರಸಾದ್



ಬೆಂಗಳೂರು: ಜಯನಗರದ ನಿವಾಸಿ ಡಾ.ಕೆ.ಶ್ರೀರಂಗ ಪ್ರಸಾದ್ (62) ಅಲ್ಪಕಾಲದ ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಪಿಇಎಸ್ ವೈದ್ಯಕೀಯ ಕಾಲೇಜಿನಲ್ಲಿ ಕಿವಿ, ಮೂಗು, ಗಂಟಲು ವಿಭಾಗದ ಮುಖ್ಯಸ್ಥರಾಗಿದ್ದರು. ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಶನಿವಾರ ಮಧ್ಯಾಹ್ನ 3 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಉನ್ನಾವೊ: ಎಐಎಂಎಸ್‌ಎಸ್, ಎಐಡಿಎಸ್‌ಒ ಖಂಡನೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿಯ ಜೀವಾವಧಿ ಶಿಕ್ಷೆಯನ್ನು ದೆಹಲಿ ಹೈಕೋರ್ಟ್ ಅಮಾನತುಗೊಳಿಸಿರುವುದನ್ನು ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಮತ್ತು ಅಖಿಲ ಭಾರತ ಡೆಮಾಕ್ರೆಟಿಕ್ ವಿದ್ಯಾರ್ಥಿ ಸಂಘಟನೆಗಳು (ಎಐಡಿಎಸ್‌ಒ) ಖಂಡಿಸಿವೆ.

2017ರಲ್ಲಿ ನಡೆದಿದ್ದ ಅತ್ಯಾಚಾರ ಪ್ರಕರಣದಲ್ಲಿ ಮಾಜಿ ಶಾಸಕ ಕುಲದೀಪ್ ಸೆಂಗರ್ ಅಪರಾಧಿ ಎಂದು ನ್ಯಾಯಾಲಯ ತೀರ್ಪು ನೀಡಿತ್ತು. ಆದರೆ, ಈಗ ಹೈಕೋರ್ಟ್ ಜಾಮೀನು ನೀಡಿದೆ. ಈಗಾಗಲೇ ಕುಟುಂಬದವರನ್ನು ಕಳೆದುಕೊಂಡಿರುವ ಸಂತ್ರಸ್ತೆ ಮತ್ತು ಅವರ ತಾಯಿ ಇದರಿಂದ ಕಳವಳಗೊಂಡು, ಇಂಡಿಯಾ ಗೇಟ್ ಬಳಿ ಪ್ರತಿಭಟನೆ ನಡೆಸಿದರು. ಜೀವಕ್ಕೆ ಅಪಾಯವಿದೆ ಎಂದು ತಿಳಿಸಿದರು. ಅವರನ್ನು ರಸ್ತೆಯಲ್ಲೇ ಅಮಾನವೀಯವಾಗಿ ಎಳೆದಾಡಲಾಯಿತು. ಇದು ಸಂತ್ರಸ್ತೆಯ ಜೀವನ ಅಸುರಕ್ಷಿತವಾಗಿರುವುದನ್ನು ತೋರಿಸುತ್ತಿದೆ ಎಂದು ಎಐಎಂಎಸ್‌ಎಸ್ ರಾಜ್ಯ ಕಾರ್ಯದರ್ಶಿ ಶೋಭಾ ಎಸ್., ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ತಿಳಿಸಿದ್ದಾರೆ.

ನಗರದಲ್ಲಿ ಇಂದು

ದ್ವಿತೀಯ ಆಯುರ್ವೇದ ವಿಶ್ವ ಸಮ್ಮೇಳನ: ಭಾಗವಹಿಸುವವರು: ನಿರ್ಮಲಾನಂದನಾಥ ಸ್ವಾಮೀಜಿ, ಗುರುಸಿದ್ಧ ರಾಜಯೋಗೀಂದ್ರ ಸ್ವಾಮೀಜಿ, ವಿಶ್ವ ಸಂತೋಷ ಭಾರತಿ ಸ್ವಾಮೀಜಿ, ಮನೋಹರ್, ಕೆ.ಎನ್. ಚನ್ನೇಗೌಡ, ಬಿ.ಎ. ಪಾಟೀಲ, ಶೋಭಾ ಮಳವಳ್ಳಿ, ರಾಜಾ ಬಿ.ಎಸ್., ಮುಖ್ಯ ಭಾಷಣ: ಕಟ್ಟೇಶ್ ವಿ. ಕಟ್ಟಿ, ಸ್ವಾಮಿ ನಿರ್ಭಯಾನಂದ ಸರಸ್ವತಿ, ಆಯೋಜನೆ: ಕಜೆ ಆಯುರ್ವೇದಿಕ್ ಚಾರಿಟೇಬಲ್ ಫೌಂಡೇಷನ್, ಸ್ಥಳ: ರಾಯಲ್ ಸೆನೆಟ್ ಆ್ಯಂಡ್ ದಿ ಗ್ರ್ಯಾಂಡ್ ಕ್ಯಾಸಲ್, ಅರಮನೆ ಮೈದಾನ (ಗೇಟ್ ಸಂಖ್ಯೆ 6), ಬೆಳಿಗ್ಗೆ 9ರಿಂದ


ನಿರ್ಮಲಾನಂದನಾಥ ಸ್ವಾಮೀಜಿ


13ನೇ ವಾರ್ಷಿಕೋತ್ಸವ ಹಾಗೂ ಪಾಂಚಜನ್ಯ ಪುರಸ್ಕಾರ: ದುಷ್ಯಂತ್ ಶ್ರೀಧರ್, ಅತಿಥಿ: ಅಶೋಕ್ ಹಾರನಹಳ್ಳಿ, ಆಯೋಜನೆ: ಪಾಂಚಜನ್ಯ ಪ್ರತಿಷ್ಠಾನ, ಸ್ಥಳ: ವಿವೇಕ ಸಭಾಂಗಣ, ಯುವಪಥ, ಜಯನಗರ 4ನೇ ಬ್ಲಾಕ್, ಬೆಳಿಗ್ಗೆ 9.30

ಸಾಂಸ್ಕೃತಿಕ, ಕ್ರೀಡೆ ಮತ್ತು ಸಾಹಿತ್ಯ ಬಹುಮಾನ ವಿತರಣೆ ಸಮಾರಂಭ: ಉದ್ಘಾಟನೆ: ಲಕ್ಷ್ಮಣ ದಾಸ್, ಅತಿಥಿ: ಮಂಜುನಾಥ್ ಜಿ.ಎಸ್., ಅಧ್ಯಕ್ಷತೆ: ಎನ್.ಪಿ. ಕಾರ್ತಿಕ್, ಆಯೋಜನೆ ಹಾಗೂ ಸ್ಥಳ: ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

70 ಕನ್ನಡ ಪುಸ್ತಕಗಳ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಪುಸ್ತಕ ಬಿಡುಗಡೆ: ವೀರಪ್ಪ ಮೊಯಿಲಿ, ಅಧ್ಯಕ್ಷತೆ: ಹಂಪ ನಾಗರಾಜಯ್ಯ, ಕೃತಿ ವಿಸ್ತಾರ: ಬೈರಮಂಗಲ ರಾಮೇಗೌಡ, ‘ನಾಡು–ನುಡಿಯ ದೃಷ್ಟಿಯಲ್ಲಿ ಪುಸ್ತಕಗಳು’ ವಿಷಯದ ಬಗ್ಗೆ ಮಾತು: ಜೋಗಿ, ಆಯೋಜನೆ: ಸಪ್ನ ಬುಕ್ ಹೌಸ್, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10

ಧಾತು ಅಂತರರಾಷ್ಟ್ರೀಯ ಬೊಂಬೆಯಾಟ ಉತ್ಸವದ ಪ್ರಯುಕ್ತ ಕಾರ್ಯಾಗಾರ, ಆಯೋಜನೆ: ಧಾತು, ಸ್ಥಳ: ಮಂಡಲ ಕಲ್ಚರಲ್ ಸೆಂಟರ್, ಕನಕಪುರ ರಸ್ತೆ, ಬೆಳಿಗ್ಗೆ 10ರಿಂದ

ರೈತ ಸಂತೆ ಮತ್ತು ರೈತ ದಿನಾಚರಣೆ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಎನ್. ಚಲುವರಾಯಸ್ವಾಮಿ, ಡಿ.ಕೆ. ಶಿವಕುಮಾರ್, ಎಂ.ಬಿ.ಪಾಟೀಲ, ಅಧ್ಯಕ್ಷತೆ: ಕೃಷ್ಣ ಬೈರೇಗೌಡ, ಉಪಸ್ಥಿತಿ: ಎಸ್.ವಿ. ಸುರೇಶ, ಶರತ್ ಬಚ್ಚೇಗೌಡ, ಆಯೋಜನೆ: ಕೃಷಿ ವಿಶ್ವವಿದ್ಯಾಲಯ, ಸ್ಥಳ: ಡಾ.ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಕೇಂದ್ರ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ), ಬೆಳಿಗ್ಗೆ 10.30



ವಾರ್ಷಿಕೋತ್ಸವ: ಉದ್ಘಾಟನೆ: ಮಂಜುಳಾ ಅರವಿಂದ ಮಾಲಗತ್ತಿ, ಅತಿಥಿಗಳು: ಮನೋಜ್ ಕುಮಾರ್ ಕೊಳ್ಳ, ಅರವಿಂದ ಲಿಂಬಾವಳಿ, ಪಿಳ್ಳಪ್ಪ ಎಚ್.ಎಸ್., ಅನಸೂಯಾ ಟಿ. ರೆಡ್ಡಿ, ಅಧ್ಯಕ್ಷತೆ: ಕೇಶವರೆಡ್ಡಿ ಎಂ., ಆಯೋಜನೆ ಹಾಗೂ ಸ್ಥಳ: ಸರ್ಕಾರಿ ಪದವಿಪೂರ್ವ ಕಾಲೇಜು, ಹೂಡಿ, ಬೆಳಿಗ್ಗೆ 11

ಎಸ್.ಆರ್. ಪುಟ್ಟಣ್ಣ ಕಣಗಾಲ್ ಹಾಗೂ ರವಿಕಿರಣ್ (ಎಂ.ಕೆ. ರವೀಂದ್ರನಾಥ್) ಜನ್ಮದಿನದ ಪ್ರಯುಕ್ತ ಉಪನ್ಯಾಸ, ಕವಿಗೋಷ್ಠಿ, ಗಾಯನ, ರಸಪ್ರಶ್ನೆ: ಅಧ್ಯಕ್ಷತೆ: ಎಸ್. ಶಿವಲಿಂಗಪ್ಪ, ಅತಿಥಿಗಳು: ಹೈಟೆಕ್ ವೇಣುಗೋಪಾಲ್, ಯರ್ರಿಸ್ವಾಮಿ ಎಚ್., ಆಯೋಜನೆ: ಕಲಾಚಂದಿರ ಕಲಾಮಂದಿರ ಟ್ರಸ್ಟ್, ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಮಧ್ಯಾಹ್ನ 2.30


ಕ್ಯಾಲೆಂಡರ್ ಬಿಡುಗಡೆ ಹಾಗೂ ಸನ್ಮಾನ ಸಮಾರಂಭ: ಉದ್ಘಾಟನೆ: ಸುನಂದಮ್ಮ, ಅತಿಥಿ: ಶಾಕಿರಾಖಾನಂ, ‘ರಫ್ತಾರ್’ ಪುಸ್ತಕ ಬಿಡುಗಡೆ: ಎ. ಕೃಷ್ಣೇಗೌಡ, ಅಧ್ಯಕ್ಷತೆ: ಎಸ್.ಎಲ್. ಉಮಾದೇವಿ, ಉಪಸ್ಥಿತಿ: ಬಿ.ಟಿ. ಲಲಿತಾ ನಾಯಕ್, ಆಯೋಜನೆ: ಡಾ.ಬಿ.ಟಿ. ಲಲಿತಾ ನಾಯಕ್ ಫೌಂಡೇಷನ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಶಾಸ್ತ್ರೀಯ ಸಂಭ್ರಮ, ತೃತೀಯ ವಾರ್ಷಿಕೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ: ‘ವಾಗೀಶ್ವರೀ ಪಂಡಿತ’ ವಿದ್ವತ್ಸಭಾ ಗೌರವ: ಶಂಕರ್ ರಾಜಾರಾಮನ್, ‘ಸಾಹಿತ್ಯ ಸೌರಭ ಪುರಸ್ಕಾರ’: ಜಿ. ಅಶ್ವತ್ಥನಾರಾಯಣ, ‘ಶ್ರೀವಿದ್ಯಾ ಸೌರಭ ಪುರಸ್ಕಾರ’: ಎಸ್.ಆರ್. ನರಸಿಂಹಮೂರ್ತಿ, ‘ಸಂಗೀತ ಸೌರಭ ಪುರಸ್ಕಾರ’: ಆರ್. ರಘುರಾಮ್, ಉಪಸ್ಥಿತಿ: ಎ. ರಾಜಚಂದ್ರ, ಸಿ.ಎನ್. ಅಶ್ವತ್ಥನಾರಾಯಣ, ಆರ್. ಶೇಷಶಾಸ್ತ್ರಿ, ಆರ್.ಎಸ್. ನಂದಕುಮಾರ್, ಆಯೋಜನೆ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಫೌಂಡೇಷನ್, ಸ್ಥಳ: ಶ್ರೀರಾಮಮಂದಿರ, 8ನೇ ಅಡ್ಡರಸ್ತೆ, ಮಲ್ಲೇಶ್ವರ, ಸಂಜೆ 5

ಅಜಯ ಕುಮಾರ ಸಿಂಹ ಅವರ ಕವನ ಸಂಕಲನ ‘ಹರಿಯಲು ಬಿಡು’ ಬಿಡುಗಡೆ: ಬಿ.ಎಲ್. ಶಂಕರ್, ಕನ್ನಡಕ್ಕೆ ಅನುವಾದ: ಎಚ್.ಎಸ್. ಶಿವಪ್ರಕಾಶ್, ಅಧ್ಯಕ್ಷತೆ: ಚಿರಂಜೀವಿ ಸಿಂಘ್, ಉಪಸ್ಥಿತಿ: ಅಜಯ್ ಬಣಕಾರ್, ಕೆ.ವಿ. ನಾಗರಾಜಮೂರ್ತಿ,



ಅಖಿಲ ಕರ್ನಾಟಕ ಅಂಧರ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ: ಸಮ್ಮೇಳನಾಧ್ಯಕ್ಷತೆ: ಗೊ.ರು. ಚನ್ನಬಸಪ್ಪ, ಉದ್ಘಾಟನೆ: ಶಿವರಾಜ ತಂಗಡಗಿ, ಶುಭ ನುಡಿ: ಬಸವಾನಂದ ಸ್ವಾಮಿ, ದಿಕ್ಸೂಚಿ ನುಡಿ: ಬರಗೂರು ರಾಮಚಂದ್ರಪ್ಪ, ಸ್ಮರಣ ಸಂಚಿಕೆ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ‘ಕುವೆಂಪು ವಿಚಾರ ಕ್ರಾಂತಿ’ ಬ್ರೈಲ್ ಪುಸ್ತಕ ಬಿಡುಗಡೆ: ಬಂಜಗೆರೆ ಜಯಪ್ರಕಾಶ್, ಅಂಧ ಬರಹಗಾರರ ವಿವಿಧ ಕೃತಿಗಳ ಬಿಡುಗಡೆ: ಎಲ್. ಹನುಮಂತಯ್ಯ, ಅತಿಥಿಗಳು: ಜಿ.ಕೆ. ಮಹಾಂತೇಶ್, ಗಾಯಿತ್ರಿ ಕೆ.ಎಂ., ಅಶೋಕ್ ಡಿ.ಆರ್., ಆಯೋಜನೆ: ಕರ್ನಾಟಕ ಅಂಧರ ಸಾಹಿತ್ಯ ಪರಿಷತ್ತು, ಸ್ಥಳ: ಸಮರ್ಥನಂ ಸಭಾಂಗಣ, ಎಚ್.ಎಸ್.ಆರ್. ಬಡಾವಣೆ, ಬೆಳಿಗ್ಗೆ 10


ಗೊ.ರು. ಚನ್ನಬಸಪ್ಪ

ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಉದ್ಘಾಟನೆ: ಕೆ. ರಮೇಶ್ ಜಮದಗ್ನಿ, ಅತಿಥಿ: ಅನ್ಸಾರ್ ಅಹಮದ್, ಎಸ್. ಸತೀಶ್ ರೆಡ್ಡಿ, ವೆಂಕಟೇಶ್ ಆರ್. ದಾಸ್, ಅಧ್ಯಕ್ಷತೆ: ಡಬ್ಲ್ಯು.ಕೆ. ವೆಂಕಟೇಶಮೂರ್ತಿ, ಆಯೋಜನೆ: ಸಿರಿಗನ್ನಡ ಮಿತ್ರ ತಂಡ, ಸ್ಥಳ: ಸಿಲ್ವರ್ ವ್ಯಾಲಿ ಕಾಲೇಜು ಸಭಾಂಗಣ, 7ನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 4

ಆಯೋಜನೆ: ಭಾರತ ಯಾತ್ರ ಕೇಂದ್ರ, ಸ್ಥಳ: ರಂಗಚಾವಡಿ, ಕರ್ನಾಟಕ ನಾಟಕ ಅಕಾಡೆಮಿ, ಕನ್ನಡ ಭವನ, ಸಂಜೆ 5.30

ಸ್ವರ ಸಂಜೆ: ಗಾಯನ: ಶ್ರೀಮತಿ ದೇವಿ ಮೈಸೂರು, ವಿನೋದ್ ದಿಗ್ರಜ್‌ಕರ್, ತಬಲಾ: ಸುಮಿತ್ ನಾಯ್ಕ್, ಶ್ರೀವತ್ಸ ಕೌಲ್ಗಿ, ಹಾರ್ಮೋನಿಯಂ: ಮಧುಸೂಧನ್ ಭಟ್, ವಿಘ್ನೇಶ್ ಭಾಗವತ್, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ನಜೀರ್ ಸದಾಫ್ ಅವರ ‘ಸನಿಹ’ ಕವನ ಸಂಕಲನ ಬಿಡುಗಡೆ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ಮನು ಬಳಿಗಾರ್, ಅತಿಥಿಗಳು: ಬಿ.ಎಚ್. ಶಂಕರೇಗೌಡ, ಎ.ಎನ್. ಭಾರತಿ, ಮಾಸ್ಕೇರಿ ಎಂ.ಕೆ. ನಾಯಕ, ಪುಸ್ತಕ ಪರಿಚಯ: ಎನ್. ಶಾಂತ ನಾಯಕ, ಉಪಸ್ಥಿತಿ: ದಿಲಾವರ ರಾಮದುರ್ಗ, ಆಯೋಜನೆ: ಪೀರ ಹಾಗೂ ಅಭಿವ್ಯಕ್ತಿ ಸಾಹಿತ್ಯ ವೇದಿಕೆ, ಸ್ಥಳ: 37ನೇ ಕ್ರೆಸೆಂಟ್ ಹೋಟೆಲ್, ಮಲ್ಲಿಗೆ ಆಸ್ಪತ್ರೆ ಎದುರು, ಕ್ರೆಸೆಂಟ್ ರಸ್ತೆ, ಸಂಜೆ 6

54ನೇ ವರ್ಷದ ಸುವರ್ಣ ಮಹೋತ್ಸವ: ಆದಿಶಕ್ತಿ ಗಂಗಮ್ಮದೇವಿ ಭಜನಾ ಮಂಡಳಿಯಿಂದ ಗಾಯನ, ಆಯೋಜನೆ ಹಾಗೂ ಸ್ಥಳ: ಅಯ್ಯಪ್ಪಸ್ವಾಮಿ ಭಕ್ತ ಮಂಡಳಿ, ಮುಕ್ಕಡಶೆಟ್ಟಿ ರಾಮಣ್ಣಗಲ್ಲಿ, ಬಳೆಪೇಟೆ, ಸಂಜೆ 6.30

ಮಾರ್ಗಶೀರ್ಷೋತ್ಸವ: ಪಂಚರತ್ನ ಕೀರ್ತನೆಗಳ ಗೋಷ್ಠಿ ಗಾಯನ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

‘ಸೋಮಿಯ ಸೌಭಾಗ್ಯ’ ಗೀತನಾಟಕ ಪ್ರದರ್ಶನ: ನಿರ್ದೇಶನ: ಗಣೇಶ್ ಮಂದಾರ್ತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಯಕ್ಷ ರಂಗಾಯಣ ಕಾರ್ಕಳ, ಸ್ಥಳ: ಸುಚಿತ್ರ ಸಿನಿಮಾ ಅಕಾಡೆಮಿ, ಬನಶಂಕರಿ 2ನೇ ಹಂತ, ಸಂಜೆ 7

ಬೆಂಗಳೂರು ಅಂತರರಾಷ್ಟ್ರೀಯ ಶಾಸ್ತ್ರೀಯ ನೃತ್ಯೋತ್ಸವ: ಭರತನಾಟ್ಯ: ಮಾನಸಿ ಗಣೇಶ್, ಸಹನಾ ಬಾಲಸುಬ್ರಮಣ್ಯಂ, ನಿಹಾರಿಕಾ ರಾಜೀವ್, ಶ್ರೀನಿಧಿ ಗಣೇಶನ್, ಆಯೋಜನೆ: ಶಾಂತಲಾ ಆರ್ಟ್ಸ್ ಟ್ರಸ್ಟ್, ಸೂರ್ಯ ಪರ್ಫಾರ್ಮಿಂಗ್ ಆರ್ಟ್ಸ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10ರಿಂದ

ಭರತನಾಟ್ಯ ರಂಗಪ್ರವೇಶ: ಆರುಷಿ ಸಿಂಹ ಎನ್.ಜೆ., ಅತಿಥಿಗಳು: ಟಿ.ಎಸ್. ಸತ್ಯವತಿ, ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಎಂ.ಸೂರ್ಯಪ್ರಸಾದ್, ಸುಮಾ ರಾಜೇಶ್, ಸ್ಥಳ: ಡಾ.ರಾಜ್‌ಕುಮಾರ್ ಕಲಾಭವನ, ಬೋವಿಪಾಳ್ಯ, ಮಾರುತಿನಗರ, ಸಂಜೆ 5

ವಿವಿಧ ಜನಪದ ಕಲೆಗಳ ಪ್ರದರ್ಶನ ಮತ್ತು ಕಲಾ ಸ್ಪರ್ಧೆಗಳ ವಿಶ್ವ ದಾಖಲೆ: ಬೆಳಿಗ್ಗೆ 9ಕ್ಕೆ ಉದ್ಘಾಟನಾ ಸಮಾರಂಭ: ಕೆ.ಬಾಗೇಗೌಡ, ಅರಮನೆ ಶಂಕರ್, ಹಿ.ಚಿ. ಬೋರಲಿಂಗಯ್ಯ, ಕೆ.ಆರ್. ಸಂಧ್ಯಾರೆಡ್ಡಿ, ಪ್ರಸಾದ್ ಎಚ್.ಎನ್., ಜಿ.ನಾ.ಗೋಪಾಲಕೃಷ್ಣ, ಸಂಜೆ 5ಕ್ಕೆ ಸಮಾರೋಪ ಹಾಗೂ ಬಹುಮಾನ ವಿತರಣೆ: ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಯು.ಬಿ. ವೆಂಕಟೇಶ್, ಹಂಪ ನಾಗರಾಜಯ್ಯ, ಆಯೋಜನೆ: ನಾಡೋಜ ಡಾ.ಜಿ. ನಾರಾಯಣ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ



ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಅಪಘಾತ: ತಂದೆ, ಮಗ ಸಾವು

ಹೆಸರಘಟ್ಟ: ತೋಟಗೆರೆ ಸಮೀಪ ಕಾರು ಮರಕ್ಕೆ ಡಿಕ್ಕಿ ಹೊಡೆದು ತಂದೆ ಹಾಗೂ ಮಗ ಮೃತಪಟ್ಟಿದ್ದಾರೆ. ನಾಲ್ವರು ಗಾಯಗೊಂಡಿದ್ದಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಹರೀಶ್ (39) ಹಾಗೂ ಅವರ ತಂದೆ ವೀರಭದ್ರ(80) ಮೃತಪಟ್ಟಿದ್ದಾರೆ. ತಾಯಿ ಗೌರಮ್ಮ (62), ಪತ್ನಿ ಮೈತ್ರಿ (32), ಮಗಳು ಸಿರಿ (10) ಚಿಕ್ಕಮ್ಮನ ಮಗಳು ವಂದನಾ (8) ಗಾಯಗೊಂಡಿದ್ದಾರೆ.

ಗೌರಿಬಿದನೂರಿಗೆ ಕುಟುಂಬ ಸಮೇತ ತೆರಳಿ ಜಮೀನು ನೋಡಿಕೊಂಡು ರೈಲ್ವೆ ಗೊಲ್ಲಹಳ್ಳಿಯಿಂದ ಹೆಸರಘಟ್ಟ ಮಾರ್ಗವಾಗಿ ದಾಸರಹಳ್ಳಿಗೆ ತೆರಳುತ್ತಿದ್ದರು.

ತೋಟಗೆರೆ ತಿರುವಿನಲ್ಲಿ ಕಾರು ನಿಯಂತ್ರಣ ಕಳೆದುಕೊಂಡು ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ದುರ್ಘಟನೆ ಸಂಭವಿಸಿದೆ. ಘಟನೆ ಸಂಬಂಧ ಮಾದನಾಯಕನಹಳ್ಳಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಚಿಟಿಕೆ ಸುದ್ದಿ

ಅವರೆಬೇಳೆ ಮೇಳ ಇಂದಿನಿಂದ



ಬೆಂಗಳೂರು: ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಡಿ.27ರಿಂದ ಜ.4ವರೆಗೆ ಅವರೆಬೇಳೆ ಮೇಳವನ್ನು ಆಯೋಜಿಸಲಾಗಿದೆ.

ವಾಸವಿ ಕಾಂಡಿಮೆಂಟ್ಸ್ ತಂಡವು ಮಾಗಡಿ ಹಾಗೂ ಸುತ್ತಮುತ್ತಲಿನ ರೈತರಿಂದ 60 ಟನ್‌ಗೂ ಅಧಿಕ ಅವರೆ ಕಾಯಿಯನ್ನು ಖರೀದಿಸಿದೆ. ಬಗೆಬಗೆಯ 120 ಖಾದ್ಯಗಳನ್ನು ತಯಾರಿಸಿ ಮೇಳದ ಮೂಲಕ ಮಾರಾಟ ಮಾಡಲಾಗುತ್ತದೆ. 26ನೇ ವರ್ಷದ ಮೇಳ ಶನಿವಾರ ಬೆಳಿಗ್ಗೆ 9.30ಕ್ಕೆ ಉದ್ಘಾಟನೆಗೊಳ್ಳಲಿದೆ ಎಂದು ಸಂಘಟಕರಾದ ಸ್ವಾತಿ ತಿಳಿಸಿದರು.

ಅವರೆ ಬೇಳೆ ಹೋಳಿಗೆ, ವಡೆ, ಉಸುಳಿ, ನೀರು ದೋಸೆ ಜತೆಗೆ ಅವರೆ ಬೇಳೆ ಸಾರು, ಪಾಯಸ, ಕುನಾಫ ಕೇಕ್ ಸಹಿತ ಹಲವು ಖಾದ್ಯಗಳು ಮೇಳದಲ್ಲಿ ಸಿಗಲಿವೆ. ಬೆಳಿಗ್ಗೆ 10ರಿಂದ ರಾತ್ರಿ 10ರವರೆಗೆ ಮೇಳ ಇರಲಿದ್ದು, ಉಚಿತ ಪ್ರವೇಶವಿದೆ ಎಂದರು.

ಬೆಂಗಳೂರು ಓಪನ್ ದಕ್ಷಿಣೇಶ್ವರ್‌ಗೆ ವೈಲ್ಡ್‌ಕಾರ್ಡ್

ಬೆಂಗಳೂರು: ಭಾರತದ ದಕ್ಷಿಣೇಶ್ವರ್ ಸುರೇಶ್ ಅವರು ಜನವರಿ 5ರಿಂದ 11ರವರೆಗೆ ಕಬ್ಬನ್ ಪಾರ್ಕ್‌ನ ಎಸ್.ಎಂ. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯಲಿರುವ 10ನೇ ಬೆಂಗಳೂರು ಓಪನ್ ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.



25 ವರ್ಷದ ಸುರೇಶ್ ಅವರು 2024ರಲ್ಲಿ ಡೇವಿಸ್ ಕಪ್ ವಿಶ್ವ ಗುಂಪು 1ರ ಪಂದ್ಯದಲ್ಲಿ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದರು. ಸ್ವಿಟ್ಜರ್ಲೆಂಡ್ ವಿರುದ್ಧ ಸ್ಮರಣೀಯ ಚೊಚ್ಚಲ ಪಂದ್ಯವನ್ನು ಆಡಿದ್ದರು. ಅವರು ಪ್ರಸ್ತುತ ಎಟಿಪಿ ಸಿಂಗಲ್ಸ್ ರ‍್ಯಾಂಕಿಂಗ್‌ನಲ್ಲಿ 519ನೇ ಸ್ಥಾನದಲ್ಲಿದ್ದಾರೆ.

ಟೆನಿಸ್: ಅವ್ಯಾನ್, ಲಾವಣ್ಯಗೆ ಕಿರೀಟ



ಬೆಂಗಳೂರು: ಕರ್ನಾಟಕದ ಅಗ್ರ ಶ್ರೇಯಾಂಕದ ಆಟಗಾರ ಬಿ. ಅವ್ಯಾನ್ ಅವರು ಮುರುಗನ್ ಟೆನಿಸ್ ಅಕಾಡೆಮಿ ಆಯೋಜಿಸಿರುವ ಎಐಟಿಎ 12 ವರ್ಷದೊಳಗಿನವರ ಟೆನಿಸ್ ಟೂರ್ನಿಯ ಬಾಲಕರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಬಾಲಕಿಯರ ವಿಭಾಗದಲ್ಲಿ ಉತ್ತರಪ್ರದೇಶದ ಲಾವಣ್ಯ ಸಿಂಗ್ ಕಿರೀಟ ತಮ್ಮದಾಗಿಸಿಕೊಂಡರು.

ಅವ್ಯಾನ್, ಬಾಲಕರ ವಿಭಾಗದ ಫೈನಲ್‌ನಲ್ಲಿ 6–3, 6–2ರಿಂದ ಕರ್ನಾಟಕದವರೇ ಆದ ದರ್ಶ್ ಎಂ. ಅವರನ್ನು ಸುಲಭವಾಗಿ ಮಣಿಸಿದರು. ಅದರೊಂದಿಗೆ, ಟೂರ್ನಿಯಲ್ಲಿ ಪ್ರಶಸ್ತಿ ಡಬಲ್ ಸಾಧಿಸಿದರು.

ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಲಾವಣ್ಯ ಅವರು 1–6ರಿಂದ ಕರ್ನಾಟಕದ ರಚೆಲ್ ರಾಯುಡು ಎದುರು ಮೊದಲ ಸೆಟ್ ಕಳೆದುಕೊಂಡರು. ಬಳಿಕ ಚೇತರಿಸಿಕೊಂಡು 6–2, 6–2 ಅಂತರದಲ್ಲಿ ಸತತ ಎರಡು ಸೆಟ್‌ಗಳಲ್ಲಿ ಮೇಲುಗೈ ಸಾಧಿಸಿದರು. ಅದರೊಂದಿಗೆ ಪಂದ್ಯವನ್ನು ತಮ್ಮದಾಗಿಸಿಕೊಂಡು, ಪ್ರಶಸ್ತಿಗೆ ಕೊರಳೊಡ್ಡಿದರು.

ಹೊಸ ಲೂಪ್: ತಗ್ಗಿದ ದಟ್ಟಣೆ

ಹೆಬ್ಬಾಳ ಮಾರ್ಗ: ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಮಾರ್ಗದಲ್ಲಿ ನಿರ್ಮಿಸಿರುವ ಎರಡನೇ ಲೂಪ್ ರ‍್ಯಾಂಪ್‌ನಲ್ಲಿ ಡಿ.20ರಿಂದ ಪ್ರಾಯೋಗಿಕವಾಗಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿದ್ದು ಈ ಮಾರ್ಗದಲ್ಲಿ ಶೇ 25ರಷ್ಟು ದಟ್ಟಣೆ ಸಮಸ್ಯೆ ತಗ್ಗಿದೆ.

ದಟ್ಟಣೆ ಅವಧಿಯಾದ ಬೆಳಿಗ್ಗೆ ಹಾಗೂ ಸಂಜೆ ವಾಹನಗಳು ಸರಾಗವಾಗಿ ಸಂಚರಿಸುತ್ತಿವೆ ಎಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಸಂಚಾರ ಪೊಲೀಸರು ಹೇಳಿದ್ದಾರೆ.

ಕಾಮಗಾರಿಯಿಂದ ಕಳೆದ ಕೆಲವು ತಿಂಗಳಿಂದ ಈ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗುತ್ತಿತ್ತು.

ಬಿಡಿಎ ಎರಡನೇ ಲೂಪ್ ಕಾಮಗಾರಿಯ ಕೆಲಸವನ್ನು ಪೂರ್ಣಗೊಳಿಸಿ ಪ್ರಾಯೋಗಿಕ ವಾಹನ ಸಂಚಾರಕ್ಕೆ ಮುಕ್ತಗೊಳಿಸುವುದರಿಂದ ವಾಹನ ದಟ್ಟಣೆ ಮತ್ತಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮೇಲ್ಸೇತುವೆಯಲ್ಲಿ ಬರುವ ವಾಹನಗಳು ಅಡ್ಡಿ ಇಲ್ಲದೆ, ಮೇಖ್ರಿ ವೃತ್ತದತ್ತ ಸಾಗಬಹುದು.

‘ಯಲಹಂಕ, ಜಕ್ಕೂರು, ಸಹಕಾರನಗರದಿಂದ ಬರುವವರು ನಗರದ ಪ್ರವೇಶಕ್ಕೂ ಸುಲಭವಾಗಿದೆ. ಈ ಹಿಂದೆ ಮೇಖ್ರಿ ವೃತ್ತ ತಲುಪುವುದಕ್ಕೆ 45 ನಿಮಿಷ ಬೇಕಿತ್ತು. ಈಗ ಐದೇ ನಿಮಿಷದಲ್ಲಿ ತಲುಪುತ್ತಿದ್ದೇವೆ’ ಎಂದು ಸವಾರ ಕೃಷ್ಣಕುಮಾರ್ ಹೇಳಿದರು.

ಆಗಸ್ಟ್‌ನಲ್ಲಿ ಕೆ.ಆರ್ ಪುರದಿಂದ ಮೇಖ್ರಿ ವೃತ್ತದ ಕಡೆಗೆ ಮೊದಲ ಲೂಪ್ ರ‍್ಯಾಂಪ್‌ನಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಅದರ ಮುಂದುವರಿದ ಭಾಗವಾಗಿ, ನೇರವಾಗಿ ಮೇಖ್ರಿ ವೃತ್ತಕ್ಕೆ ವಾಹನಗಳು ಸಂಚರಿಸಲು ಎರಡನೇ ಲೂಪ್ ಅವಕಾಶ ಮಾಡಿಕೊಟ್ಟಿದೆ. ಹೆಬ್ಬಾಳದಲ್ಲಿ ವಾಹನ ದಟ್ಟಣೆ ಕಡಿಮೆಯಾಗಿದೆ. ಆದರೆ, ಮುಂದಿನ ಸಿಬಿಐ ವೃತ್ತದ ಜಂಕ್ಷನ್ ಬಳಿ ವಾಹನ ದಟ್ಟಣೆ ಹೆಚ್ಚಾಗಿದೆ. ಹೆಬ್ಬಾಳ ಜಂಕ್ಷನ್‌ನಿಂದ ಸುಗಮವಾಗಿ ವಾಹನಗಳು ಸಾಗುವುದರಿಂದ ಮುಂದಿನ ಸಿಬಿಐ ಜಂಕ್ಷನ್‌ನಲ್ಲಿ ಸಮಸ್ಯೆಯಾಗಿದೆ. ಮೇಖ್ರಿ ವೃತ್ತದಲ್ಲೂ ಎಡ, ಬಲ ತಿರುಗುವ ವಾಹನಗಳು ಹೆಚ್ಚಾಗಿದ್ದು, ದಟ್ಟಣೆ ಉಂಟಾಗುತ್ತಿದೆ.



ಹೆಬ್ಬಾಳ ಮಾರ್ಗದ ಎರಡನೇ ಲೂಪ್‌ನಲ್ಲಿ ವಾಹನ ಸಂಚಾರದ ದೃಶ್ಯ
ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

‘ಅನುಕೂಲ ಆಗಿದೆ’

ಹೆಬ್ಬಾಳ ಮೇಲ್ಸೇತುವೆಯ ಹೊಸ ಲೂಪ್ ರ‍್ಯಾಂಪ್‌ನಿಂದ ಯಲಹಂಕ, ಸಹಕಾರನಗರ, ಜಕ್ಕೂರು, ತುಮಕೂರು ರಸ್ತೆಯ ವಾಹನಗಳು ನಗರ ಪ್ರವೇಶಿಸಲು ಅನುಕೂಲ ಆಗಿದೆ. ಅಲ್ಲದೇ ಎಸ್ಟೀಮ್ ಮಾಲ್ ಮತ್ತು ತುಮಕೂರು ರಸ್ತೆ ವಾಹನ ಸವಾರರು ಮೇಖ್ರಿ ವೃತ್ತ ಪ್ರವೇಶಕ್ಕೂ ತುಂಬಾ ಸಹಕಾರವಾಗಿದೆ ಎಂದು ವಾಹನ ಸವಾರರು ಹೇಳಿದರು.

‘ಮೂರ್ಖ, ಕಿಲ್ ಯೂ: ಅಧಿಕಾರಿ ಬೈಗುಳ’

ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ವಿರುದ್ಧ ನೌಕರರ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೌಕರರಿಗೆ ಮೂರ್ಖ, ದಡ್ಡ, ಐ ವಿಲ್ ಕಿಲ್ ಯೂ, ಐ ವಿಲ್ ಹ್ಯಾಂಗ್ ಯೂ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಮಾನಸಿಕ ಹಿಂಸೆ ನೀಡುತ್ತಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಧ್ಯ ಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು’ ಎಂದು ಜಿಬಿಎ -ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘವು ಮನವಿ ಮಾಡಿದೆ.

‘ಮುನೀಶ್ ಮೌದ್ಗಿಲ್ ಅವರು ಎರಡು ವರ್ಷ ಎಂಟು ತಿಂಗಳ ಹಿಂದೆ ಅವೈಜ್ಞಾನಿಕ ತಂತ್ರಾಂಶ ಜಾರಿಗೆ ತಂದಿದ್ದು, ಪ್ರತಿ ದಿನ ಬೆಳಿಗ್ಗೆ 8.30ಕ್ಕೆ ಅಧಿಕಾರಿಗಳು ಮತ್ತು ನೌಕರರೊಂದಿಗೆ ವಿಡಿಯೊ ಸಂವಾದ ನಡೆಸುತ್ತಾರೆ. ಆ ಸಂದರ್ಭದಲ್ಲಿ ಅವಾಚ್ಯವಾಗಿ ನಿಂದಿಸುತ್ತಾರೆ. ಬೆಳಿಗ್ಗೆ ಮನೆಯಲ್ಲಿ ಹೆತ್ತವರು ಮಕ್ಕಳು, ಪತಿ/ಪತ್ನಿ ಮುಂದೆಯೇ ಮಾನಸಿಕ ಚಿತ್ರಹಿಂಸೆ ಅನುಭವಿಸುವಂತಾಗಿದೆ’ ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ಅವರು ಶಿವಕುಮಾರ್ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ದೂರಿದ್ದಾರೆ.

‘ಉನ್ನತ ಅಧಿಕಾರಿಗಳಿಂದ ಹಿಡಿದು ಪಾಲಿಕೆಯ ಉಪ ಆಯುಕ್ತರು, ಕಂದಾಯ ಅಧಿಕಾರಿ, ಸಹ ಕಂದಾಯ ಅಧಿಕಾರಿ, ಮೌಲ್ಯ ಮಾಪಕರು, ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರವರೆಗೆ ಎಲ್ಲರೂ ಬೈಗುಳಗಳಿಗೆ ತುತ್ತಾಗುತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಇಂಥ ಅಧಿಕಾರಿಯನ್ನು ಕಂಡಿಲ್ಲ’

‘ಬೆಂಗಳೂರು ಸಿಟಿ ಕಾರ್ಪೊರೇಷನ್, ಬೆಂಗಳೂರು ಮಹಾನಗರ ಪಾಲಿಕೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಲಿ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಸೇರಿ 30 ವರ್ಷಗಳಿಂದ ಕೆಲಸ ಮಾಡುತ್ತಿದ್ದೇವೆ. ಇಲ್ಲಿವರೆಗೆ ಇಂಥ ಅಧಿಕಾರಿಯನ್ನು ನೋಡಿಲ್ಲ. ಪಾಲಿಕೆ ಅಧಿಕಾರಿಗಳು, ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ, ಆತ್ಮಸ್ಥೈರ್ಯ ಕುಗ್ಗಿಸಿ ಕೆಲಸ ತೆಗೆದುಕೊಳ್ಳುವ, ಮಾನಸಿಕ ಕಿರುಕುಳ ನೀಡುವ ಅಧಿಕಾರಿಯನ್ನು ಕಂಡಿಲ್ಲ’ ಎಂದು ಎ. ಅಮೃತ್‌ರಾಜ್ ಹೇಳಿದ್ದಾರೆ.

ಒಂದು ತಿಂಗಳ ಮರಿಯಾನೆ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ: ತಾಲ್ಲೂಕಿನ ಕೋಡಿಹಳ್ಳಿ ಹೋಬಳಿಯ ಹುಣಸನಹಳ್ಳಿ ವ್ಯಾಪ್ತಿಯ ರಾಮದೇವರ ಬೆಟ್ಟದ ಅರಣ್ಯ ಪ್ರದೇಶದಲ್ಲಿ ಒಂದು ತಿಂಗಳ ಆನೆ ಮರಿಯೊಂದು ಸಾವನ್ನಪ್ಪಿದೆ.

ಆನೆಗಳ ಹಿಂಡೊಂದು ನಾಲ್ಕೈದು ದಿನಗಳಿಂದ ಅರಣ್ಯ ಪ್ರದೇಶದಲ್ಲಿ ನಿರಂತರವಾಗಿ ಗೀಳಿಡುತ್ತಿತ್ತು. ಇದರಿಂದ ಅನುಮಾನಗೊಂಡ ಗ್ರಾಮಸ್ಥರು ಸ್ಥಳಕ್ಕೆ ಹೋಗಿ ನೋಡಿದಾಗ ಆನೆ ಮರಿ ಸಾವನ್ನಪ್ಪಿರುವುದು ಬೆಳಕಿಗೆ ಬಂದಿದೆ. ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ಬನ್ನೇರುಘಟ್ಟ ಉದ್ಯಾನದ ಪಶು ವೈದ್ಯ ವಿನಯ್, ಮೃತ ಆನೆ ಮರಿಯ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಅರಣ್ಯದಲ್ಲಿಯೇ ಕಳೇಬರಹದ ಅಂತ್ಯಸಂಸ್ಕಾರ ನಡೆಸಲಾಯಿತು.

ಡಿಜಿಟಲ್ ಆರ್ಥಿಕತೆಗೆ ಕೈಜೋಡಿಸಿದ ಕೆಡಿಇಎಂ–ಎಫ್‌ಕೆಸಿಸಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನಾಚೆಗೆ ಕರ್ನಾಟಕದ ಡಿಜಿಟಲ್ ಆರ್ಥಿಕತೆಯನ್ನು ವೇಗಗೊಳಿಸುವ ಉದ್ದೇಶದಿಂದ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ) ಮತ್ತು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ಒಪ್ಪಂದಕ್ಕೆ ಸಹಿ ಹಾಕಿವೆ.

ಜಿಲ್ಲೆಗಳಲ್ಲಿ ಮತ್ತು ಕ್ಲಸ್ಟರ್ ಮಟ್ಟದಲ್ಲಿ ಕಾರ್ಯ ನಿರ್ವಹಿಸುವ ಮೂಲಕ ಹೊಸ ಹೂಡಿಕೆಗಳನ್ನು ಸಾಧ್ಯವಾಗಿಸುವುದು, ಉದ್ಯಮಶೀಲತೆಯನ್ನು ವೇಗಗೊಳಿಸುವುದು ಮತ್ತು ತಂತ್ರಜ್ಞಾನ ಆಧಾರಿತ ಬೆಳವಣಿಗೆ ಉಂಟಾಗುವಂತೆ ಮಾಡುವುದು ನಮ್ಮ ಗುರಿಯಾಗಿದೆ’ ಎಂದು ಕೆಡಿಇಎಂನ ಸಿಇಒ ಸಂಜೀವ್ ಕುಮಾರ್ ಗುಪ್ತಾ ಹೇಳಿದರು.

‘ಈ ಒಡಂಬಡಿಕೆಯು ಕರ್ನಾಟಕದ ಡಿಜಿಟಲ್ ಆರ್ಥಿಕತೆಯಲ್ಲಿ ಭಾಗವಹಿಸಲು ಉದ್ಯಮಗಳಿಗೆ ಸ್ಪಷ್ಟ ಮಾರ್ಗಸೂಚಿಯನ್ನು ನೀಡುತ್ತದೆ. ನಮ್ಮ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಗಳು ಮತ್ತು ಸದಸ್ಯ ಜಾಲದ ಮೂಲಕ ಕೆಡಿಇಎಂನೊಂದಿಗೆ ಕೆಲಸ ಮಾಡಿ ಉದ್ಯಮಗಳು, ನವೋದ್ಯಮಗಳು ಮತ್ತು ಎಂಎಸ್‌ಎಂಇಗಳಿಗೆ ಹೂಡಿಕೆ, ಕೌಶಲ ಮತ್ತು ಹೊಸ ಆವಿಷ್ಕಾರ ಅವಕಾಶಗಳನ್ನು ಹೊಂದುವ ಸಂಪರ್ಕ ಒದಗಿಸುತ್ತೇವೆ’ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಹೇಳಿದ್ದಾರೆ.

ಡಿ.28ರವರೆಗೆ ಮಲಬಾರ್ ಬ್ರೈಡ್ಸ್ ಆಫ್ ಇಂಡಿಯಾ ಪ್ರದರ್ಶನ

ಬೆಂಗಳೂರು: ವಿಶ್ವದ ಆಭರಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಬೆಂಗಳೂರಿನ ಎಂಜಿ ರಸ್ತೆಯ ತನ್ನ ಶೋರೂಂನಲ್ಲಿ ಜನಪ್ರಿಯ ‘ಬ್ರೈಡ್ಸ್ ಆಫ್ ಇಂಡಿಯಾ’ ಅಭಿಯಾನ ಆರಂಭಿಸಿದೆ. ಕಳೆದ ಡಿ.20ರಂದು ಆರಂಭಗೊಂಡ ಈ ಅಭಿಯಾನ ಡಿ.28ರವರೆಗೆ ನಡೆಯಲಿದ್ದು, ದೇಶೀಯ ಸಂಸ್ಕೃತಿ, ಸಂಪ್ರದಾಯ ಬಿಂಬಿಸುವ ವಿಭಿನ್ನ ಆಕೃತಿ, ವಿನ್ಯಾಸಗಳ ಆಭರಣಗಳ ಸಂಗ್ರಹವನ್ನು ಈ ಅಭಿಯಾನ ಗ್ರಾಹಕರ ಮುಂದಿಡುತ್ತಿದೆ. ಮದುವೆಯ ವಿಶೇಷ ಕ್ಷಣಗಳಿಗೆ ವಧುವಿನ ಸಂಭ್ರಮ ಹೆಚ್ಚಿಸುವ ನಿಟ್ಟಿನಲ್ಲಿ ಈ ಅಭಿಯಾನದ ಸಂಗ್ರಹ ಸಾಕಷ್ಟು ಖ್ಯಾತಿ ಪಡೆದುಕೊಂಡಿದೆ. ಮಲಬಾರ್ ಆರಂಭಿಸಿದ್ದ ಬ್ರೈಡ್ಸ್ ಆಫ್ ಇಂಡಿಯಾ ಅಭಿಯಾನ ಕಳೆದೆಲ್ಲಾ ಆವೃತ್ತಿಗಳನ್ನು ಯಶಸ್ವಿಯಾಗಿ ಮುಗಿಸಿ, ಈ ಬಾರಿ ತನ್ನ 15ನೇ ಆವೃತ್ತಿಯನ್ನು ಅತ್ಯಂತ ಸಡಗರದಿಂದ ಬೆಂಗಳೂರಿನಲ್ಲಿ ನಡೆಸುತ್ತಿದೆ.



ಮಲಬಾರ್ ಗ್ರೂಪ್‌ನ ಅಧ್ಯಕ್ಷ ಎಂ.ಪಿ. ಅಹಮದ್ ಮಾತನಾಡಿ, ‘ಭಾರತೀಯ ಮದುವೆಗಳಲ್ಲಿ ವಧುವಿನ ಭಾವನಾತ್ಮಕ ಮತ್ತು ಸಾಂಸ್ಕೃತಿಕ ಹಿನ್ನೆಲೆಗಳನ್ನು ಗೌರವಿಸಲೆಂದೇ ಮಲಬಾರ್ ‘ಬ್ರೈಡ್ಸ್ ಆಫ್ ಇಂಡಿಯಾ’ ಅಭಿಯಾನ ಶುರು ಮಾಡಿದೆ. ಪ್ರತಿಯೊಂದು ಆವೃತ್ತಿಯಲ್ಲೂ ಆಯಾ ಕಾಲಘಟ್ಟದ ವಧುಗಳ ನಿರೀಕ್ಷೆಗಳು, ಅಭಿರುಚಿಗಳಿಗೆ ತಕ್ಕಂತೆ ವಿಭಿನ್ನ ಶೈಲಿಯ ವಿನ್ಯಾಸಗಳೊಂದಿಗೆ ಆಭರಣ ರಚಿಸುವ ವ್ಯವಸ್ಥೆಯನ್ನು ಅಭಿಯಾನ ಒಳಗೊಂಡಿತ್ತು. ಇದೇ ಹಾದಿಯಲ್ಲಿ 15ನೇ ಆವೃತ್ತಿ ಬೆಂಗಳೂರಿನಲ್ಲಿ ಚಾಲನೆ ಪಡೆದಿದ್ದು, ಕಲೆ ಮತ್ತು ಸಂಸ್ಕೃತಿಯನ್ನು ಅತ್ಯಂತ ಗೌರವಿಸಿ ಆತ್ಮೀಯ ದೃಷ್ಟಿಕೋನದಲ್ಲಿ ನೋಡುವ ಜನರ ನಡುವೆ ಅಭಿಯಾನ ನಡೆಯುತ್ತಿದೆ. ಗ್ರಾಹಕರ ನಿರೀಕ್ಷೆಗಳಿಗೆ ತಕ್ಕಂತೆ ಮಲಬಾರ್ ಗುಣಮಟ್ಟ ಮತ್ತು ಪಾರದರ್ಶಕತೆಗೆ ಹೆಚ್ಚಿನ ಒತ್ತು ನೀಡಿ, ತನ್ನ ವಿಶ್ವಾಸಾರ್ಹತೆಯನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳುತ್ತಿದೆ. ಪ್ರಸ್ತುತ, ಆರಂಭಗೊಂಡಿರುವ ಅಭಿಯಾನ ವಧುಗಳಿಗೆ ಹೆಚ್ಚು ಹತ್ತಿರವಾಗುತ್ತದೆ. ಏಕೆಂದರೆ, ಈ ಬಾರಿಯ ಆಭರಣ ಸಂಗ್ರಹದಲ್ಲಿ ದಕ್ಷಿಣ ಭಾರತದ ದೇವಾಲಯಗಳ ಪ್ರತಿಬಿಂಬ ಎಲ್ಲರ ಮೆಚ್ಚುಗೆ ಪಡೆಯಲಿದೆ’ ಎಂದರು.

ಕಾರ್ಯಕ್ರಮದಲ್ಲಿ ಆರ್‌ಎಸ್ ಸ್ಟ್ರೆಂತ್ ಮತ್ತು ಸ್ಪೋರ್ಟ್ಸ್ ಇವೆಂಟ್ಸ್ ಸ್ಥಾಪಕಿ ಮತ್ತು ಇವೆಂಟ್ ನಿರ್ದೇಶಕಿ ರಾಧಿಕಾ ಗಾಂಧಿ, ಸಹ ಸಂಸ್ಥಾಪಕಿ ಮತ್ತು ಇವೆಂಟ್ ನಿರ್ದೇಶಕಿ ಸುಹಾನಿ ಗಾಂಧಿ ಮತ್ತು ಡಿ & ಕೆ ಫ್ಯಾಶನ್ ಸ್ಟೈಲಿಂಗ್ಸ್‌ನ ಎಂಡಿ ಸೀಮಾ ಪೂವಯ್ಯ ಬ್ರೈಡ್ಸ್ ಆಫ್ ಇಂಡಿಯಾ ವಧುಗಳೊಂದಿಗೆ ಸಂವಾದ ನಡೆಸಿದರು. ಮದುವೆ ಸೇರಿದಂತೆ ಶುಭ ಸಮಾರಂಭಗಳಲ್ಲಿ ಆಭರಣಗಳು ಎಷ್ಟು ಪ್ರಮುಖ ಪಾತ್ರ ವಹಿಸುತ್ತವೆ ಎನ್ನುವ ಅಂಶದ ಕುರಿತು ಚರ್ಚಿಸಿದರು. ನಿಶ್ಚಿತಾರ್ಥ, ಮದುವೆ, ಆರತಕ್ಷತೆ, ಮದುವೆಯ ನಂತರದ ಶುಭಸಮಾರಂಭಗಳಲ್ಲಿ ಎಲ್ಲರ ಗಮನ ಸೆಳೆಯುವ ಆಭರಣಗಳ ಮಹತ್ವ ಎಲ್ಲರಿಗೂ ತಿಳಿಸಲಾಯಿತು. ಅಭಿಯಾನದಲ್ಲಿ ವಧುವಿನ ಮಾಂಗಲ್ಯ, ನೆಕ್ಲೇಸ್, ಬಳೆ, ಉಂಗುರ ಸೇರಿ ವಿವಿಧ ಆಭರಣಗಳ ಆಕರ್ಷಕ ಸಂಗ್ರಹ ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

ಪ್ರಸ್ತುತಿ : ಪಿವಿ ಬ್ರ್ಯಾಂಡ್ ಸ್ಪಾಟ್



ಜಿ.ಬಿ. ಹರೀಶ ಮತ್ತು ಪತ್ನಿ ಗಿರಿಜಾ ರೈಕ್ವ ಅವರನ್ನು ಸನ್ಮಾನಿಸಲಾಯಿತು. ಮಲ್ಲೇಪುರಂ ಜಿ. ವೆಂಕಟೇಶ್, ವಿಹಾ ರೈಕ್ವ, ಬಸವರಾಜ ಕಲ್ಗುಡಿ ಉಪಸ್ಥಿತರಿದ್ದರು

‘ಲೇಖಕನಿಗೆ ವಿಚಾರ ಸ್ಪಷ್ಟತೆ ಮುಖ್ಯ’

ಬೆಂಗಳೂರು: ‘ಯಾರೂ ಪ್ರವೇಶಿಸದ ದಾರಿಗಳನ್ನು ಆಯ್ಕೆ ಮಾಡಿಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ಜಿ.ಬಿ. ಹರೀಶ ದೃಢ ಹೆಜ್ಜೆ ಇಟ್ಟಿದ್ದಾರೆ. ಬರವಣಿಗೆಯಲ್ಲಿ ಇನ್ನಷ್ಟು ಪಕ್ವತೆ ಬೆಳೆಸಿಕೊಳ್ಳಬೇಕು’ ಎಂದು ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ್ ಹೇಳಿದರು

ಜಿ.ಬಿ. ಹರೀಶ ಸ್ವರ್ಣಪೂರ್ಣ ಸಮಾರಂಭದಲ್ಲಿ ವಿದಗ್ಧ ಕೃತಿಯನ್ನು ಗುರುವಾರ ಜನಾರ್ಪಣೆಗೊಳಿಸಿ ಅವರು ಮಾತನಾಡಿದರು.

‘ಲೇಖಕನಿಗೆ ಸಮಗ್ರ ಓದಿನ ಹಿನ್ನೆಲೆ ಇರಬೇಕು. ವಿಚಾರ ಸ್ಪಷ್ಟತೆಯನ್ನೂ ಇಟ್ಟುಕೊಳ್ಳಬೇಕಾಗುತ್ತದೆ. ಹರೀಶ್ ಅವರು ಇಂತಹ ಬೌದ್ಧಿಕ ಸಾಮರ್ಥ್ಯವನ್ನು ಸಣ್ಣ ವಯಸ್ಸಿಗೆ ಸಾಬೀತುಪಡಿಸಿದ್ದಾರೆ’ ಎಂದು ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಭಾಷೆ, ಸಾಹಿತ್ಯ ಸಂಚಾಲಕ ಬಸವರಾಜ ಕಲ್ಗುಡಿ ಮಾತನಾಡಿ, ‘ರಾಷ್ಟ್ರೀಯತೆ ನೆಲೆಯಲ್ಲಿ ಹರೀಶ ಅವರು ತಮ್ಮ ಬರವಣಿಗೆ ಹಾದಿ ರೂಪಿಸಿಕೊಂಡಿದ್ದರೂ ಅದರಲ್ಲಿ ಭಿನ್ನತೆಯನ್ನೂ ತೋರಿದ್ದಾರೆ’ ಎಂದರು.

ಜಿ.ಬಿ.ಹರೀಶ ಅವರ ಸಾಹಿತ್ಯ ಕುರಿತು ದಾವಣಗೆರೆ ಸಿದ್ದಗಂಗಾ ಪಿಯು ಕಾಲೇಜು ಇಂಗ್ಲಿಷ್ ಉಪನ್ಯಾಸಕ ಆರ್.ಎಸ್.ಗಣೇಶ್ ಪ್ರಸಾದ್, ಸಂಶೋಧನೆ ಹಾಗೂ ದರ್ಶನಗಳು ಕುರಿತು ಪುರಾತತ್ವ ಸಂಶೋಧಕ ಎಸ್.ಕಾರ್ತಿಕ್, ವೈಚಾರಿಕ ಸಾಹಿತ್ಯ ಮತ್ತು ಉಪನ್ಯಾಸ ಕುರಿತು ಲೇಖಕ ಹರ್ಷ ಸಮೃದ್ಧ ಮಾತನಾಡಿದರು.

‘ಐಎಎಸ್: ಆಸ್ತಿ ವಿವರ ಸಲ್ಲಿಸದಿದ್ದರೆ ಕ್ರಮ’

ನವದೆಹಲಿ (ಪಿಟಿಐ): ಭಾರತೀಯ ಆಡಳಿತ ಸೇವೆಯ (ಐಎಎಸ್) ಅಧಿಕಾರಿಗಳು ಸಕಾಲದಲ್ಲಿ ತಮ್ಮ ಆಸ್ತಿ ವಿವರಗಳನ್ನು ಸಲ್ಲಿಸದಿದ್ದರೆ ಬಡ್ತಿ ನಿರಾಕರಣೆ ಸೇರಿದಂತೆ ಶಿಸ್ತು ಕ್ರಮ ಎದುರಿಸಬೇಕಾಗುತ್ತದೆ ಎಂದು ಕೇಂದ್ರ ಸರ್ಕಾರ ಎಚ್ಚರಿಕೆ ನೀಡಿದೆ.

ಎಲ್ಲ ಅಧಿಕಾರಿಗಳು ಮುಂದಿನ ಜನವರಿ 31ರೊಳಗಾಗಿ ಸ್ಥಿರಾಸ್ತಿಯ ವಿವರಗಳನ್ನು ಸಲ್ಲಿಸಬೇಕು ಎಂದು ಕೇಂದ್ರ ಸಿಬ್ಬಂದಿ ಸಚಿವಾಲಯ ಪ್ರಕಟಣೆ ಹೊರಡಿಸಿದೆ.

ಕಾಲು ಜಾರಿ ಬಿದ್ದಿದ್ದ ಫ್ರಾನ್ಸ್ ಪ್ರಜೆ ರಕ್ಷಣೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಹಂಪಿಯ ಅಷ್ಟಭುಜ ಸ್ನಾನದ ಕೊಳ ಬಳಿ ಗುಡ್ಡ ಹತ್ತಲು ಯತ್ನಿಸಿ ಕಾಲು ಜಾರಿ ಬಿದ್ದಿದ್ದ ಫ್ರಾನ್ಸ್‌ನ ಬ್ರೂನೊ ರೋಜರ್ (52) ಎಂಬುವರನ್ನು ಎರಡು ದಿನಗಳ ಬಳಿಕ ರಕ್ಷಿಸಿ, ಕೊಪ್ಪಳ ಆಸ್ಪತ್ರೆಗೆ ದಾಖಲಿಸಲಾಗಿದೆ.

‘ಡಿ.24ರ ಸಂಜೆ 6 ಗಂಟೆಗೆ ಗುಡ್ಡ ಹತ್ತಲು ಯತ್ನಿಸಿದ್ದ ಬ್ರೂನೊ ರೋಜರ್ ಕಾಲು ಜಾರಿ ಬಿದ್ದಿದ್ದರು. ಅದು ನಿರ್ಜನ ಪ್ರದೇಶವಾಗಿತ್ತು. ಕಾಲಿಗೆ ತೀವ್ರ ಗಾಯಗೊಂಡಿದ್ದರಿಂದ ಅವರು ಎರಡು ದಿನ ಅಲ್ಲೇ ಇದ್ದರು. ನಂತರ ತೆವಳಿಕೊಂಡು ಸಮೀಪದ ಬಾಳೆ ತೋಟಕ್ಕೆ ಶುಕ್ರವಾರ ಬಂದರು. ರೈತರು ಪೊಲೀಸ್ ಇಲಾಖೆಗೆ ಮಾಹಿತಿ ನೀಡಿದರು. ನಂತರ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಸಹಯೋಗದಲ್ಲಿ ರೋಜರ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ‘ಬ್ರೂನೊ ಅವರು ಫ್ರಾನ್ಸ್‌ನಿಂದ ಒಬ್ಬರೇ ಹಂಪಿಗೆ ಬಂದಿದ್ದಾರೆ. ಸದ್ಯ ಪ್ರಾಣಾಪಾಯದಿಂದ ಪಾರಾಗಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಜೆಡಿಎಸ್ ಸ್ವತಂತ್ರ ಸ್ಪರ್ಧೆ: ದೇವೇಗೌಡ

‘ಜಿ.ಪಂ,ತಾ.ಪಂ ಚುನಾವಣೆಗಳಲ್ಲಿ ಬಿಜೆಪಿ ಜತೆ ಹೊಂದಾಣಿಕೆ ಕಷ್ಟ’

ಪ್ರಜಾವಾಣಿ ವಾರ್ತೆ


ದೇವೇಗೌಡ

ಬೆಂಗಳೂರು: ‘ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿ ಜತೆಗೆ ಹೊಂದಾಣಿಕೆ ಕಷ್ಟವಾಗಲಿದೆ. ಅಲ್ಲೆಲ್ಲಾ ಜೆಡಿಎಸ್ ಸ್ವಂತ ಬಲದಲ್ಲಿ ಸ್ಪರ್ಧಿಸಲಿದೆ’ ಎಂದು ಪಕ್ಷದ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಲೋಕಸಭೆ, ರಾಜ್ಯಸಭೆ, ವಿಧಾನಸಭೆ ಮತ್ತು ವಿಧಾನ ಪರಿಷತ್ತುಗಳಿಗೆ ನಡೆಯುವ ಚುನಾವಣೆಗಳಲ್ಲಿ ಜೆಡಿಎಸ್ ಮತ್ತು ಬಿಜೆಪಿ ಹೊಂದಾಣಿಕೆಯಲ್ಲಿ ಸ್ಪರ್ಧಿಸಲಿವೆ. ಅದರಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಸ್ಪಷ್ಟಪಡಿಸಿದರು.

‘ಆದರೆ, ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಪರಿಸ್ಥಿತಿ ಭಿನ್ನವಾಗಿದೆ. ಅಲ್ಲೆಲ್ಲಾ ಪಕ್ಷದ ಸಂಘಟನೆ ಬಲವಾಗಿದ್ದು, ಸ್ವತಂತ್ರವಾಗಿಯೇ ಸ್ಪರ್ಧಿಸಬೇಕಾಗುತ್ತದೆ. ಹೀಗಾಗಿ ಆ ಹಂತದ ಚುನಾವಣೆಗಳಲ್ಲಿ ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಳ್ಳುವುದು ಕಷ್ಟ’ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

‘ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅಥವಾ ಗೃಹ ಸಚಿವ ಅಮಿತ್ ಶಾ ಅವರ ಜತೆ ಮಾತನಾಡಲು ಸಾಧ್ಯವೇ? ಈ ವಿಚಾರದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರು ತಮ್ಮ ನಿಲುವನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾರೆ. ಹೀಗಾಗಿ ನಾವೂ ನಮ್ಮ ಸ್ವಂತ ಬಲದಲ್ಲಿಯೇ ಚುನಾವಣೆ ಎದುರಿಸುತ್ತೇವೆ. ಕೇರಳದಲ್ಲಿ ಎಡಪಕ್ಷಗಳ ಜತೆಗೆ ಮೈತ್ರಿ ಮಾಡಿಕೊಳ್ಳುತ್ತೇವೆ’ ಎಂದು ವಿವರಿಸಿದರು.

‘ಅಹಿಂದದ ವ್ಯಾಖ್ಯಾನ ಏನು?’: ‘ಅಹಿಂದ ನಾಯಕ ಎಂದು ಓಡಾಡುತ್ತಿರುವವರು ಯಾವಾಗ ಅಹಿಂದ ನಾಯಕರಾಗಿದ್ದರು? ಅಹಿಂದದ ವ್ಯಾಖ್ಯಾನ ಏನು’ ಎಂದು ದೇವೇಗೌಡ ಪ್ರಶ್ನಿಸಿದರು.

ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಮುಸ್ಲಿಮರಿಗೆ ಮೀಸಲಾತಿ ನೀಡಿದವರು ಯಾರು? ನಗರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಿದವರು ಯಾರು? ನಿಜಕ್ಕೂ ಅಹಿಂದ ನಾಯಕರು ಆಗಿದ್ದಿದ್ದರೆ ಸಿದ್ದರಾಮಯ್ಯ ಅವರು ಚುನಾವಣೆಗೆ ಸ್ಪರ್ಧಿಸಲು ಕೋಲಾರ, ಬಾದಾಮಿ ಎಂದು ವರ್ಷಗಳ ಕಾಲ ಕ್ಷೇತ್ರ ಹುಡುಕಬೇಕಿತ್ತೇ’ ಎಂದರು.

‘ಚರ್ಚ್ ಮೇಲಿನ ದಾಳಿ ಖಂಡನೀಯ’

‘ದೇಶದ ಕೆಲವು ರಾಜ್ಯಗಳಲ್ಲಿ ಕ್ರಿಸ್‌ಮಸ್ ಆಚರಣೆ ವೇಳೆ ಚರ್ಚ್‌ಗಳ ಮೇಲೆ ದಾಳಿ ನಡೆದಿದೆ. ಇದು ಹೇಯ ಕೃತ್ಯ. ಇದನ್ನು ನಾವೆಲ್ಲರೂ ಖಂಡಿಸಬೇಕು’ ಎಂದು ದೇವೇಗೌಡ ಹೇಳಿದರು.

‘ಈ ದೇಶದಲ್ಲಿ ಎಲ್ಲ ಧರ್ಮದವರೂ ಇದ್ದಾರೆ. ಚರ್ಚ್ ಮೇಲೆ ದಾಳಿ ನಡೆಯಬಾರದಿತ್ತು. ಆದರೆ ಆಗಿದೆ. ದಾಳಿ ನಡೆಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಲ್ಲಿ ಚರ್ಚ್‌ಗೆ ಹೋಗಿ ಪ್ರಾರ್ಥನೆ ಸಲ್ಲಿಸಿದ್ದಾರೆ. ದಾಳಿಕೋರರ ಮೇಲೆ ಅವರು ಖಂಡಿತಾ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ವಿಶ್ವಾಸವಿದೆ’ ಎಂದರು.

ಕಾಲುವೆಯಲ್ಲಿ ಮುಳುಗಿ ಬಾಲಕರ ಸಾವು

ರಾಮದುರ್ಗ: ತಾಲ್ಲೂಕಿನ ಚುಂಚನೂರು ಸಮೀಪದ ಕಾಲುವೆಯಲ್ಲಿ ಗುರುವಾರ ಈಜಲು ಹೋಗಿದ್ದ ಹನುಮಂತ ದುರ್ಗಪ್ಪ ಹಗೇದ (10) ಮತ್ತು ಸವದತ್ತಿ ತಾಲ್ಲೂಕಿನ ಯಡ್ರಾವಿಯ ಬಸವರಾಜ ರಾಮಪ್ಪ ಸೋಮನ್ನವರ (10) ಮೃತಪಟ್ಟಿದ್ದಾರೆ.

‘ಕುರಿ ಮೇಯಿಸಲು ಪಾಲಕರೊಂದಿಗೆ ಮಕ್ಕಳೂ ತೆರಳಿದ್ದರು. ಕಾಲುವೆ ಬಳಿ ಇಬ್ಬರ ಬಟ್ಟೆಗಳನ್ನು ಕಂಡು ಅವರಿಗೆ ಹುಡುಕಾಡಿದೆವು. ಶುಕ್ರವಾರ ಸಂಜೆ ಇಬ್ಬರ ಶವ ಪತ್ತೆಯಾದವು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಕಾಂಗ್ರೆಸ್ ಆಡಳಿತ ಸಂಪೂರ್ಣ ವೈಫಲ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ಸಂಪೂರ್ಣ ವಿಫಲವಾಗಿದೆ ಎಂಬುದನ್ನು ಪಟ್ಟಣ ಪಂಚಾಯತಿಗಳ ಚುನಾವಣಾ ಫಲಿತಾಂಶವೇ ಸಾಕ್ಷಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಶುಕ್ರವಾರ ಆಯೋಜಿಸಿದ್ದ ‘ವೀರ ಬಾಲಕರ ದಿನಾಚರಣೆ’ ಕಾರ್ಯಕ್ರಮದಲ್ಲಿ, ಪಟ್ಟಣ ಪಂಚಾಯತಿಗಳ ಚುನಾವಣಾ ವಿಜೇತರನ್ನು ಸನ್ಮಾನಿಸಿ ಅವರು ಮಾತನಾಡಿದರು.

‘ಈ ಸರ್ಕಾರದಿಂದ ಯಾರಿಗೂ ಸಂತಸವಿಲ್ಲ. ಅಧಿಕಾರಕ್ಕೆ ಬರುವ ಮುನ್ನ ಕಾಂಗ್ರೆಸ್ ಸಾಕಷ್ಟು ನಿರೀಕ್ಷೆ ಹುಟ್ಟಿಸಿತ್ತು. ಆದರೆ, ಸರ್ಕಾರ ರಚನೆಯಾಗಿ 48 ಗಂಟೆಯಲ್ಲೇ ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆಯ ರಾಜ್ಯದ ಪಾಲನ್ನು ರದ್ದುಪಡಿಸಿತು. ರೈತರಿಗೆ ನಮ್ಮ ಸರ್ಕಾರ ನೀಡುತ್ತಿದ್ದ ₹4,000 ನೆರವನ್ನು ಈ ಸರ್ಕಾರ ನಿಲ್ಲಿಸಿತು’ ಎಂದು ಹೇಳಿದರು.

‘ನಮ್ಮ ಸರ್ಕಾರದ ಹಲವು ಕಾರ್ಯಕ್ರಮಗಳನ್ನು ಈ ಸರ್ಕಾರ ನಿಲ್ಲಿಸಿದೆ. ಜನರ ಸಂಕಷ್ಟಗಳಿಗೂ ಸ್ಪಂದಿಸುತ್ತಿಲ್ಲ. ಉತ್ತರ ಕರ್ನಾಟಕದಲ್ಲಿ ಅತಿವೃಷ್ಟಿಯಾದಾಗ ಸೌಜನ್ಯಕ್ಕಾದರೂ ಒಬ್ಬ ಶಾಸಕ ಅಲ್ಲಿಗೆ ಭೇಟಿ ನೀಡಿಲ್ಲ. ಈ ಸರ್ಕಾರಕ್ಕೆ ಜನರು ಹಿಡಿಶಾಪ ಹಾಕುತ್ತಿದ್ದಾರೆ’ ಎಂದು ಹೇಳಿದರು.


ಈಚೆಗೆ ನಡೆದ ನಾಲ್ಕು ಪಟ್ಟಣ ಪಂಚಾಯಿತಿ ಚುನಾವಣೆಗಳಲ್ಲಿ ವಿಜೇತರಾದ ಬಿಜೆಪಿ ಅಭ್ಯರ್ಥಿಗಳನ್ನು ಪಕ್ಷದ ಕಚೇರಿಯಲ್ಲಿ ಶುಕ್ರವಾರ ಸನ್ಮಾನಿಸಲಾಯಿತು

‘ಚುನಾವಣೆ ನಡೆದರೆ ಬಿಜೆಪಿಗೆ 140 ಸ್ಥಾನ’

‘ರಾಜ್ಯದಲ್ಲಿ ಈಗಲೇ ಚುನಾವಣೆ ನಡೆದರೆ ಬಿಜೆಪಿ 130–140 ಸ್ಥಾನಗಳಲ್ಲಿ ಗೆಲ್ಲಲಿದೆ. ಬಿಜೆಪಿಯೇ ಸರ್ಕಾರ ರಚಿಸಲಿದೆ’ ಎಂದು ವಿಜಯೇಂದ್ರ ಹೇಳಿದ್ದಾರೆ.

ಪಕ್ಷದ ಕಚೇರಿಯಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಅವರು, ‘ಪಟ್ಟಣ ಪಂಚಾಯತಿ ಚುನಾವಣೆ ಫಲಿತಾಂಶವೇ ಇದಕ್ಕೆ ಸಾಕ್ಷಿ. ಕಾಂಗ್ರೆಸ್ ಆಡಳಿತದಿಂದ ಬೇಸತ್ತಿರುವ ಜನರು ಬಿಜೆಪಿಗೆ ಮತ ನೀಡಿದ್ದಾರೆ’ ಎಂದಿದ್ದರು.

ರಥ ಸಮರ್ಪಣೆ


ಉಡುಪಿಯ ಪರ್ಯಾಯ ಪುತ್ತಿಗೆ ಮಠದ ವತಿಯಿಂದ ಶುಕ್ರವಾರ ನಡೆದ ಪಾರ್ಥಸಾರಥಿ ಸುವರ್ಣ ರಥದ ಸಮರ್ಪಣೋತ್ಸವದ ಅಂಗವಾಗಿ ರಥಬೀದಿಯಲ್ಲಿ ರಥವನ್ನು ಬರಮಾಡಿಕೊಳ್ಳಲಾಯಿತು. ಮಂತ್ರಾಲಯದ ಶ್ರೀ ರಾಘವೇಂದ್ರ ಮಠದ ಪೀಠಾಧಿಪತಿ ಸುಬುಧೇಂದ್ರತೀರ್ಥ ಶ್ರೀಪಾದರು, ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಕಿರಿಯ ಶ್ರೀ ಸುಶ್ರೀಂದ್ರ ತೀರ್ಥ ಶ್ರೀಪಾದರು ಉಪಸ್ಥಿತರಿದ್ದರು

ವೈದ್ಯರ ನಿರ್ಲಕ್ಷ್ಯ: ಪೋಷಕರ ಆರೋಪ

ಹಾವೇರಿ: ಶಿಶುವಿನ ತಲೆಗೆ ತಾಗಿದ ಕತ್ತರಿ

ಪ್ರಜಾವಾಣಿ ವಾರ್ತೆ

ಹಾವೇರಿ: ಇಲ್ಲಿನ ಜಿಲ್ಲಾಸ್ಪತ್ರೆ ಆವರಣದಲ್ಲಿರುವ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಹೆರಿಗೆ ಮಾಡುವ ವೇಳೆ ಶಿಶುವಿನ ತಲೆಗೆ ಕತ್ತರಿ ತಾಗಿ ಗಾಯವಾಗಿದ್ದು, ‘ಘಟನೆಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ’ ಎಂದು ಪೋಷಕರು ಆರೋಪಿಸಿದ್ದಾರೆ.

ಸ್ಥಳೀಯ ನಿವಾಸಿ ಮೊಹಮ್ಮದ್ ಮುಜಾಹಿದ್ ಎಂಬುವರ ಪತ್ನಿ ಬೇಬಿ ಅಸ್ಮಾ ಗರ್ಭಿಣಿಯಾಗಿದ್ದರು. ಹೆರಿಗೆ ನೋವು ಹೆಚ್ಚಾಗಿದ್ದರಿಂದ ಆಸ್ಪತ್ರೆಗೆ ಬಂದಿದ್ದರು. ಶುಕ್ರವಾರ ಹೆರಿಗೆ ಮಾಡುವುದಾಗಿ ಹೇಳಿದ್ದ ಡಾ. ಸ್ವಾತಿ ಹಾಗೂ ತಂಡದವರು, ಅವರನ್ನು ಶಸ್ತ್ರ ಚಿಕಿತ್ಸೆ ಕೊಠಡಿಗೆ ಕರೆದೊಯ್ದಿದ್ದರು.

ಹೆರಿಗೆ ಮುಗಿಯುತ್ತಿದ್ದಂತೆ ಶಿಶುವಿನ ಬಗ್ಗೆ ಪೋಷಕರಿಗೆ ಮಾಹಿತಿ ತಿಳಿಸಿದ ವೈದ್ಯರು, ‘ಹೆರಿಗೆ ವೇಳೆ ಹೊಟ್ಟೆಯಿಂದ ಮಗುವನ್ನು ಹೊರಗೆ ತೆಗೆಯಲು ಸಾಕಷ್ಟು ಕಷ್ಟವಾಯಿತು. ಆಗ ಮಗುವಿನ ತಲೆಗೆ ಕತ್ತರಿ ತಾಗಿದೆ. ಎರಡು ಹೊಲಿಗೆ ಹಾಕಿದ್ದೇವೆ’ ಎಂದರು. ವೈದ್ಯರ ಮಾತು ಕೇಳಿ ಪೋಷಕರು ಸಿಟ್ಟಿಗೆದ್ದರು.

ತಲೆಗೆ ಹೊಲಿಗೆ ಹಾಕಿದ ಸ್ಥಿತಿಯಲ್ಲಿಯೇ ಶಿಶುವನ್ನು ಶಸ್ತ್ರಚಿಕಿತ್ಸೆ ಕೊಠಡಿಯಿಂದ ಹೊರಗೆ ತಂದ ವೈದ್ಯರು, ಪೋಷಕರಿಗೆ ನೀಡಿದರು. ಶಿಶುವನ್ನು ನೋಡಿ ಪೋಷಕರು ಕಣ್ಣೀರಿಟ್ಟರು.

‘ಆಸ್ಪತ್ರೆಯಲ್ಲಿ ನಿತ್ಯವೂ ಹೆರಿಗೆಗಳು ಆಗುತ್ತವೆ. ಆದರೆ, ನಮ್ಮ ಮಗುವಿನ ವಿಷಯದಲ್ಲಿ ವೈದ್ಯರು ನಿರ್ಲಕ್ಷ್ಯ ವಹಿಸಿದ್ದಾರೆ. ಅವರ ನಿರ್ಲಕ್ಷ್ಯದಿಂದಲೇ ಮಗುವಿನ ತಲೆಗೆ ಗಾಯವಾಗಿದೆ. ಘಟನೆ ಬಗ್ಗೆ ತನಿಖೆ ನಡೆಸಿ, ತಪ್ಪಿತಸ್ಥ ವೈದ್ಯರ ವಿರುದ್ಧ ಕ್ರಮ ಕೈಗೊಳ್ಳಬೇಕು. ಇದರ ಬಗ್ಗೆ ಪೊಲೀಸರಿಗೆ ದೂರು ನೀಡುತ್ತೇವೆ’ ಎಂದರು. ಇದರ ಬಗ್ಗೆ ಪ್ರತಿಕ್ರಿಯೆ ಪಡೆಯಲು ಜಿಲ್ಲಾಸ್ಪತ್ರೆಯ ಶಸ್ತ್ರಚಿಕಿತ್ಸಕರು ದೂರವಾಣಿ ಸಂಪರ್ಕಕ್ಕೆ ಸಿಗಲಿಲ್ಲ.

ಮತದಾರರ ಪಟ್ಟಿಗೆ ಬಾಲಕರ ಹೆಸರು ಸೇರ್ಪಡೆ: ಆರೋಪ

ಬಾಗಲಕೋಟೆ: ‘ಮುಂಬರುವ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿ ಚುನಾವಣೆಯನ್ನು ಗಮನದಲ್ಲಿ ಇಟ್ಟುಕೊಂಡು ಹುನಗುಂದ ವಿಧಾನಸಭಾ ಕ್ಷೇತ್ರದ ಮುರಡಿ ಗ್ರಾಮದಲ್ಲಿ 18 ವರ್ಷದ ಒಳಗಿನವರನ್ನು ಅನಧಿಕೃತವಾಗಿ ಮತದಾರರ ಪಟ್ಟಿಗೆ ಸೇರಿಸಲಾಗುತ್ತಿದೆ’ ಎಂದು ಹುನಗುಂದ ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಮಂಜುನಾಥ ಗೌಡರ ಆರೋಪಿಸಿದರು.

‘ಮತದಾರರ ಪಟ್ಟಿ ಸೇರ್ಪಡೆ ಸಂದರ್ಭದಲ್ಲಿ ಮುರಡಿ ಗ್ರಾಮದಲ್ಲಿ ಬಾಲಕರ ಹಾಗೂ ಅವರ ಪೋಷಕರ ಮೊಬೈಲ್ ನಂಬರ್ ಬದಲು ಕೆಲವರು ತಮ್ಮ ಮೊಬೈಲ್ ನಂಬರ್ ನೀಡಿ, ಅದಕ್ಕೆ ಒಟಿಪಿ ಬರುವಂತೆ ಮಾಡಿ, ಮತದಾರರ ಪಟ್ಟಿಗೆ ಸೇರಿಸಲಾಗುತ್ತಿದೆ. ಈ ರೀತಿಯ ಪ್ರಕ್ರಿಯೆ ನಡೆಯುತ್ತಿರುವುದು ಪೋಷಕರ ಗಮನಕ್ಕೆ ತಡವಾಗಿ ಬಂದಿದ್ದು, ದಾಖಲೆ ಸಮೇತ ಕ್ರಮ ಕೈಗೊಳ್ಳುವಂತೆ ತಹಶೀಲ್ದಾರ್‌ಗೆ ಕೋರಲಾಗಿತ್ತು’ ಎಂದು ಅವರು ಶುಕ್ರವಾರ ಸುದ್ದಿಗೋಷ್ಠಿ ತಿಳಿಸಿದರು.

‘ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ದೇಶದಾದ್ಯಂತ ಬಿಜೆಪಿ ವಿರುದ್ಧ ವೋಟ್ ಚೋರಿ ಅಭಿಯಾನ ನಡೆಸಿದ್ದಾರೆ. ಆದರೆ, ಇಲ್ಲಿ ಅವರ ಪಕ್ಷದವರೇ ಅನಧಿಕೃತವಾಗಿ ಬಾಲಕರನ್ನು ಮತದಾರರ ಪಟ್ಟಿಗೆ ಸೇರಿಸುತ್ತಿದ್ದಾರೆ’ ಎಂದು ದೂರಿದರು.

ಈ ಕುರಿತು ಪ್ರತಿಕ್ರಿಯಿಸಿದ ಇಳಕಲ್ ತಹಶೀಲ್ದಾರ್ ಅಮರೇಶ ಪಮ್ಮಾರ, ‘ಮತದಾರರ ಪಟ್ಟಿ ನೋಂದಣಿ ವೇಳೆ ಅಪ್‌ಲೋಡ್ ಮಾಡಿದ್ದ ದಾಖಲೆಗಳಲ್ಲಿ 18 ವರ್ಷ ಪೂರ್ಣವಾಗಿರುವ ದಾಖಲೆಗಳನ್ನು ನೀಡಲಾಗಿತ್ತು. ಜನಗಣತಿ ವೇಳೆ ಅವರ ವಯಸ್ಸು 18ಕ್ಕಿಂತ ಕಡಿಮೆ ಇರುವುದು ಗೊತ್ತಾದ ಬಳಿಕ ಏಳು ಜನರ ಹೆಸರನ್ನು ಮತದಾರರ ಪಟ್ಟಿಯಿಂದ ತೆಗೆಯಲಾಗಿದೆ. ಇನ್ನಿಬ್ಬರ ದಾಖಲೆ ಪರಿಶೀಲನೆ ನಡೆಸಲಾಗುತ್ತಿದೆ. ಹೆಸರು ಸೇರ್ಪಡೆ ಮಾಡಿದವರು ಯಾರು ಎಂಬ ಬಗ್ಗೆಯೂ ತನಿಖೆ ನಡೆದಿದೆ’ ಎಂದರು.

ನಾಳೆ ಕದಂಬ ನೌಕಾನೆಲೆಗೆ ರಾಷ್ಟ್ರಪತಿ ಭೇಟಿ



ಕಾರವಾರ: ರಾಷ್ಟ್ರಪತಿ ದ್ರೌಪದಿ ಮುರ್ಮು ಭಾನುವಾರ (ಡಿ.28) ಇಲ್ಲಿನ ಕದಂಬ ನೌಕಾನೆಲೆಗೆ ಭೇಟಿ ನೀಡಲಿದ್ದು, ಜಲಾಂತರ್ಗಾಮಿ ಯುದ್ಧನೌಕೆಯೊಳಗೆ ಸಮುದ್ರದಲ್ಲಿ ಸಂಚರಿಸುವರು.

‘ರಾಷ್ಟ್ರಪತಿ ಭೇಟಿ ಮತ್ತು ಸಮುದ್ರದೊಳಗೆ ಅವರು ಸಂಚರಿಸುವ ಹಿನ್ನೆಲೆಯಲ್ಲಿ ಅಂದು ಬೆಳಿಗ್ಗೆಯಿಂದ ಮಧ್ಯಾಹ್ನ 3.30ರವರೆಗೆ ಕಾರವಾರ ತಾಲ್ಲೂಕಿನ ಮಾಜಾಳಿಯಿಂದ ಹಾರವಾಡವರೆಗೆ 18 ಕಿ.ಮೀ ವ್ಯಾಪ್ತಿಯಲ್ಲಿ ಮೀನುಗಾರಿಕೆ ಚಟುವಟಿಕೆಗೆ ನಿಷೇಧವಿರುತ್ತದೆ’ ಎಂದು ಉತ್ತರಕನ್ನಡ ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದ್ದಾರೆ.

‘ಜೀವನದ ಸಮತೋಲನಕ್ಕೆ ಆಯುರ್ವೇದ’

ಹರಿಹರಪುರ ಮಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಯುರ್ವೇದವು ಕೇವಲ ದೇಹಕ್ಕೆ, ರೋಗಕ್ಕೆ ಔಷಧ ನೀಡುವ ಪದ್ಧತಿಯಲ್ಲ. ಅದು ಜೀವನದ ಸಮತೋಲನವನ್ನು ಕಾಪಾಡುವ ವೈದ್ಯ ಪದ್ಧತಿ ಎಂದು ಹರಿಹರಪುರ ಮಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ ಹೇಳಿದರು.

ಆಯುಷ್ ಸಚಿವಾಲಯ ಹಾಗೂ ರಾಜ್ಯ ಆಯುಷ್ ಇಲಾಖೆಯ ಸಹಯೋಗದಲ್ಲಿ ಕಜೆ ಆಯುರ್ವೆದಿಕ್ ಚಾರಿಟೆಬಲ್ ಫೌಂಡೇಷನ್ ಹಮ್ಮಿಕೊಂಡಿರುವ ನಾಲ್ಕು ದಿನಗಳ ಆಯುರ್ವೇದ ವಿಶ್ವ ಸಮ್ಮೇಳನದ ಎರಡನೇ ದಿನ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಮನುಷ್ಯನು ಕಫ, ಪಿತ್ತ, ವಾಯುಗಳನ್ನು ಸಮತೋಲನದಲ್ಲಿಟ್ಟುಕೊಂಡು ತನ್ನ ದೇಹದ ಸಮತೋಲನ ಕಾಪಾಡಿಕೊಳ್ಳಬೇಕಾಗುತ್ತದೆ. ದೇಹ, ಮನಸ್ಸು, ಇಂದ್ರಿಯ, ಬುದ್ಧಿ, ಅಹಂಕಾರ, ಚಿತ್ತ, ಪ್ರಾಣವನ್ನು ಪ್ರತಿಕ್ಷಣ ಬೆಳಗುವ ಆತ್ಮಶಕ್ತಿಯನ್ನು ಅನುಭವದಲ್ಲಿ ಕಂಡುಕೊಳ್ಳುವ ವಿಧಾನವನ್ನು ಆಯುರ್ವೇದ ಹೇಳಿಕೊಡುತ್ತದೆ’ ಎಂದು ವಿವರಿಸಿದರು.

‘ಒಂದು ದೇಶದಲ್ಲಿ ಉಗಮವಾದ ಆಧ್ಯಾತ್ಮಿಕ, ಧಾರ್ಮಿಕ, ಸಾಹಿತ್ಯಿಕ, ಕಲಾತ್ಮಕ, ಐತಿಹಾಸಿಕ, ವೈಜ್ಞಾನಿಕ, ಭೌಗೋಳಿಕ, ವೈದ್ಯಕೀಯ ಮುಂತಾದ ಮೌಲ್ಯಗಳು ಕ್ರಮಬದ್ಧವಾಗಿ, ವ್ಯವಸ್ಥಿತವಾಗಿ ಪ್ರವಹಿಸುತ್ತ ತಲೆಮಾರಿನಿಂದ ತಲೆಮಾರಿಗೆ ಸಾಗುತ್ತಾ ಜನಮಾನಸದಲ್ಲಿ ಸ್ಥಿರವಾಗಿ ನೆಲೆನಿಂತು ಜನಜೀವನದಲ್ಲಿ ಅಭಿವ್ಯಕ್ತವಾದಾಗ ಅದನ್ನು ಆ ದೇಶದ ಸಂಸ್ಕೃತಿ ಎಂದು ಕರೆಯುತ್ತೇವೆ. ಇಂಥ ಸಂಸ್ಕೃತಿ ಸೇರಿರುವಂಥದ್ದು ಆಯುರ್ವೇದ ಪದ್ಧತಿ’ ಎಂದು ತಿಳಿಸಿದರು.

‘ಭಾರತೀಯ ಸಂಸ್ಕೃತಿಯಲ್ಲಿ ಜನಿಸಿ ವಿಕಾಸವಾದ ವೈದ್ಯ ಪದ್ಧತಿಯಾದ ಆಯುರ್ವೇದವು ಜಗತ್ತಿನಾದ್ಯಂತ ಹರಡಬೇಕು. ಇದು ನಮ್ಮ ಬದುಕಿನ ಮೂಲವಾಗಬೇಕು’ ಎಂದು ಆಶಿಸಿದರು.

ಆಯುರ್ವೇದ ಸಮ್ಮೇಳನದ ರೂವಾರಿ ಗಿರಿಧರ ಕಜೆ ಮಾತನಾಡಿ, ‘ರೋಗ ಬಂದಾಗ ನಿವಾರಣೆಯನ್ನು ಆಯುರ್ವೇದ ಸೂಚಿಸುತ್ತದೆ. ಜೊತೆಗೆ ಆರೋಗ್ಯವಾಗಿರುವವರು ರೋಗ ಬಾರದಂತೆ ಏನು ಮಾಡಬೇಕು ಎಂಬುದನ್ನೂ ಆಯುರ್ವೇದ ತಿಳಿಸಿಕೊಡುತ್ತದೆ. ದೇಹದ ಆರೋಗ್ಯದಷ್ಟೇ ಮಾನಸಿಕ ಆರೋಗ್ಯವೂ ಮುಖ್ಯ. ಆರೋಗ್ಯ ಮತ್ತು ಸ್ವಾಸ್ಥ್ಯ ಎರಡೂ ಕಾಪಾಡಿಕೊಳ್ಳಲು ಆಯುರ್ವೇದ ಅಗತ್ಯ’ ಎಂದು ಹೇಳಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮಾತನಾಡಿ, ‘ನಮ್ಮ ಸಂಸ್ಕೃತಿ ಹಾಗೂ ಜೀವನ ಪದ್ಧತಿಯನ್ನು ಮರು ಪರಿಷ್ಕರಿಸಿಕೊಳ್ಳುವ ಜವಾಬ್ದಾರಿ ನಮ್ಮೆಲ್ಲರ ಮೇಲಿದ್ದು, ಮುಂದಿನ ಪೀಳಿಗೆಯನ್ನು ಸ್ವಾಸ್ಥ್ಯದಿಂದಿರಿಸಿ ಭಾರತ ವಿಶ್ವಗುರುವಾಗಲು ಆಯುರ್ವೇದ ಅಗತ್ಯ’ ಎಂದು ಅಭಿಪ್ರಾಯಪಟ್ಟರು.

ಕೇಂದ್ರದ ಮಾಜಿ ಸಚಿವ ಡಿ.ವಿ. ಸದಾನಂದ ಗೌಡ ಮಾತನಾಡಿ, ‘ಆಧುನಿಕ ವೈದ್ಯಕೀಯ ಪದ್ಧತಿ ತತ್ಕಾಲದ ಪರಿಹಾರವನ್ನು ಸೂಚಿಸಿದರೆ ಆಯುರ್ವೇದ ದೀರ್ಘಕಾಲಿಕ ಪರಿಹಾರವನ್ನು ನೀಡುತ್ತದೆ. ಆಯುರ್ವೇದ ನಮ್ಮ ನೆಲಮೂಲದ ಪದ್ಧತಿ’ ಎಂದು ಹೇಳಿದರು.

ಗೌರಿಗದ್ದೆಯ ಅವಧೂತ ವಿನಯ್ ಗುರೂಜಿ, ರಾಮಕೃಷ್ಣ ಮಠದ ಸೌಖ್ಯಾನಂದ ಸ್ವಾಮೀಜಿ, ವಿಆರ್‌ಎಲ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ವಿಜಯ್ ಸಂಕೇಶ್ವರ ಉಪಸ್ಥಿತರಿದ್ದರು.

ಪ್ರಮುಖ ಅಂಶಗಳು

- ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ತಾಂತ್ರಿಕ ಉಪನ್ಯಾಸಗಳು ಬೇರೆ ಬೇರೆ ವೇದಿಕೆಗಳಲ್ಲಿ ನಡೆಯಿತು. ವಿದ್ಯಾರ್ಥಿಗಳು ಭಾರಿ ಸಂಖ್ಯೆಯಲ್ಲಿ ಭಾಗವಹಿಸಿದ್ದರು.
- 2ನೇ ದಿನವೂ 100 ಸಾಧಕರಿಗೆ ಆಯುರ್ವೇದ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು
- ಚೆಂಡೆ ವಾದನಕ್ಕೆ ಕಲ್ಲಡ್ಕ ಗೊಂಬೆಗಳೊಂದಿಗೆ ಯುವಜನರು ಹೆಜ್ಜೆ ಹಾಕಿ ಸಂಭ್ರಮಿಸಿದರು.



ಎರಡನೇ ಆಯುರ್ವೇದ ವಿಶ್ವ ಸಮ್ಮೇಳನದಲ್ಲಿ ಶುಕ್ರವಾರ ಗೊಂಬೆಗಳೊಂದಿಗೆ ಯುವತಿಯರು ನೃತ್ಯ ಮಾಡಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ

ನ್ಯಾಯಾಲಯಕ್ಕೆ ಹಾಜರಾದ ಸಾಕ್ಷಿ ದೂರುದಾರ

ಬೆಳ್ತಂಗಡಿ (ದಕ್ಷಿಣ ಕನ್ನಡ): ಧರ್ಮಸ್ಥಳದಲ್ಲಿ ನಡೆದಿದೆ ಎನ್ನಲಾಗುವ ಅಪರಾಧ ಪ್ರಕರಣಗಳ ಸಾಕ್ಷಿ ದೂರುದಾರ ಶುಕ್ರವಾರ ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರಾಗಿದ್ದಾರೆ.

ಮಧ್ಯಾಹ್ನ 12 ಗಂಟೆಗೆ ಬಂದ ಆತ, ಎಸ್‌ಐಟಿ ಕಚೇರಿಗೆ ತೆರಳಿ ಸಹಿ ಹಾಕಿ ವಾಪಸಾಗಿದ್ದಾನೆ.

ಫೋನ್‌ಗಾಗಿ ಅರ್ಜಿ: ಪ್ರಕರಣಕ್ಕೆ ಸಂಬಂಧಿಸಿ ಎಸ್‌ಐಟಿ ವಶಪಡಿಸಿಕೊಂಡಿರುವ ತಮ್ಮ ಮೊಬೈಲ್ ಫೋನ್‌ಗಳನ್ನು ಬಿಟ್ಟುಕೊಡಲು ಸೂಚಿಸಬೇಕು ಎಂದು ಉಜಿರೆಯ ಗಣೇಶ್ ಶೆಟ್ಟಿ ಮತ್ತು ಸೌಜನ್ಯ ಪರ ಹೋರಾಟಗಾರ ಗಿರೀಶ್ ಮಟ್ಟಣ್ಣವರ ಬೆಳ್ತಂಗಡಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದು ಈ ಕುರಿತ ವಿಚಾರಣೆಯನ್ನು ಡಿ.29ಕ್ಕೆ ಮುಂದೂಡಲಾಗಿದೆ.

ಆದೇಶ ಮುಂದೂಡಿಕೆ: ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯ ವರದಿಯ ಕುರಿತು ಅಂತಿಮ ಆದೇಶ ನೀಡುವಂತೆ ಎಸ್‌ಐಟಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನೂ ನ್ಯಾಯಾಲಯ ಡಿ. 29ಕ್ಕೆ ಮುಂದೂಡಿದೆ.

ದಿಗಂಬರ ಜೈನ ಅರ್ಚಕ ಸಮ್ಮೇಳನ

ಚನ್ನರಾಯಪಟ್ಟಣ (ಹಾಸನ ಜಿಲ್ಲೆ): ‘ಶ್ರವಣಬೆಳಗೊಳದಲ್ಲಿ ಜನವರಿ 6 ರಿಂದ 2 ದಿನ ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕ ಸಮ್ಮೇಳನ ನಡೆಯಲಿದೆ. ವಾಸ್ತು ಹಾಗೂ ಜ್ಯೋತಿಷ್ಯ ಸಲಹೆಗಾರ ಪಾದೂರ ಸುದರ್ಶನ ಕುಮಾರ ಇಂದ್ರ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಆಗಿದ್ದಾರೆ. 3 ದಶಕದ ಹಿಂದೆ ಅಸ್ತಿತ್ವಕ್ಕೆ ಬಂದ ಸಂಘವು 5 ವರ್ಷಗಳಿಗೊಮ್ಮೆ ಸಮ್ಮೇಳನವನ್ನು ಆಯೋಜಿಸುತ್ತಿದೆ.

‘ಕಾನಜಿ ಯಾತ್ರಿಕಾಶ್ರಮದಲ್ಲಿ ನಡೆಯಲಿರುವ ಸಮ್ಮೇಳನದಲ್ಲಿ 500 ಅರ್ಚಕರು ಪಾಲ್ಗೊಳ್ಳಲಿದ್ದು, ಅರ್ಚಕರ ಸಮಸ್ಯೆಗಳನ್ನು ಚರ್ಚಿಸಿ, ನಿರ್ಣಯಗಳನ್ನು ಕೈಗೊಳ್ಳಲಾಗುವುದು’ ಎಂದು ದಕ್ಷಿಣ ಭಾರತ ದಿಗಂಬರ ಜೈನ ಅರ್ಚಕ ಸಂಘದ ಅಧ್ಯಕ್ಷ ಎಸ್.ಎಂ. ಸನ್ಮತಿ ಕುಮಾರಶಾಸ್ತ್ರಿ, ಪ್ರಧಾನ ಕಾರ್ಯದರ್ಶಿ ಎಚ್.ಪಿ. ಮೋಹನ್‌ಕುಮಾರ ಶಾಸ್ತ್ರಿ ಶುಕ್ರವಾರ ತಿಳಿಸಿದರು.

ಬೈರತಿಗೆ ನಿರೀಕ್ಷಣಾ ಜಾಮೀನು

ಬಿಕ್ಲು ಶಿವು ಕೊಲೆ ಪ್ರಕರಣ

ಮಿನಿ ಅವೆನ್ಯೂ ರಸ್ತೆಯಲ್ಲಿರುವ ಸೇಫ್ ಮೆಡಿಕಲ್ ಸ್ಟೋರ್ ಮುಂಭಾಗ ಶಿವ ಪ್ರಕಾಶ್ ಅಲಿಯಾಸ್ ಬಿಕ್ಲು ಶಿವುನನ್ನು 2025ರ ಜುಲೈ 15ರಂದು 8 ರಿಂದ 9 ಜನರ ಗುಂಪು ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿತ್ತು. ಈ ಸಂಬಂಧ ಭಾರತಿ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪ್ರಕರಣದಲ್ಲಿ ಬೈರತಿ ಬಸವರಾಜ 5ನೇ ಆರೋಪಿಯಾಗಿದ್ದಾರೆ. ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 103 ಮತ್ತು 190ರ ಅಡಿಯಲ್ಲಿ ದೂರು ದಾಖಲು ಮಾಡಿಕೊಳ್ಳಲಾಗಿದೆ. ಪ್ರಕರಣವನ್ನು ಸಿಐಡಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೌಡಿ ಶೀಟರ್ ಶಿವಪ್ರಕಾಶ್ ಅಲಿಯಾಸ್ ಬಿಕ್ಲು ಶಿವು ಕೊಲೆ ಪ್ರಕರಣದ ಐದನೇ ಆರೋಪಿಯಾಗಿರುವ ಕೆ.ಆರ್. ಪುರ ಕ್ಷೇತ್ರದ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರಿಗೆ ಹೈಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದ್ದು, ‘ಒಂದು ವೇಳೆ ಅವರನ್ನು ಬಂಧಿಸಿದರೆ ಷರತ್ತುಗಳ ಆಧಾರದಡಿ ಬಿಡುಗಡೆ ಮಾಡಬೇಕು. ಬಸವರಾಜ ಅವರು ತನಿಖೆಗೆ ಸಹಕರಿಸಬೇಕು’ ಎಂದು ಸಿಐಡಿಗೆ ಆದೇಶಿಸಿದೆ.

ಆರೋಪಿ ಬಸವರಾಜ ಅವರು ಈ ಸಂಬಂಧ ಎರಡನೇ ಬಾರಿಗೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ರಜಾಕಾಲದ ಪೀಠದಲ್ಲಿದ್ದ ನ್ಯಾಯಮೂರ್ತಿ ಜಿ.ಬಸವ ರಾಜ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಸಂದೇಶ್ ಜೆ.ಚೌಟ, ‘ಅರ್ಜಿದಾರರು ನಾಲ್ಕು ಬಾರಿ ಶಾಸಕರಾಗಿದ್ದಾರೆ. ಅವರನ್ನು ರಾಜಕೀಯ ಕಾರಣಕ್ಕಾಗಿ ಈ ಪ್ರಕರಣದಲ್ಲಿ ಸಿಲುಕಿಸುವ ಪ್ರಯತ್ನ ನಡೆದಿದೆ. ಬಿಕ್ಲು ಶಿವು ಕೊಲೆಯಲ್ಲಿ ಅವರದ್ದು ಎಂದು ಹೇಳಬಹುದಾದ ಯಾವುದೇ ಪಾತ್ರವಿಲ್ಲ. ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಿದ ಬಳಿಕ ಬಂಧಿಸುವ ಯತ್ನ ನಡೆದಿದೆ. ಈಗಾಗಲೇ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದ್ದು ಅದರಲ್ಲಿ ಅವರ ವಿರುದ್ಧ ಯಾವುದೇ ದೋಷ ಹೊರಿಸಿಲ್ಲ. ತನಿಖೆ ಬಾಕಿ ಇರಿಸಲಾಗಿದೆ ಎಂದು ಉಲ್ಲೇಖಿಸಲಾಗಿದೆ’ ಎಂದು ನ್ಯಾಯಪೀಠಕ್ಕೆ ಪ್ರಮಾಣ ಪತ್ರ ಸಲ್ಲಿಸಿದರು.

ಅಂತೆಯೇ, ‘ಅರ್ಜಿದಾರರಿಗೆ ಈಗಾಗಲೇ ಹೈಕೋರ್ಟ್ 5 ತಿಂಗಳು 10 ದಿನಗಳ ಕಾಲ ಬಂಧನದಿಂದ ರಕ್ಷಣೆ ನೀಡಿತ್ತು. ಕೋಕಾ (ಕರ್ನಾಟಕ ರಾಜ್ಯ ಸಂಘಟಿತ ಅಪರಾಧಗಳ ನಿಯಂತ್ರಣ ಕಾಯ್ದೆ–2000) ಕಾಯ್ದೆ ಹೇರಿಕೆ ರದ್ದುಪಡಿಸಿದೆ. ಹಾಗಾಗಿ, ಬಂಧನದಿಂದ ರಕ್ಷಣೆ ನೀಡಬೇಕು’ ಎಂದು ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಅರ್ಜಿದಾರರ ಮನವಿಯನ್ನು ಪುರಸ್ಕರಿಸಿ, ಪ್ರತಿವಾದಿ ಸಿಐಡಿಗೆ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸಿತು. ಅಂತೆಯೇ, ವಿಚಾರಣೆಯನ್ನು 2026ರ ಜನವರಿ 6ಕ್ಕೆ ಮುಂದೂಡಿತು. ವಿಚಾರಣೆ ವೇಳೆ ರಾಜ್ಯ ಪ್ರಾಸಿಕ್ಯೂಷನ್ ಪರ ನಾಗೇಶ್ವರಪ್ಪ ಮತ್ತು ಆರ್.ಸೌಮ್ಯ ಹಾಜರಿದ್ದರು. ಈ ಪ್ರಕರಣದಲ್ಲಿ ವಿಶೇಷ ಪ್ರಾಸಿಕ್ಯೂಟರ್ ಆಗಿ ರಾಜ್ಯದ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ಅವರನ್ನು ನೇಮಕ ಮಾಡಿ ಸರ್ಕಾರ ಆದೇಶಿಸಿದೆ.

ಡಿ ಫಾಲ್ಟ್ ಜಾಮೀನು ರದ್ದು: ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಂಗ ಬಂಧನದಲ್ಲಿರುವ 18 ಆರೋಪಿಗಳು ಸಲ್ಲಿಸಿದ್ದ ಡಿಫಾಲ್ಟ್ ಜಾಮೀನು ಅರ್ಜಿಗಳನ್ನು ಜನ ಪ್ರತಿನಿಧಿಗಳ ವಿಶೇಷ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಶುಕ್ರವಾರ ವಜಾಗೊಳಿಸಿದೆ. ಈ ಪ್ರಕರಣದಲ್ಲಿ ಒಟ್ಟು 20 ಆರೋಪಿಗಳಿದ್ದು, 20ನೇ ಆರೋಪಿ ಹಾಗೂ 5ನೇ ಆರೋಪಿ ಹೊರಗಿದ್ದಾರೆ. ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್. ನಾಯಕ್ ವಾದ ಮಂಡಿಸಿದರು.

ಮುಟ್ಟಾದವರನ್ನು ಹೊರಕೂರಿಸುವ ಪದ್ಧತಿ ನಿವಾರಿಸಿ: ನಾಗಲಕ್ಷ್ಮೀ ಚೌಧರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗ ಮತ್ತು ತುಮಕೂರಿನ ಕೆಲವಡೆ ಕಾಡುಗೊಲ್ಲ ಸಮುದಾಯದವರು ಮುಟ್ಟಾದ ಮತ್ತು ಬಾಣಂತಿ ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗೆ ಇರಿಸುತ್ತಿದ್ದು, ಈ ಪದ್ಧತಿಯನ್ನು ನಿವಾರಿಸಲು ಅಗತ್ಯ ಕ್ರಮ ತೆಗೆದುಕೊಳ್ಳಿ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು ಎರಡೂ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ.



ನಾಗಲಕ್ಷ್ಮೀ ಚೌಧರಿ

ತುಮಕೂರು, ಬೆಂಗಳೂರು ಉತ್ತರ, ಕೋಲಾರ, ಚಿತ್ರದುರ್ಗದ ಕೆಲವು ಕಾಡುಗೊಲ್ಲರಹಟ್ಟಿಗಳಲ್ಲಿ ಈ ಪದ್ಧತಿ ಆಚರಣೆಯಲ್ಲಿ ಇರುವುದರ ಸಂಬಂಧ ಮಹಿಳಾ ಆಯೋಗಕ್ಕೆ ದೂರುಗಳು ಬಂದಿದ್ದವು. ಈ ಬಗ್ಗೆ ಪರಿಶೀಲನೆ ನಡೆಸುವ ಉದ್ದೇಶದಿಂದ ಆಯೋಗದ ಅಧ್ಯಕ್ಷ ನಾಗಲಕ್ಷ್ಮೀ ಚೌಧರಿ ಅವರು ಇದೇ ಡಿಸೆಂಬರ್‌ನಲ್ಲಿ ಹಲವು ಕಾಡುಗೊಲ್ಲರಹಟ್ಟಿಗಳಿಗೆ ಭೇಟಿ ನೀಡಿದ್ದರು. ತುಮಕೂರಿನ ಶಿರಾ ತಾಲ್ಲೂಕಿನ ಬುಕ್ಕಾಪಟ್ಟಣ ಹೋಬಳಿಯ ಬಂಗಾರಹಟ್ಟಿ, ಚಿತ್ರದುರ್ಗದ ಕೆಲವು ಗ್ರಾಮಗಳಲ್ಲಿ ಈ ಪದ್ಧತಿ ಇನ್ನೂ ಚಾಲ್ತಿಯಲ್ಲಿ ಇರುವುದು ಭೇಟಿಯ ವೇಳೆ ಪತ್ತೆಯಾಗಿತ್ತು.

‘ಈ ಜಿಲ್ಲೆಗಳಲ್ಲಿ ಕಾಡುಗೊಲ್ಲ ಸಮುದಾಯದವರು ಇರುವ ಪ್ರದೇಶಗಳಿಗೆ ಈಚೆಗೆ ಭೇಟಿ ನೀಡಿದ್ದೆ. ಕೆಲವೆಡೆ ಈಗಲೂ ಬಾಣಂತಿ ಮತ್ತು ಮುಟ್ಟಾದ ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗೆ, ಗುಡಿಸಿಲಿನಲ್ಲಿ ಇರಿಸುತ್ತಾರೆ. ಮೂಢನಂಬಿಕೆಯ ಕಾರಣಕ್ಕೆ ಹೀಗೆ ಮಾಡಲಾಗುತ್ತಿದೆ ಎಂಬ ಮಾಹಿತಿಯನ್ನು ಸ್ಥಳೀಯರು ಹಂಚಿಕೊಂಡರು’ ಎಂದು ಅವರು ಪತ್ರದಲ್ಲಿ ವಿವರಿಸಿದ್ದಾರೆ.

‘ಎರಡೂ ಜಿಲ್ಲೆಗಳ ಹಲವು ಗೊಲ್ಲರಹಟ್ಟಿಗಳಲ್ಲಿ ಇದ್ದ ಇಂತಹ ಪದ್ಧತಿಯನ್ನು ಜಾಗೃತಿ ಕಾರ್ಯಕ್ರಮಗಳ ಮೂಲಕ ನಿವಾರಿಸಲಾಗಿದೆ. ಆದರೆ, ಕೆಲವು ಗೊಲ್ಲರಹಟ್ಟಿಗಳಲ್ಲಿ ಈಗಲೂ ಇದು ಚಾಲ್ತಿಯಲ್ಲಿದೆ. ಅಂತಹ ಗೊಲ್ಲರಹಟ್ಟಿಗಳಿಗೆ ಭೇಟಿ ನೀಡಿ, ಜನರಲ್ಲಿ ಅರಿವು ಮೂಡಿಸುವ ಕೆಲಸವನ್ನು ಮಾಡಬೇಕಿದೆ’ ಎಂದು ಪತ್ರದಲ್ಲಿ ಕೋರಿದ್ದಾರೆ.

‘ರಾಜ್ಯ ಸರ್ಕಾರದ ವಿವಿಧ ಕಾರ್ಯಕ್ರಮಗಳಡಿಯಲ್ಲಿ ಲಭ್ಯವಿರುವ ಸವಲತ್ತುಗಳ ಬಗ್ಗೆ ಈ ಹೆಣ್ಣುಮಕ್ಕಳಿಗೆ ಮಾಹಿತಿ ನೀಡಿ, ಅವುಗಳ ಪ್ರಯೋಜನ ಪಡೆದುಕೊಳ್ಳುವಂತೆ ಮಾಡಬೇಕಿದೆ. ಈ ಮೂಲಕ, ಇಂತಹ ಅನಾಗರಿಕ ಪದ್ಧತಿಗಳಿಂದ ಅವರನ್ನು ಹೊರತರಲು ಸಾಧ್ಯವಾಗಲಿದೆ’ ಎಂದಿದ್ದಾರೆ.

‘ಗಣಿ, ರೆಸಾರ್ಟ್, ಕೈಗಾರಿಕೆ ಬೇಡ’

ಪ್ರಜಾವಾಣಿ ವಾರ್ತೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ‘ಕುದುರೆಮುಖ ರಾಷ್ಟ್ರೀಯ ಉದ್ಯಾನ ವ್ಯಾಪ್ತಿಯ ಪ್ರದೇಶದಲ್ಲಿ ಗಣಿ, ರೆಸಾರ್ಟ್, ಕೈಗಾರಿಕೆ ಮತ್ತು ಅಭಿವೃದ್ಧಿ ಯೋಜನೆ, ಎನ್‌ಜಿಒಗಳ ಜೀವವೈವಿಧ್ಯ ಕೇಂದ್ರ, ಅಧ್ಯಯನ ಚಟುವಟಿಕೆ ನಿಲ್ಲಿಸಬೇಕು’ ಎಂದು ತಾಲ್ಲೂಕಿನ ಕುತ್ಲೂರುಮಲೆಯಲ್ಲಿ ಗುರುವಾರ ನಡೆದ ಮಲೆಕುಡಿಯ ಆದಿವಾಸಿ ಸಮಾವೇಶ ಆಗ್ರಹಿಸಿತು.



ಬೆಳ್ತಂಗಡಿಯ ಕುತ್ಲೂರು ಮಲೆಯಲ್ಲಿ ನಡೆದ ಮಲೆಕುಡಿಯ ಆದಿವಾಸಿ ಸಮಾವೇಶದ ಸಮಾರೋಪ ಸಮಾರಂಭದಲ್ಲಿ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ ಮಾತನಾಡಿದರು

ನಕ್ಸಲ್ ಚಳವಳಿಯಿಂದ ಮುಕ್ತಗೊಂಡ ಬಳಿಕ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ನಡೆದ ಮೊದಲ ಸಮಾವೇಶದ ನಿರ್ಣಯಗಳಲ್ಲಿ ಈ ವಿಷಯ ಪ್ರಸ್ತಾಪಿಸಲಾಗಿದ್ದು ನಗರದತ್ತ ಬರುವ ಪ್ರಾಣಿ, ಸರೀಸೃಪಗಳನ್ನು ಮಲೆಗಳಲ್ಲಿರುವ ಜನವಸತಿ ಪ್ರದೇಶದಲ್ಲಿ ಬಿಡುವುದನ್ನು ನಿಲ್ಲಿಸಬೇಕು, ಮಲೆಕುಡಿಯ ಕುಟುಂಬಗಳಿಗೆ ವೈಯಕ್ತಿಕ ಮತ್ತು ಸಮೂಹ ಅರಣ್ಯ ಉತ್ಪನ್ನ ಸಂಗ್ರಹದ ಹಕ್ಕು ನೀಡಬೇಕು, ಭೂದಾಖಲೆ ಒದಗಿಸಬೇಕು, ಕುತ್ಲೂರಿನ ಸುಂದರಿ ಸೇರಿದಂತೆ ಆದಿವಾಸಿ ಮಲೆಕುಡಿಯ ಹೋರಾಟಗಾರರನ್ನು ಬಿಡುಗಡೆ ಮಾಡಬೇಕು, ಆದಿವಾಸಿ ಮಲೆಕುಡಿಯರಿಗೆ ಗ್ರಾಮ ಪಂಚಾಯಿತಿಗಳಲ್ಲಿ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ಪುರ್ಸ ಪೂಜೆ, ಸುದೆ ಪೂಜೆ ಸೇರಿದಂತೆ ಎಲ್ಲ ಆಚರಣೆ, ಕಿರು ಸಂಸ್ಕೃತಿ, ಪ್ರಕೃತಿ ಆರಾಧನಾ ಪದ್ಧತಿ ರಕ್ಷಣೆಗೆ ಮುಂದಾಗಬೇಕು ಎಂಬ ಬೇಡಿಕೆ ಮಂಡಿಸಲಾಯಿತು.

ಸಮಾವೇಶವನ್ನು ಪತ್ರಕರ್ತ ನವೀನ್ ಸೂರಿಂಜೆ ಉದ್ಘಾಟಿಸಿದರು. ಸಮಾರೋಪ ಭಾಷಣ ಮಾಡಿದ ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ, ‘ನಕ್ಸಲ್ ಚಳವಳಿಯ ನಾಯಕರ ಪೈಕಿ ಕೆಲವರನ್ನು ಗುಂಡು ಹಾರಿಸಿ ಕೊಲ್ಲಲಾಯಿತು. ಉಳಿದವರನ್ನು ಶರಣಾಗತಿಯ ಹೆಸರಿನಲ್ಲಿ ಜೈಲಿನಲ್ಲಿ ಇಡಲಾಗಿದೆ. ಆದರೆ ಅವರು ಎತ್ತಿದ ಪ್ರಶ್ನೆಗಳು ಹಾಗೆಯೇ ಉಳಿದಿದೆ. ಹೋರಾಟದ ಮಾರ್ಗ ತಪ್ಪಾಗಿರಬಹುದು. ಆದರೆ ಅವರ ಪ್ರಶ್ನೆಗಳಿಗೆ ಪ್ರಜಾಸತ್ತಾತ್ಮಕ ಹೋರಾಟದ ಮೂಲಕ ಉತ್ತರ ಕಂಡುಕೊಳ್ಳಬೇಕಿದೆ’ ಎಂದರು.

ಸುಕುಮಾರ ಮಲೆಕುಡಿಯ ದಿಡುಪೆ ಅಧ್ಯಕ್ಷತೆ ವಹಿಸಿದ್ದರು. ಮುಖಂಡರಾದ ಕೃಷ್ಣಪ್ಪ ಕೊಂಚಾಡಿ, ಬಿ.ಎಂ ಭಟ್, ಶಿಶಿಲ ರಾಮಚಂದ್ರ, ಈಶ್ವರಿ ಪದ್ಮುಂಜ, ಚೀಂಕ್ರ ಮಲೆಕುಡಿಯ, ಪೂವಪ್ಪ ಮಲೆಕುಡಿಯ, ಜಯಾನಂದ ಮಲೆಕುಡಿಯ, ಯಶೋಧರ ಮಲೆಕುಡಿಯ ಪಾಲ್ಗೊಂಡಿದ್ದರು.



ದಾವಣಗೆರೆಯಲ್ಲಿ ಶುಕ್ರವಾರ ಏರ್ಪಡಿಸಿದ್ದ ಶಾಮನೂರು ಶಿವಶಂಕರಪ್ಪ ನುಡಿನಮನ ಸಮಾರಂಭವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಉದ್ಘಾಟಿಸಿದರು —ಪ್ರಜಾವಾಣಿ ಚಿತ್ರ/ ಸತೀಶ ಬಡಿಗೇರ್

‘ಶಿವಶಂಕರಪ್ಪಗೆ ‘ಕರ್ನಾಟಕ ರತ್ನ’ ಘೋಷಿಸಿ’

ಶಾಮನೂರು ಶಿವಶಂಕರಪ್ಪ ನುಡಿನಮನದಲ್ಲಿ ಪ್ರಸನ್ನ ರೇಣುಕ ವೀರಸೋಮೇಶ್ವರ ಸ್ವಾಮೀಜಿ ಒತ್ತಾಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ದಾವಣಗೆರೆ ಜಿಲ್ಲೆ ಸೇರಿದಂತೆ ನಾಡಿನ ಔದ್ಯೋಗಿಕ ಏಳಿಗೆಗೆ ಶ್ರಮಿಸಿದ ಶಾಮನೂರು ಶಿವಶಂಕರಪ್ಪ ಅವರಿಗೆ ರಾಜ್ಯ ಸರ್ಕಾರವು ‘ಕರ್ನಾಟಕ ರತ್ನ’ ಪ್ರಶಸ್ತಿಯನ್ನು ಮರಣೋತ್ತರವಾಗಿ ಘೋಷಿಸಬೇಕು ಎಂದು ರಂಭಾಪುರಿ ಪೀಠದ ಪ್ರಸನ್ನ ರೇಣುಕ ವೀರಸೋಮೇಶ್ವರ ಸ್ವಾಮೀಜಿ ಒತ್ತಾಯಿಸಿದರು.

ಈಚೆಗೆ ನಿಧನರಾದ ಶಾಮನೂರು ಶಿವಶಂಕರಪ್ಪ ಅವರ ಸ್ಮರಣಾರ್ಥ ಶುಕ್ರವಾರ ಇಲ್ಲಿ ಏರ್ಪಡಿಸಿದ್ದ ‘ನುಡಿನಮನ’ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

‘ಶಿವಶಂಕರಪ್ಪ ಅವರ ಜನಾನುರಾಗಿ ಸತ್ಕಾರ್ಯ ಜನರ ಮನಸಿನಲ್ಲಿ ಹಸಿರಾಗಿದೆ. ದಾವಣಗೆರೆಗೆ ಹೊಸ ಆಯಾಮ ನೀಡಿದ ಅವರು ರಾಜ್ಯ ಸರ್ಕಾರ ಪ್ರದಾನ ಮಾಡುವ ಕರ್ನಾಟಕ ರತ್ನ ಪ್ರಶಸ್ತಿಗೆ ಅರ್ಹರು. ಈ ಪ್ರಸ್ತಾವವನ್ನು ಸಚಿವ ಸಂಪುಟದಲ್ಲಿಟ್ಟು ಕೂಡಲೇ ತೀರ್ಮಾನ ಕೈಗೊಳ್ಳಬೇಕು’ ಎಂದು ಪಕ್ಕದಲ್ಲೇ ಇದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಲ್ಲಿ ಮನವಿ ಮಾಡಿದರು.

‘ಶಿವಶಂಕರಪ್ಪ ಕಾಂಗ್ರೆಸ್‌ನಲ್ಲಿ ನಿಷ್ಠೆ ಇಟ್ಟುಕೊಂಡಿದ್ದರು. ಪಕ್ಷಾಂತರ ಮಾಡಲಾರದ ಆದರ್ಶ ವ್ಯಕ್ತಿತ್ವ ಅವರದಾಗಿತ್ತು. ಸಮುದಾಯದ ಹಿತಕ್ಕಾಗಿ ಪಕ್ಷ ಭೀತಿ ಬಿಟ್ಟು, ನೇರ ಹಾಗೂ ಸ್ಪಷ್ಟವಾಗಿ ಮಾತನಾಡುವ ಧೈರ್ಯ ಬೆಳೆಸಿಕೊಂಡಿದ್ದರು. ಬಹುದಿನಗಳ ಕಾಲ ಕಾಂಗ್ರೆಸ್ ಖಜಾಂಚಿ ಆಗಿ ಸಂಕಷ್ಟ ಕಾಲದಲ್ಲಿ ಪಕ್ಷಕ್ಕೆ ಬಲ ತುಂಬಿದ್ದಾರೆ’ ಎಂದರು.

> **ಶಾಮನೂರು ಶಿವಶಂಕರಪ್ಪ ಅವರು ನನಗೆ ಹಿರಿಯಣ್ಣನಂತೆ ಇದ್ದರು. ಪಕ್ಷದ ಹಂಗು ತೊರೆದು ನನ್ನೊಂದಿಗೆ ಬೆಂಬಲವಾಗಿ ನಿಂತ ಅವರ ಧೈರ್ಯ ದೊಡ್ಡದು**
> **ಬಿ.ಎಸ್. ಯಡಿಯೂರಪ್ಪ,** ಮಾಜಿ ಮುಖ್ಯಮಂತ್ರಿ

ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್, ‘ಶಿವಶಂಕರಪ್ಪ ಅವರ ಅಗಲಿಕೆ ವ್ಯಕ್ತಿಗತ ನಷ್ಟವಲ್ಲ, ಮೌಲ್ಯಾಧಾರಿತ ರಾಜಕಾರಣದ ಅಧ್ಯಾಯವೊಂದು ಮುಗಿದಂತೆ ಆಗಿದೆ’ ಎಂದರು.

ಶಾಮನೂರು ಶಿವಶಂಕರಪ್ಪ ಅವರ ಪುತ್ಥಳಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅನಾವರಣ ಗೊಳಿಸಿದರು. ಉಜ್ಜನಿ ಪೀಠದ ಸಿದ್ಧಲಿಂಗ ರಾಜದೇಶಿಕೇಂದ್ರ ಸ್ವಾಮೀಜಿ, ಶ್ರೀಶೈಲದ ಚನ್ನಸಿದ್ಧರಾಮ ಪಂಡಿತಾರಾಧ್ಯ ಸ್ವಾಮೀಜಿ, ಕಾಶಿಯ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ತರಳಬಾಳು ಮಠದ ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಂಸದರಾದ ಬಸವರಾಜ ಬೊಮ್ಮಾಯಿ, ಜಗದೀಶ ಶೆಟ್ಟರ್, ಸಚಿವರಾದ ಈಶ್ವರ ಖಂಡ್ರೆ, ಆರ್.ಬಿ. ತಿಮ್ಮಾಪುರ, ಎಸ್.ಎಸ್. ಮಲ್ಲಿಕಾರ್ಜುನ್, ಎಚ್.ಕೆ. ಪಾಟೀಲ, ಎಂ.ಬಿ.ಪಾಟೀಲ ಇದ್ದರು.

ಸುದ್ದಿ 2 ನಿಮಿಷ

ಈ ವರ್ಷ ಗುರಿಗಿಂತ ಅಧಿಕ ಮಕ್ಕಳಿಗೆ ಪೋಲಿಯೊ ಹನಿ

ಬೆಂಗಳೂರು: ಆರೋಗ್ಯ ಇಲಾಖೆಯು ರಾಜ್ಯದಾದ್ಯಂತ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೊ ಲಸಿಕೆ ವಿತರಣೆ ಅಭಿಯಾನದಡಿ ಈ ವರ್ಷ ನಿಗದಿತ ಗುರಿಗಿಂತ ಅಧಿಕ ಮಕ್ಕಳಿಗೆ ಪೋಲಿಯೊ ಹನಿ ಹಾಕಲಾಗಿದೆ.

ಇಲಾಖೆಯು ಐದು ವರ್ಷದೊಳಗಿನ 62.40 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ವಿತರಿಸುವ ಗುರಿ ಹಾಕಿಕೊಂಡಿತ್ತು. ಶೇ 103 ರಷ್ಟು ಗುರಿ ಸಾಧಿಸಿದ್ದು, 64.25 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ಹಾಕಲಾಗಿದೆ.

ಆರೋಗ್ಯ ಕೇಂದ್ರಗಳು ಹಾಗೂ ಶಾಲೆಗಳ ಜತೆಗೆ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ, ಮೆಟ್ರೊ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಪ್ರದೇಶ ಗಳಲ್ಲಿ ಇದೇ 21ರಂದು ಪೋಲಿಯೊ ಹನಿ ವಿತರಣೆ ಮಾಡಲಾಗಿತ್ತು. ಬಿಟ್ಟು ಹೋದ, ಅಭಿಯಾನದಿಂದ ಹೊರಗುಳಿದ ಮಕ್ಕಳಿಗೆ ಮುಂದಿನ ಮೂರು ದಿನಗಳ ಅವಧಿಯಲ್ಲಿ ಮನೆ– ಮನೆಗೆ ತೆರಳಿ ಪೋಲಿಯೊ ಹನಿ ಹಾಕಲಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.



ಡಿ.21 ರಂದು 60.16 ಲಕ್ಷ ಮಕ್ಕಳಿಗೆ ಪೋಲಿಯೊ ಹನಿ ಒದಗಿಸಲಾಗಿತ್ತು. 22ರಂದು 2.17 ಲಕ್ಷ 23 ರಂದು 1.21 ಲಕ್ಷ ಹಾಗೂ 24ರಂದು 69 ಸಾವಿರ ಮಕ್ಕಳಿಗೆ ಪೋಲಿಯೊ ಹನಿ ಹಾಕಲಾಗಿದೆ. ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ವ್ಯಾಪ್ತಿಯಲ್ಲಿ ಗರಿಷ್ಠ ಮಕ್ಕಳಿಗೆ (11.65 ಲಕ್ಷ) ಪೋಲಿಯೊ ಹನಿ ಹಾಕಲಾಗಿದೆ. ಶಿವಮೊಗ್ಗ ಹೊರತುಪಡಿಸಿ ಎಲ್ಲ ಜಿಲ್ಲೆಗಳು ಶೇ 100 ಹಾಗೂ ಅದಕ್ಕಿಂತ ಹೆಚ್ಚಿನ ಗುರಿ ಸಾಧನೆ ಮಾಡಿವೆ ಎಂದು ಹೇಳಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾ ‘ವಂಶಪಾರಂಪರ್ಯ ಬೇಡ’

ಬೆಂಗಳೂರು: ‘ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಸ್ಥಾನಕ್ಕೆ ಹೊಸತನ ನಿರೂಪಿಸುವ ಸಾಮರ್ಥ್ಯ ಇರುವವರನ್ನು ಆಯ್ಕೆ ಮಾಡಬೇಕು. ವಂಶಪಾರಂಪರ್ಯಕ್ಕೆ ಅವಕಾಶ ಇರಬಾರದು’ ಎಂದು ಮಹಾಸಭಾದ ಮುಖಂಡ ಎಂ.ಟಿ. ಸುಭಾಷ್‌ಚಂದ್ರ ಒತ್ತಾಯಿಸಿದ್ದಾರೆ.

ಮಹಾಸಭಾದ ನಾಯಕತ್ವಕ್ಕೆ ಪಕ್ಷ ರಾಜಕಾರಣವೂ ಒಂದು ಮಿತಿ ಅಥವಾ ದೌರ್ಬಲ್ಯ ಆಗದಂತೆ ನೋಡಿಕೊಳ್ಳುವುದು ಮುಖ್ಯ. ಹಾಗಾಗಿ, ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿರುವ ಸ್ಥಾನದ ನೇಮಕದಲ್ಲಿ ವಂಶಪಾರಂಪರ್ಯಕ್ಕೆ ಅವಕಾಶ ನೀಡಿದರೆ ಸರ್ವಾಧಿಕಾರಕ್ಕೆ ದಾರಿ ಮಾಡಿಕೊಡುತ್ತದೆ ಎಂದಿದ್ದಾರೆ.

ಸಂಘಟನೆಯ ಚಟುವಟಿಕೆಗಳ ವ್ಯಾಪ್ತಿಯು ಧಾರ್ಮಿಕ ಚೌಕಟ್ಟನ್ನು ಮೀರಿ ಅಥವಾ ವಿಸ್ತರಣೆಗಾಗಿ ವಿಶಾಲ, ಸಾಮಾಜಿಕ ನೆಲೆ ಕಂಡುಕೊಳ್ಳುವುದು ಆಧುನಿಕ ಕಾಲಘಟ್ಟದ ಅನಿವಾರ್ಯತೆಯೂ ಆಗಿದೆ. ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿರುವ ಸಮುದಾಯದ ಭಾಷೆ, ಆಲೋಚನೆ, ಸಂಸ್ಕೃತಿಯಲ್ಲಿ ಗಮನಾರ್ಹ ವೈವಿಧ್ಯ ಇರುವಂತೆ ವೈರುಧ್ಯವೂ ಇವೆ. ಇಂತಹ ವಿಷಯಗಳನ್ನು ಸಮಭಾವ, ಸಂಯಮ ಮತ್ತು ಸಂಘಟನಾ ಚತುರತೆಯಿಂದ ತೂಗಿಸಿಕೊಂಡು ಹೋಗುವ, ಬೆಸೆಯುವ ಮುಂದಾಲೋಚನೆಯ ನಾಯಕತ್ವದ ಅಗತ್ಯವಿದೆ. ಹಾಗಾಗಿ, ಹಲವು ವರ್ಷಗಳಿಂದ ಸಮಾಜಕ್ಕೆ ಸಾಕಷ್ಟು ಸೇವೆ ಸಲ್ಲಿಸುತ್ತಿರುವ ಕೆಎಲ್‌ಇ ಸಂಸ್ಥೆಯ ಪ್ರಭಾಕರ ಕೋರೆ ಅಂಥವರನ್ನು ಪರಿಗಣಿಸಬಹುದು ಎಂದು ಸಲಹೆ ನೀಡಿದ್ದಾರೆ.

ಮುಖ್ಯ ಶಿಕ್ಷಕರ ಬಡ್ತಿ: 1ರಿಂದ ಪ್ರಕ್ರಿಯೆ ಆರಂಭ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೆ ಹಿರಿಯ ಮುಖ್ಯ ಶಿಕ್ಷಕರಾಗಿ ಬಡ್ತಿ ನೀಡುವ ಪ್ರಕ್ರಿಯೆಯನ್ನು ಶಾಲಾ ಶಿಕ್ಷಣ ಇಲಾಖೆ ಜ.1ರಿಂದ ಆರಂಭಿಸಲಿದೆ.

ಮುಖ್ಯ ಶಿಕ್ಷಕರ ಜ್ಯೇಷ್ಠತಾ ಪಟ್ಟಿ ಪ್ರಕಟಿಸಿದ ನಂತರ ವಿವಿಧ ಹಂತದ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ, ಕೌನ್ಸೆಲಿಂಗ್ ಮೂಲಕ ಬಡ್ತಿ ನೀಡಿ, ಸ್ಥಳ ನಿಯೋಜನೆ ಮಾಡಲಾಗುವುದು. ಜ.31ರ ಒಳಗೆ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ಇಲಾಖೆಯ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಮಾಹಿತಿ ನೀಡಿದ್ದಾರೆ.

ಚಟಿಕೆ ಸುದ್ದಿ

ಬೇರೆ ವಿಚಾರಗಳು ಇಲ್ಲವೇ: ಸಿ.ಎಂ ಸಿಡಿಮಿಡಿ

ದಾವಣಗೆರೆ: ‘ಮಾಧ್ಯಮಗಳಿಗೆ ಸಿ.ಎಂ ಕುರ್ಚಿ ಬಿಟ್ಟು ಬೇರೆ ವಿಚಾರಗಳೇ ಇಲ್ಲ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಶಾಮನೂರು ಶಿವಶಂಕರಪ್ಪ ನುಡಿನಮನ ಕಾರ್ಯಕ್ರಮಕ್ಕೆ ಇಲ್ಲಿಗೆ ಆಗಮಿಸಿದ ಅವರನ್ನು ‘ರಾಜ್ಯದಲ್ಲಿ ಮುಖ್ಯಮಂತ್ರಿ ಕುರ್ಚಿಗೆ ಭಾರಿ ಪೈಪೋಟಿ ನಡೆಯುತ್ತಿದೆಯಲ್ಲ’ ಎಂಬ ಸುದ್ದಿಗಾರರು ಕೇಳಿದ್ದಕ್ಕೆ ಹೀಗೆ ಪ್ರತಿಕ್ರಿಯಿಸಿದರು.

ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶುಕ್ರವಾರ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣದಿಂದ ಒಂದೇ ಹೆಲಿಕಾಪ್ಟರ್‌ನಲ್ಲಿ ಹೊರಟು ದಾವಣಗೆರೆಗೆ ಬಂದಿಳಿದರು. ಕಾರ್ಯಕ್ರಮ ಮುಗಿಸಿ ಒಟ್ಟಿಗೆ ಬೆಂಗಳೂರಿಗೆ ಹಿಂದಿರುಗಿದರು.

ಮರ್ಯಾದೆಗೇಡು ಹತ್ಯೆ ಪ್ರಕರಣ ಪಿಡಿಒ ಅಮಾನತು

ಹುಬ್ಬಳ್ಳಿ: ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ನಡೆದ ಮರ್ಯಾದೆಗೇಡು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಳಗಲಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ನಾಗರಾಜ ಗಿರಿಯಪ್ಪನವರ ಅವರನ್ನು ಅಮಾನತು ಮಾಡಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಭುವನೇಶ ಪಾಟೀಲ ಆದೇಶ ಹೊರಡಿಸಿದ್ದಾರೆ.

‘ಮಾನ್ಯಾ ಕೊಲೆಗೂ ಮುನ್ನ ಸಾಮಾಜಿಕ ಸ್ಥಾಯಿ ಸಮಿತಿ ಸದಸ್ಯರನ್ನು ಕರೆದು ಸಭೆ ನಡೆಸಿ, ಕೈಗೊಂಡ ಕ್ರಮಗಳ ಕುರಿತು ಠರಾವು ಪಾಸು ಮಾಡಿಲ್ಲ. ಅವರ ಅಂತ್ಯಕ್ರಿಯೆ ವೇಳೆ ನಡೆದ ಸಮಾಲೋಚನಾ ಸಭೆಯಲ್ಲೂ ಪಾಲ್ಗೊಂಡಿಲ್ಲ. ಕರ್ತವ್ಯ ನಿರ್ವಹಿಸುವಲ್ಲಿ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕೆಪಿಸಿಎಲ್ 622 ಹುದ್ದೆ: ಇಂದು, ನಾಳೆ ಪರೀಕ್ಷೆ

ಬೆಂಗಳೂರು: ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿಎಲ್) 622 ಹುದ್ದೆಗಳ ನೇಮಕಾತಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಡಿ.27 ಮತ್ತು 28ರಂದು ಮರು ಪರೀಕ್ಷೆ ನಡೆಸುತ್ತಿದೆ.

‘ಸುಪ್ರೀಂಕೋರ್ಟ್ ಆದೇಶದಂತೆ ಮರು ಪರೀಕ್ಷೆ ನಡೆಸಲಾಗುತ್ತಿದೆ. ಕೆಮಿಕಲ್ ಸೂಪರ್‌ವೈಸರ್, ವಿವಿಧ ವಿಭಾಗಗಳ ಸಹಾಯಕ ಎಂಜಿನಿಯರ್‌ಗಳ ನೇಮಕಕ್ಕೆ ಬೆಂಗಳೂರಿನ 17 ಕೇಂದ್ರಗಳಲ್ಲಿ ಡಿ.27ರಂದು ಲಿಖಿತ ಪರೀಕ್ಷೆ ನಡೆಯಲಿದೆ. 8,622 ಮಂದಿ ಪರೀಕ್ಷೆ ಬರೆಯಲು ಅರ್ಹತೆ ಪಡೆದಿದ್ದಾರೆ. ಡಿ.28ರಂದು ಕೆಮಿಸ್ಟ್, ವಿವಿಧ ವಿಭಾಗಗಳ ಕಿರಿಯ ಎಂಜಿನಿಯರ್ ಹುದ್ದೆಗಳಿಗೆ ಬೆಂಗಳೂರಿನ 21 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. 10,136 ಮಂದಿ ಪರೀಕ್ಷೆ ಬರೆಯಲಿದ್ದಾರೆ. ಅಂದೇ ಕನ್ನಡ ಭಾಷಾ ಪರೀಕ್ಷೆಯೂ ನಡೆಯಲಿದೆ’ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

ಗಾಯಗೊಂಡವರ ಸಂಖ್ಯೆ 2,38,771 ● ಸುಧಾರಣಾ ಕ್ರಮ ಕೈಗೊಂಡರೂ ತಗ್ಗದ ಅವಘಡಗಳು

ಅಪಘಾತ: ಐದು ವರ್ಷಗಳಲ್ಲಿ 55,753 ಬಲಿ

● ಹರಿಶಂಕರ್ ಆರ್.

ಬಳ್ಳಾರಿ: ಇತ್ತೀಚಿನ ವರ್ಷಗಳಲ್ಲಿ ಅಪಘಾತ ಪ್ರಕರಣಗಳು ಹೆಚ್ಚುತ್ತಿದ್ದು, ಸಾವು–ನೋವುಗಳಿಗೆ ಕಾರಣವಾಗುತ್ತಿವೆ. ರಾಜ್ಯದಲ್ಲಿ 2021ರಿಂದ 2025ರ ನಡುವೆ ಸಂಭವಿಸಿರುವ ಸುಮಾರು 1.96 ಲಕ್ಷ ಅಪಘಾತಗಳಲ್ಲಿ 55,753 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 2.38 ಲಕ್ಷಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಈ ಅಪಘಾತಗಳಲ್ಲಿ ಭಾರಿ ಮತ್ತು ಲಘು ವಾಹನಗಳು ಸೇರಿವೆ. ಸರ್ಕಾರ ಸಾಕಷ್ಟು ಸುಧಾರಣಾ ಕ್ರಮ ಕೈಗೊಂಡರೂ ಅಪಘಾತಗಳ ಪ್ರಮಾಣ ನಿರೀಕ್ಷಿತ ಮಟ್ಟದಲ್ಲಿ ಇಳಿಕೆಯಾಗುತ್ತಿಲ್ಲ.

‘ಸಂಚಾರ ನಿಯಮ ಉಲ್ಲಂಘನೆ, ಅತಿವೇಗ, ಮದ್ಯದ ಅಮಲಿನಲ್ಲಿ ವಾಹನ ಚಾಲನೆ, ಹೆಲ್ಮೆಟ್ ರಹಿತ ವಾಹನ ಚಾಲನೆ, ಸುಸ್ಥಿತಿಯಲ್ಲಿ ಇರದ ವಾಹನಗಳ ಬಳಕೆ, ನಿದ್ರೆ ಮಂಪರು, ಹದಗೆಟ್ಟ ರಸ್ತೆ, ಅವೈಜ್ಞಾನಿಕ ರಸ್ತೆ ಉಬ್ಬುಗಳು, ರಸ್ತೆ ಕಾಮಗಾರಿ ಇವೇ ಮುಂತಾದವು ಅಪಘಾತಕ್ಕೆ ಮೂಲ ಕಾರಣ’ ಎಂದು ಪೊಲೀಸರು, ಸಾರಿಗೆ ಇಲಾಖೆ ಅಧಿಕಾರಿಗಳು ಹೇಳುತ್ತಾರೆ.

> **ಕರ್ನೂಲ್ ದುರಂತ ಸಂಭವಿಸಿದಾಗಲೇ ನಾವು ಬಸ್‌ಗಳ ತಪಾಸಣೆಗೆ ಹೆಚ್ಚು ಆದ್ಯತೆ ನೀಡಿದ್ದೇವೆ. ಇತರ ವಾಹನಗಳ ಸ್ಥಿತಿಗತಿಯನ್ನೂ ಪರಿಶೀಲಿಸುತ್ತೇವೆ. ಬಸ್‌ಗಳಲ್ಲಿ ಹೆಚ್ಚಿನ ಸಾಮಗ್ರಿಗಳನ್ನು ಸಾಗಿಸುತ್ತಿದ್ದರೆ, ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ**
> **ಶ್ರೀನಿವಾಸ ಗಿರಿ,** ಆರ್‌ಟಿಒ, ಬಳ್ಳಾರಿ

ಅಪಘಾತಗಳನ್ನು ತಡೆಯಲೆಂದೇ, ಸರ್ಕಾರವು ರಸ್ತೆ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿಗಳಿವೆ. ಈ ಸಮಿತಿಗಳಿಗೆ ನಿಯಮಿತ ಸಭೆಗಳನ್ನು ನಡೆಸಲು ಸೂಚಿಸಲಾಗಿದೆ.

ಖಾಸಗಿ ಬಸ್‌ಗಳೇ ಹೆಚ್ಚು: ಖಾಸಗಿ ಟ್ರಾವೆಲ್ಸ್‌ಗಳ ಬಸ್‌ಗಳಲ್ಲೇ ಬೆಂಕಿ ಅವಘಡಗಳು ಹೆಚ್ಚಾಗಿ ಸಂಭವಿಸುತ್ತಿವೆ. ‘ಇಂಥ ಬಸ್‌ಗಳಲ್ಲಿ ಪ್ರಯಾಣಿಕರನ್ನು ಕರೆದೊಯ್ಯುವ ಜೊತೆಗೆ ಸರಕುಗಳನ್ನು (ಪಾರ್ಸೆಲ್) ಸಾಗಿಸುತ್ತವೆ. ಸರಕು ಸಾಗಿಸಬಹುದು. ಆದರೆ, ಬೇಗನೆ ಬೆಂಕಿ ಹೊತ್ತಿಕೊಳ್ಳು ವಂತಹ, ಸ್ಫೋಟವಾಗುವ ಸಾಧ್ಯತೆ ಯುಳ್ಳ ಪದಾರ್ಥಗಳನ್ನು ಸಾಗಿಸಬಾರದು ಎಂದು ನಿಯಮಗಳು ಹೇಳುತ್ತವೆ. ಬಹುತೇಕ ಖಾಸಗಿ ಟ್ರಾವೆಲ್ಸ್‌ಗಳು ಇದನ್ನು ಪಾಲಿಸುತ್ತಿಲ್ಲ’ ಎಂದು ಪ್ರಾದೇಶಿಕ ಸಾರಿಗೆ ಅಧಿಕಾರಿಯೊಬ್ಬರು ಬೆಂಕಿ ಅವಘಡಕ್ಕೆ ಪ್ರಮುಖ ಕಾರಣಗಳನ್ನು ತಿಳಿಸಿದರು.

‘ಬಸ್‌ಗೆ ಬೆಂಕಿ ಹೊತ್ತಿಕೊಂಡ ಪ್ರಕರಣಗಳಲ್ಲಿ ಬಸ್‌ನಿಂದ ಹೊರ ಬರಲಾರದೇ ಸತ್ತ ಪ್ರಯಾಣಿಕರೇ ಹೆಚ್ಚು. ಬಸ್‌ಗಳಲ್ಲಿ ತುರ್ತು ನಿರ್ಗಮನದ ಬಾಗಿಲುಗಳು ಸರಿಯಾಗಿ ತೆರೆದುಕೊಳ್ಳದಿರುವುದು, ಈ ಬಗ್ಗೆ ಪ್ರಯಾಣಿಕರಿಗೆ ಸೂಕ್ತ ತಿಳಿವಳಿಕೆ ನೀಡದಿರುವುದು ಹಾಗೂ ಕಿಟಕಿಗೆ ಆಚೀಚೆ ಸರಿಸಲಾಗದಂತಹ ಅಥವಾ ಒಡೆಯುವುದಕ್ಕೂ ಸಾಧ್ಯವಾಗದಂತಹ ಗಾಜುಗಳನ್ನು ಅಳವಡಿಸಿರುವುದೂ ಇದಕ್ಕೆ ಕಾರಣ’ ಎಂದು ಹೇಳಿದರು.

ಪರೀಕ್ಷಾ ಕೇಂದ್ರಗಳ ಕೊರತೆ

‘ವಾಹನಗಳ ಸಾಮರ್ಥ್ಯವನ್ನು (ಫಿಟ್ನೆಸ್) ವೈಜ್ಞಾನಿಕವಾಗಿ, ಆಧುನಿಕ ಯಂತ್ರೋಪಕರಣ ಮೂಲಕ ಪರೀಕ್ಷಿಸುವ ಕೇಂದ್ರಗಳು ಪ್ರತಿ ಜಿಲ್ಲೆಗೂ ಬೇಕು. ಜಿಲ್ಲೆಗೊಂದರಂತೆ ರಾಜ್ಯದೆಲ್ಲೆಡೆ 32 ಸ್ವಯಂಚಾಲಿತ ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲು ರಾಜ್ಯ ಸರ್ಕಾರ ಉದ್ದೇಶಿಸಿದೆ. ಆದರೆ, ಈವರೆಗೆ ರಾಜ್ಯದ ಮೂರು ಕಡೆ ಮಾತ್ರ ಇಂಥ ಕೇಂದ್ರಗಳು ಇವೆ. ಉಳಿದ ಕಡೆ ಇನ್ನೂ ಆರಂಭವಾಗಿಲ್ಲ’ ಎಂದು ಲಾರಿ ಚಾಲಕ ಮೆಹಬೂಬ್ ತಿಳಿಸಿದರು.

ಯಾವ ವರ್ಷ ಎಷ್ಟು

ವರ್ಷ	ಅಪಘಾತ	ಮೃತರು	ಗಾಯ
2021	34647	10038	40754
2022	39762	11702	48154
2023	43440	12321	52547
2024	43062	12390	52991
2025	35117	9302	44325

(2025ರ ಮಾಹಿತಿ ಅಕ್ಟೋಬರ್ ವರೆಗೆ ಮಾತ್ರ)

ಐದು ವರ್ಷ	ಅಂಕಿ ಅಂಶ
ಒಟ್ಟು ಅಪಘಾತಗಳು	1,96,028
ಸಾವಿನ ಸಂಖ್ಯೆ	55,753
ಗಾಯಾಳುಗಳ ಸಂಖ್ಯೆ	2,38,771

‘ಕಾರ್’ಬಾರು...

ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.



ಕ್ರಿಸ್‌ಮಸ್ ರಜೆ ಹಾಗೂ ವರ್ಷಾಂತ್ಯದ ಕಾರಣದಿಂದ ಮೈಸೂರಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದು, ಶುಕ್ರವಾರ ಅಂಬಾವಿಲಾಸ ಅರಮನೆ ಎದುರಿನ ದೊಡ್ಡಕೆರೆ ಮೈದಾನದಲ್ಲಿ ಪಾರ್ಕಿಂಗ್ ಸ್ಥಳ ಬಹುತೇಕ ಭರ್ತಿಯಾಗಿತ್ತು

‘ಗೊಂದಲ ಬಗೆಹರಿಸಲಾಗುವುದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾಂಗ್ರೆಸ್‌ನಲ್ಲಿ ಯಾವ ಗೊಂದಲ ಗಳೂ ಇಲ್ಲ. ಗೊಂದಲಗಳಿದ್ದರೆ ಪಕ್ಷದ ವೇದಿಕೆಯಲ್ಲೇ ಚರ್ಚಿಸಿ, ಬಗೆಹರಿಸಲಾಗುವುದು ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.



ಮಲ್ಲಿಕಾರ್ಜುನ ಖರ್ಗೆ

ದೆಹಲಿಗೆ ತೆರಳುವ ಮುನ್ನ ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ ಬಹುತೇಕ ನಾಯಕರು ಭೇಟಿ ಮಾಡಿದ್ದಾರೆ. ಎಲ್ಲವನ್ನೂ ಮಾಧ್ಯಮಗಳಿಗೆ ಹೇಳಿ ಮಾಡಬೇಕಾ ಎಂದು ಪ್ರಶ್ನಿಸಿದರು.

ಗೃಹ ಸಚಿವ ಜಿ.ಪರಮೇಶ್ವರ ಮಾತನಾಡಿ, ದೆಹಲಿಯಲ್ಲಿ ಡಿ.27ರಂದು ನಡೆಯುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ವೀರಪ್ಪ ಮೊಯಿಲಿ, ಬಿ.ಕೆ.ಹರಿಪ್ರಸಾದ್ ಭಾಗವಹಿಸುತ್ತಿದ್ದಾರೆ. ಹಿಂದೆ ನಾನು ಸದಸ್ಯನಾಗಿದ್ದೆ. ಈಗ ಇಲ್ಲ. ಹಾಗಾಗಿ, ಆಹ್ವಾನ ಬಂದಿಲ್ಲ ಎಂದರು.

ವಿಜಯೇಂದ್ರ ಮಾತಿಗೆ ಪ್ರಿಯಾಂಕ್ ಟೀಕೆ: ರಾಜ್ಯದ ಜನರು ಕಾಂಗ್ರೆಸ್‌ಗೆ ಐದು ವರ್ಷಗಳು ಅಧಿಕಾರ ನೀಡಿದ್ದಾರೆ. ಬಿಜೆಪಿ ಬಯಸಿದ ತಕ್ಷಣ ಚುನಾವಣೆ ನಡೆಯುವುದಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಬಿಜೆಪಿ ಚುನಾವಣೆಯನ್ನು ಯಾರ ನಾಯಕತ್ವದಲ್ಲಿ ನಡೆಸುತ್ತದೆ? ಅವರಿಗೆ ಸದನದಲ್ಲಿ ನಿಲುವಳಿ ಸೂಚನೆ ಕುರಿತು ಅರ್ಧ ಗಂಟೆ ಮಾತನಾಡಲು ಬರುವುದಿಲ್ಲ. ಆಳಂದದಲ್ಲಿ ₹70, ₹80ಕ್ಕೆ ಮತಗಳವು ಮಾಡಿದ್ದರ ಬಗ್ಗೆ ಮೊದಲು ಚರ್ಚೆಗೆ ಬರಲಿ ಎಂದು ಸವಾಲು ಹಾಕಿದರು.

‘ಬೆಳಗಾವಿಯ ಸುವರ್ಣಸೌಧದಲ್ಲಿ ನಡೆದ ಅಧಿವೇಶನದಲ್ಲಿ ಬಿಜೆಪಿ ನಮ್ಮ ಸರ್ಕಾರದ ವೈಫಲ್ಯ ತೋರಿಸಬಹುದಿತ್ತು. ಸರ್ಕಾರದ ವಿರುದ್ಧ ಧ್ವನಿ ಎತ್ತಲೂ ಅವರಿಗೆ ಆಗಲಿಲ್ಲ. ಕರ್ನಾಟಕದಲ್ಲಿ ಇರುವುದು ದುರ್ಬಲ ವಿರೋಧ ಪಕ್ಷ, ಎರಡು ಅವಧಿಯಲ್ಲಿ ಐದು ಮುಖ್ಯಮಂತ್ರಿ ಕೊಟ್ಟ ಬಿಜೆಪಿಯಿಂದ ಹಿತವಚನ ಕೇಳಬೇಕಾ’ ಎಂದು ಪ್ರಶ್ನಿಸಿದರು.

ಕೇರಳ: 4 ದಿನಗಳಲ್ಲಿ ₹332 ಕೋಟಿ ಮೌಲ್ಯದ ಮದ್ಯ ಮಾರಾಟ

ತಿರುವನಂತಪುರ (ಪಿಟಿಐ): ಕ್ರಿಸ್‌ಮಸ್ ಹಬ್ಬದ ಮೊದಲ ನಾಲ್ಕು ದಿನಗಳಲ್ಲಿ ಕೇರಳ ರಾಜ್ಯ ಪಾನೀಯ ನಿಗಮವು (ಕೆಎಸ್‌ಬಿಸಿ) ತನ್ನ ‘ಬಿಇವಿಸಿಒ’ ಮಳಿಗೆಗಳ ಮೂಲಕ ₹332.62 ಕೋಟಿ ಮೌಲ್ಯದ ಮದ್ಯ ಮಾರಾಟ ಮಾಡಿದೆ.

ಕೇರಳದಲ್ಲಿ ಡಿಸೆಂಬರ್ 22ರಿಂದ ಕ್ರಿಸ್‌ಮಸ್ ಕಲರವ. ಈ ನಾಲ್ಕು ದಿನದ ಅವಧಿಯಲ್ಲಿ ದಾಖಲೆಯ ಮದ್ಯ ಮಾರಾಟವಾಗಿದ್ದು, ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇಕಡ 18.99ರಷ್ಟು ಹೆಚ್ಚಳವಾಗಿದೆ. ಹಿಂದಿನ ವರ್ಷ ₹229.54 ಕೋಟಿ ಮೌಲ್ಯದ ಮದ್ಯ ಮಾರಾಟವಾಗಿತ್ತು ಎಂದು ಕೆಎಸ್‌ಬಿಸಿಯ ಅಧಿಕಾರಿಗಳು ಶುಕ್ರವಾರ ತಿಳಿಸಿದ್ದಾರೆ.

ತಲಘಟ್ಟಪುರ: ಭೂ ಸ್ವಾಧೀನ ರದ್ದುಪಡಿಸಿದ ಹೈಕೋರ್ಟ್

ಬೆಂಗಳೂರು: ‘ಬೆಂಗಳೂರು–ಮೈಸೂರು ಮೂಲ ಸೌಕರ್ಯ ಕಾರಿಡಾರ್ ಯೋಜನೆ’ಗಾಗಿ (ಬಿಎಂಐಸಿಪಿ) 17 ವರ್ಷಗಳ ಹಿಂದೆ ತಲಘಟ್ಟಪುರದಲ್ಲಿನ ಒಂದು ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡಿದ್ದ ಸರ್ಕಾರದ ಕ್ರಮವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಜಮೀನು ಸ್ವಾಧೀನ ಪ್ರಶ್ನಿಸಿ ಜಮೀನಿನ ಮಾಲೀಕರಾದ ರತ್ನಾ ರೆಡ್ಡಿ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಎಸ್. ಹೇಮಲೇಖಾ ಅವರಿದ್ದ ಏಕಸದಸ್ಯ ನ್ಯಾಯಪೀಠ, ಭೂ ಮಾಲೀಕರಿಗೆ ಪರಿಹಾರ ಪಾವತಿ ಮಾಡದೆ, ಸ್ವಾಧೀನ ವಿಳಂಬ ಮಾಡಿರುವ ಕೆಐಎಡಿಬಿ (ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ) ಕ್ರಮಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ಯೋಜನೆಯ ಜಾರಿಯಲ್ಲಿ ತೀವ್ರ ವಿಳಂಬವಾಗಿದೆ ಮತ್ತು ಪರಿಹಾರ ನೀಡದೇ ಇರುವ ಲೋಪ ಎದ್ದು ಕಾಣುತ್ತಿದೆ. ಮೇಲ್ನೋಟಕ್ಕೆ ಯೋಜನೆಯಲ್ಲಿ ಸಾರ್ವಜನಿಕ ಉದ್ದೇಶ ಇರುವಂತೆ ಕಂಡುಬರುತ್ತಿಲ್ಲ. 17 ವರ್ಷಗಳಿಗೂ ಹೆಚ್ಚು ಕಾಲದಿಂದ ಯಾವುದೇ ಸ್ವಾಧೀನ ಪರಿಹಾರ ನೀಡಿಲ್ಲ ಮತ್ತು ವಿಳಂಬ ಆಗಿರುವುದಕ್ಕೆ ಅಧಿಕಾರಿಗಳು ತೃಪ್ತಿದಾಯಕ ವಿವರಣೆ ನೀಡುವಲ್ಲಿ ವಿಫಲವಾಗಿದ್ದಾರೆ. ಹಾಗಾಗಿ, ಇಂತಹ ದೀರ್ಘಕಾಲದ ವಿಳಂಬವು ಸ್ವಾಧೀನದ ಸಿಂಧುತ್ವವನ್ನು ದುರ್ಬಲಗೊಳಿಸುತ್ತದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಎಚ್.ಎನ್.ಶಶಿಧರ ವಾದ ಮಂಡಿಸಿದ್ದರು ಮತ್ತು ಹೈಕೋರ್ಟ್ ವಕೀಲ ಎಚ್.ಎಸ್. ಸುಹಾಸ್ ವಕಾಲತ್ತು ವಹಿಸಿದ್ದರು.

ಉತ್ತರ ಪ್ರದೇಶ ಸರ್ಕಾರ ಆದೇಶ ● ಓದುವ ಸಂಸ್ಕೃತಿ ಉತ್ತೇಜಿಸುವ ಉದ್ದೇಶ

ಶಾಲೆಗಳಲ್ಲಿ ದಿನಪತ್ರಿಕೆ ಓದು ಕಡ್ಡಾಯ

ಲಖನೌ (ಪಿಟಿಐ): ರಾಜ್ಯದ ಎಲ್ಲ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದಿನಪತ್ರಿಕೆ ಓದುವುದನ್ನು ಕಡ್ಡಾಯ ಗೊಳಿಸಿ ಉತ್ತರ ಪ್ರದೇಶ ಸರ್ಕಾರ ಆದೇಶಿಸಿದೆ.



ವಿದ್ಯಾರ್ಥಿಗಳಲ್ಲಿ ‘ಓದುವ ಸಂಸ್ಕೃತಿ’ ಉತ್ತೇಜಿಸಲು ಮತ್ತು ಟಿ.ವಿ, ಮೊಬೈಲ್ ಫೋನ್ ಹಾಗೂ ಸಾಮಾಜಿಕ ಮಾಧ್ಯಮಗಳ ಅತಿಯಾದ ಬಳಕೆಯನ್ನು ತಡೆಯುವ ಉದ್ದೇಶದಿಂದ ಓದುವ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಶಾಲೆಗಳ ಗ್ರಂಥಾಲಯಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್ ಪತ್ರಿಕೆಗಳು ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಪಾರ್ಥಸಾರಥಿ ಸೇನ್ ಶರ್ಮಾ ಹೊರಡಿಸಿರುವ ಆದೇಶದಲ್ಲಿ ತಿಳಿಸಿದ್ದಾರೆ.

‘ಈ ಅಭಿಯಾನದ ಮೂಲಕ ವಿದ್ಯಾರ್ಥಿಗಳು ಜಿಲ್ಲಾ ಗ್ರಂಥಾಲಯಗಳಿಗೆ ತೆರಳಲು ಉತ್ತೇಜಿಸಲಾಗುತ್ತದೆ. ಪ್ರತಿ ವಾರ ಕನಿಷ್ಠ ಒಂದು ಸಾಹಿತ್ಯ ಕೃತಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆ. ಉತ್ಸಾಹಿ ಓದುಗರಿಗೆ ಪ್ರಶಂಸನಾ ಪ್ರಮಾಣ ಪತ್ರಗಳನ್ನೂ ನೀಡಲಾಗುತ್ತದೆ. ‘ಹೂಗುಚ್ಛ ಬೇಡ, ಪುಸ್ತಕ ಮಾತ್ರ’ ಎಂಬ ಅಭಿಯಾನವನ್ನೂ ಹಮ್ಮಿಕೊಂಡಿದ್ದು, ಶಾಲಾ ಕಾರ್ಯಕ್ರಮಗಳಲ್ಲಿ ಪಾರಿತೋಷಕಗಳ ಬದಲಿಗೆ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಲಾಗುತ್ತದೆ’ ಎಂದು ತಿಳಿಸಿದ್ದಾರೆ.

ಅಭಿಯಾನದ ಉದ್ದೇಶ

- ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನ, ಶಬ್ದಕೋಶ, ವಿಮರ್ಶಾತ್ಮಕ ಚಿಂತನೆ ಮೂಡಿಸುವುದು
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸುವುದು
- ಸುಳ್ಳು ಸುದ್ದಿಗಳ ವಿರುದ್ಧ ವಿದ್ಯಾರ್ಥಿಗಳನ್ನು ಸಂವೇದನಾಶೀಲಗೊಳಿಸುವುದು

ಚಟುವಟಿಕೆಗಳು

- ವಿದ್ಯಾರ್ಥಿಗಳು ಬೆಳಿಗ್ಗೆ ಕನಿಷ್ಠ 10 ನಿಮಿಷ ದಿನಪತ್ರಿಕೆಗಳನ್ನು ಓದಲು ಮೀಸಲಿಡಬೇಕು
- ರಾಷ್ಟ್ರೀಯ, ಅಂತರರಾಷ್ಟ್ರೀಯ ಮತ್ತು ಕ್ರೀಡಾ ಸುದ್ದಿಗಳು, ಪ್ರಮುಖ ಸಂಪಾದಕೀಯ, ಸುದ್ದಿ ಹಾಗೂ ಬೆಳವಣಿಗೆಗಳನ್ನು ಸರದಿಯ ಆಧಾರದ ಮೇಲೆ ಓದಬೇಕು
- ‘ದಿನದ ಪದ’ ಅಭ್ಯಾಸವನ್ನೂ ಪರಿಚಯಿಸುತ್ತಿದ್ದು, ವಿದ್ಯಾರ್ಥಿಗಳಲ್ಲಿ ಶಬ್ದ ಭಂಡಾರವನ್ನು ಹೆಚ್ಚಿಸಲು ಪತ್ರಿಕೆಗಳಿಂದ ಐದು ಕಷ್ಟಕರ ಪದಗಳನ್ನು ಆಯ್ಕೆ ಮಾಡಿ, ಅವುಗಳ ಅರ್ಥಗಳನ್ನು ವಿವರಿಸಬೇಕು.
- 9ರಿಂದ 12ನೇ ತರಗತಿ ವಿದ್ಯಾರ್ಥಿಗಳಿಗೆ ಸಂಪಾದಕೀಯ ಆಧಾರಿತ ಬರವಣಿಗೆ ಅಥವಾ ಗುಂಪು ಚರ್ಚೆ ನಡೆಸುವುದು
- ಕ್ರಾಸ್‌ವರ್ಡ್ ಮತ್ತು ಸುಡೊಕು ಸ್ಪರ್ಧೆ ಆಯೋಜಿಸುವುದು

ಕೃಷಿ ಸಚಿವ ಚಲುವರಾಯಸ್ವಾಮಿ ಕಿವಿಮಾತು

‘ರೈತರು ಆಧುನಿಕತೆಗೆ ತೆರೆದುಕೊಳ್ಳಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೃಷಿ ಸೇರಿದಂತೆ ಎಲ್ಲ ಕ್ಷೇತ್ರಗಳಿಗೂ ತಂತ್ರಜ್ಞಾನ ಕಾಲಿಟ್ಟಿದೆ. ಆದ್ದರಿಂದ ರೈತರು ಕೂಡ ಆಧುನಿಕತೆಗೆ ತೆರೆದುಕೊಳ್ಳಬೇಕು’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಸಲಹೆ ನೀಡಿದರು.

ಡಾ.ಎ.ಬಿ. ಪಾಟೀಲರ ಅಭಿನಂದನಾ ಸಮಿತಿ ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭದಲ್ಲಿ ಕೃಷಿ ತಜ್ಞ ಎ.ಬಿ. ಪಾಟೀಲರ ಅಭಿನಂದನಾ ಗ್ರಂಥ ‘ಅಶೋಕ ವೃಕ್ಷ’ವನ್ನು ಜನಾರ್ಪಣೆ ಮಾಡಿ ಮಾತನಾಡಿದರು.

‘ದೇಶದ ಆರ್ಥಿಕತೆಗೆ ಕೃಷಿ ಕ್ಷೇತ್ರ ತನ್ನದೆಯಾದ ಕೊಡುಗೆ ನೀಡುತ್ತಿದ್ದು, ಮುಂದಿನ ದಿನಗಳಲ್ಲಿ ಇನ್ನಷ್ಟು ಕೊಡುಗೆ ನೀಡಬೇಕಿದೆ. ಕೃಷಿ ಕ್ಷೇತ್ರವನ್ನು ಎಷ್ಟು ಅರಿತು ಕೊಂಡರೂ ಸಾಲದು. ಈ ಕ್ಷೇತ್ರದಲ್ಲಿ ಇನ್ನೂ ಸಾಕಷ್ಟು ಬದಲಾವಣೆ ಆಗಬೇಕಿದೆ. ರೈತರು ಬದಲಾವಣೆಗೆ ಒಗ್ಗಿಕೊಂಡು ಕೃಷಿ ಕ್ಷೇತ್ರದ ಏಳ್ಗೆಗೆ ಶ್ರಮಿಸಬೇಕು. ಕೃಷಿ ಕ್ಷೇತ್ರದ ಅಭಿವೃದ್ಧಿಗೆ ನಾಡಿನ ಕೃಷಿ ತಂತ್ರಜ್ಞರೂ ಕೊಡುಗೆ ನೀಡುತ್ತಿದ್ದಾರೆ. ಅಂತಹವರ ಸಾಲಿನಲ್ಲಿ ಕೃಷಿ ತಜ್ಞ ಎ.ಬಿ.ಪಾಟೀಲ ಅವರು ಸೇರುತ್ತಾರೆ’ ಎಂದರು.



ಚಲುವರಾಯ ಸ್ವಾಮಿ

ಪುಸ್ತಕದ ಬಗ್ಗೆ ಮಾತನಾಡಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದ ರಾಜ್, ‘ಎ.ಬಿ. ಪಾಟೀಲ ಅವರು ಕೃಷಿ ಪದವಿ ಪಡೆಯಲು ಅನುಭವಿಸಿದ ಸಂಕಷ್ಟದಿಂದ ಹಿಡಿದು, ಆ ಕ್ಷೇತ್ರದಲ್ಲಿ ಮಾಡಿದ ಸಾಧನೆಯನ್ನು ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ಇಂತಹ ಕೃಷಿ ಸಾಧಕರ ಪುಸ್ತಕವನ್ನು ಸಾಹಿತ್ಯ ಅಕಾಡೆಮಿ ಬೇಸಾಯದ ಬದುಕು ಶೀರ್ಷಿಕೆಯಡಿ ಹೊರ ತರಲು ಯೋಜನೆ ರೂಪಿಸಿದೆ’ ಎಂದರು.

ಕೆಂಗೇರಿಯ ವಿಶ್ವ ಒಕ್ಕಲಿಗ ಮಹಾ ಸಂಸ್ಥಾನ ಮಠದ ನಿಶ್ಚಲಾನಂದನಾಥ ಸ್ವಾಮೀಜಿ, ಕೃಷಿ ಇಲಾಖೆ ಆಯುಕ್ತ ವೈ.ಎಸ್.ಪಾಟೀಲ, ಕೃಷಿ ಬೆಲೆ ಆಯೋಗದ ಅಧ್ಯಕ್ಷ ಅಶೋಕ ದಳವಾಯಿ ಇದ್ದರು.

ಸ್ಫೋಟ: ಮೃತರ ಸಂಖ್ಯೆ 3ಕ್ಕೆ ಏರಿಕೆ

ಒಂದನೇ ಪುಟದಿಂದ...

ರಾತ್ರಿ 8.30ಕ್ಕೆ ಸಿಲಿಂಡರ್ ಸ್ಫೋಟಗೊಂಡು ಸಿಡಿದ ಲೋಹದ ಭಾಗಗಳು ಸ್ಥಳದಲ್ಲಿದ್ದವರಿಗೆ ರಭಸವಾಗಿ ಬಡಿದು ಗಂಭೀರ ಗಾಯಗಳಾಗಿದ್ದವು. ಸಲೀಂ ಸ್ಥಳದಲ್ಲೇ ಮೃತಪಟ್ಟಿದ್ದರು. ಗಾಯಗೊಂಡಿದ್ದ ಉಳಿದ ಮೂವರು ಕೆ.ಆರ್. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಿಡುಗಡೆ ಆಗಿದ್ದಾರೆ. ಇವರೆಲ್ಲರೂ ಪ್ರವಾಸಕ್ಕೆ ಬಂದಿದ್ದರು.

‘ಮಂಜುಳಾ ಮನೆಯಲ್ಲೇ ಇದ್ದರೂ, ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಅರಮನೆಯ ದೀಪಾಲಂಕಾರ ನೋಡಲು ನಗರಕ್ಕೆ ಬಂದಿದ್ದರು’ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಲೀಂ ಸ್ನೇಹಿತರು ವಶಕ್ಕೆ: ಘಟನೆಗೆ ಸಂಬಂಧಿಸಿ ಮೃತ ಸಲೀಂ ವಿರುದ್ಧ ದೇವರಾಜ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಲಷ್ಕರ್ ಮೊಹಲ್ಲಾದ ಶರೀಫ್ ಲಾಜ್‌ನಲ್ಲಿ ಸಲೀಂ ಅವರೊಂದಿಗೆ ವಾಸ್ತವ್ಯವಿದ್ದ ಸ್ನೇಹಿತರಾದ ಅರ್ಬಾಜ್, ರಿಜ್ವಾನ್, ರಾಜು ಎಂಬುವವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ.

ಎನ್‌ಐಎ ತಂಡ ಭೇಟಿ: ‘ಘಟನಾ ಸ್ಥಳಕ್ಕೆ ರಾಷ್ಟ್ರೀಯ ತನಿಖಾ ಸಂಸ್ಥೆಯ ಮೂವರು ಪ್ರತಿನಿಧಿಗಳು ಭೇಟಿ ನೀಡಿ ಮಾಹಿತಿ ಪಡೆದು ತೆರಳಿದ್ದಾರೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿಧಿವಿಜ್ಞಾನ ಪ್ರಯೋಗಾಲಯದ ತಂಡ, ಬೆರಳಚ್ಚು ತಜ್ಞರು, ಪೊಲೀಸ್ ಇಲಾಖೆಯ ವಿವಿಧ ತಂಡಗಳು ಸ್ಥಳದಲ್ಲಿ ಪರಿಶೀಲನೆ ನಡೆಸಿ ಮಾಹಿತಿ ಕಲೆ ಹಾಕಿವೆ. ‘ಸ್ಥಳದಲ್ಲಿ ಬಿಳಿ ಪೌಡರ್ ದೊರೆತಿದೆ. ಬಲೂನ್‌ಗೆ ತುಂಬಲು ಸೋಡಿಯಂ ಹೈಡ್ರಾಕ್ಸೈಡ್ ಹಾಗೂ ಕಾಸ್ಟಿಕ್ ಸೋಡ ಬಳಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅವರು ತಮ್ಮ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದರು.

ಹೊಸಬೆಳಕು ಹೊಸ ಹೊಳಹು



‘ಒಂದೊಂದು ವಸ್ತುವಿಗೂ ಒಂದೊಂದು ಮಾಯೆ| ಒಂದೊಂದಕೂ ಸ್ವಂತ ಧಾಟ ನಡಿಗೆ| ಹಗುರಾದ ಬಾಳಿಗೂ ಹಿರಿದಾದ ಧ್ಯೇಯವಿದೆ| ನಗೆಗೀಡು ಏನಿಲ್ಲ ಸೃಷ್ಟಿಯೊಳಗೆ’ ಎಂಬುದು ಕವಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಕವಿತೆಯ ಸಾಲು. ಅಂತೆಯೇ ನಮ್ಮ ಬಾಳಿನಲ್ಲಿ ಬರುವ ಒಂದೊಂದು ಹೊಸ ವರುಷವೂ ಮಾಯೆಯಂತೆಯೇ ಕಳೆದುಹೋಗುತ್ತದೆ. ಅದರ ನಡುವೆಯೂ ತಮಗೆ ದಕ್ಕಿದ್ದೇನು, 2025ರ ಹೊಸ್ತಿಲಾಚೆ ನಿಂತು, ಮುಂದಡಿ ಇಡಲು ಕಾಯುತ್ತಿರುವ ಮಾಯೆಯಂಥ ಮತ್ತೊಂದು ನವ ಸಂವತ್ಸರವನ್ನು ಹೇಗೆ ಎದುರುಗೊಳ್ಳಲಿದ್ದಾರೆ ಎಂಬುದನ್ನು ‘ಭೂಮಿಕಾ’ ಜೊತೆ ಹಂಚಿಕೊಂಡಿದ್ದಾರೆ ವಿವಿಧ ಕ್ಷೇತ್ರಗಳ ಮಹಿಳೆಯರು.



ಸ್ವಕಾಳಜಿಯೂ ಮುಖ್ಯ

ಕನ್ನಡ ಸಿನಿಮಾಗಳಿಗೆ ಜಗತ್ತಿನಾದ್ಯಂತ ಉತ್ತಮವಾದ ಪ್ರತಿಕ್ರಿಯೆ ಸಿಗುತ್ತಿದೆ. ಕನ್ನಡ ಚಿತ್ರೋದ್ಯಮವು ಜಾಗತಿಕ ಮಟ್ಟದಲ್ಲಿ ಬೆಳೆಯುತ್ತಿದೆ. ಎಲ್ಲ ಕಡೆಗಳಿಂದಲೂ ಒಳ್ಳೆಯ ರೀತಿಯಲ್ಲಿ ಸ್ಪಂದನೆ ಸಿಗುತ್ತಿದೆ. ಎಲ್ಲರ ಪ್ರೋತ್ಸಾಹವೂ ದಕ್ಕುತ್ತಿದೆ. ಈ ಬಗ್ಗೆ ಹೆಮ್ಮೆ ಎನಿಸುತ್ತದೆ. ಉತ್ತಮ ಕಥಾವಸ್ತುಗಳಿರುವ ಕನ್ನಡ ಸಿನಿಮಾಗಳಿಗೆ ಎಲ್ಲ ಕಡೆಗಳಿಂದಲೂ ಉತ್ತಮ ಬೇಡಿಕೆ ಇದೆ–2025ರಲ್ಲಿ ನನಗಾದ ಮನವರಿಕೆಯೆಂದರೆ ಇದೇ.

ಬದುಕು ಹೇಗೆ ಬರುತ್ತದೋ ಹಾಗೇ ಸ್ವೀಕರಿಸಬೇಕು ಎಂದು ನಂಬಿರುವವಳು ನಾನು. ಮುಂಚಿತವಾಗಿಯೇ ತುಂಬಾ ಯೋಜನೆಗಳನ್ನು ಹಾಕಿಕೊಳ್ಳುವುದಕ್ಕಿಂತ ಆಯಾ ಕ್ಷಣಕ್ಕೆ ಹೇಗೆಲ್ಲ ಯೋಜನೆ ರೂಪಿಸಿಕೊಂಡು ಬದುಕಬೇಕು ಎಂಬುದರತ್ತ ಹೆಚ್ಚು ಗಮನಹರಿಸುತ್ತೇನೆ. ಹೀಗೇ ಇನ್ನಷ್ಟು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡಬೇಕು, ಅದರಲ್ಲಿಯೂ ಹೆಚ್ಚು ಹೆಚ್ಚು ಒಳ್ಳೆಯ ಸಿನಿಮಾಗಳನ್ನು ಮಾಡಬೇಕು ಎಂಬುದೇ ನನ್ನ ಮುಂದಿನ ಗುರಿ. ಸಿನಿಮಾಗಳ ಜತೆಗೆ ಸ್ವಕಾಳಜಿಯೂ ಅಗತ್ಯ. ಕೆಲಸ ಮಾಡುವಷ್ಟೇ ಸಮನಾಗಿ ಸರಿಯಾದ ಸಮಯಕ್ಕೆ ಊಟ, ನಿದ್ರೆ ಮಾಡುವುದು ಕೂಡ ಬಹಳ ಮುಖ್ಯವಾಗುತ್ತದೆ.

ರುಕ್ಮಿಣಿ ವಸಂತ್, ಚಿತ್ರನಟಿ

ತಾಳ್ಮೆ ರೂಢಿಸಿಕೊಳ್ಳಬೇಕು



2025 ನನಗೆ ಬಹಳ ಸಂತೋಷ ನೀಡಿದ ವರ್ಷ. ಜನರ ಮಾನಸಿಕ ನೆಮ್ಮದಿಗಾಗಿ, ಅವರಿಗೆ ಚಿಕಿತ್ಸೆ ನೀಡುವ ಕೆಲಸ ಮಾಡುತ್ತೇನೆ. ಈ ವರ್ಷ ನನಗೆ ಬಹಳಷ್ಟು ಜನರ ಮಾನಸಿಕ ತುಮುಲಗಳನ್ನು, ಸಂಕಷ್ಟಗಳನ್ನು ಬಗೆಹರಿಸುವುದಕ್ಕೆ ಸಾಧ್ಯವಾಯಿತು ಮತ್ತು ಆ ಮೂಲಕ ಅವರ ಬದುಕನ್ನು ಹಸನು ಮಾಡಿದ ತೃಪ್ತಿ ದೊರೆಯಿತು. ಪೂರ್ಣಚಂದ್ರ ತೇಜಸ್ವಿ ಅವರ ಬದುಕು–ಬರಹಗಳನ್ನು ಸಾರುವ, ‘ತೇಜಸ್ವಿ ವಿಸ್ಮಯ’ ಎಂಬ ಹೆಸರಿನಲ್ಲಿ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದೆ. ಇದು ಈ ವರ್ಷಾಂತ್ಯದಲ್ಲಿ ಸಿಕ್ಕ ಬಹುದೊಡ್ಡ ಸಂತಸದ ವಿಚಾರ.

2026ರಲ್ಲಿ ನಾನು ಏನೇನು ಮಾಡಬೇಕು ಎಂದೆಲ್ಲಾ ಗುರಿಗಳನ್ನು ಹಾಕಿಕೊಳ್ಳುವುದಿಲ್ಲ. ಬದುಕು ನಾವು ಹಾಕಿಕೊಂಡ ಗುರಿಗಳಿಗಿಂತ ಹೆಚ್ಚಿನ ಒಳ್ಳೆಯ ಅವಕಾಶಗಳನ್ನು ನಮಗೆ ನೀಡುತ್ತದೆ ಎಂದು ನಂಬಿದ್ದೇನೆ. ಬದುಕು ತಂದೊಡ್ಡುವ ಅನಿರೀಕ್ಷಿತಗಳನ್ನು ಸ್ವೀಕರಿಸಬೇಕು. ಎಷ್ಟು ಸಾಧ್ಯವೋ ಅಷ್ಟು ಜನರು ಸಂತೋಷದಿಂದ ಇರುವಂತೆ ಹೇಗೆ ಮಾಡುವುದು ಎಂದು ಯೋಚಿಸುತ್ತೇನೆ. ಇದು ಯಾವುದೋ ಒಂದು ವರ್ಷದ ನನ್ನ ಗುರಿಯಲ್ಲ. ಎಲ್ಲ ಕಾಲದಲ್ಲೂ ಇರುವ, ನನ್ನ ಜೀವನದ ಗುರಿ.

ನಮ್ಮೆಲ್ಲರ ಬದುಕು ಚೆನ್ನಾಗಿಯೇ ಇದೆ. ನಾವು ಸಹಿಸಿಕೊಳ್ಳುವ, ತಾಳ್ಮೆಯಿಂದ ಇರುವ ಗುಣ ರೂಢಿಸಿಕೊಳ್ಳಬೇಕು. ಜೊತೆಗೆ, ಬದುಕಿನೊಂದಿಗೆ ಹೊಂದಿಕೊಂಡು ಹೋಗುವುದನ್ನೂ ಕಲಿಯಬೇಕು. ನಾವು ಈ ಜೀವನದಿಂದ ಯಾವುದನ್ನು ಎಷ್ಟು ಬಯಸುತ್ತಿದ್ದೇವೆಯೋ ಅದಕ್ಕಿಂತ ಹೆಚ್ಚಿನದನ್ನು ಬದುಕು ನಮಗೆ ನೀಡುತ್ತದೆ. ಆದ್ದರಿಂದ, ಗುರಿಗಳನ್ನು ಹಾಕಿ ಕೊಳ್ಳಲೇಬಾರದು. ನಮ್ಮ ನಿರೀಕ್ಷೆಗಿಂತ ನಮ್ಮ ವಾಸ್ತವ ಚೆನ್ನಾಗಿರುತ್ತದೆ. ಆಗಲೇ ಬದುಕು ಸುಂದರವಾಗುತ್ತದೆ.

ಈಶಾನ್ಯೆ ಕೆ.ಪಿ., ಮನೋಚಿಕಿತ್ಸಕಿ, ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರ ಪುತ್ರಿ

ಪರ್ಫೆಕ್ಟ್ ಆಗುವ ಅಗತ್ಯವಿಲ್ಲ



2025 ನನ್ನ ಪಾಲಿಗೆ ಚೆನ್ನಾಗಿತ್ತು. ಪುಟ್ಟ ಅವಳಿ ಮಕ್ಕಳ ಕಾರಣದಿಂದ ಎರಡು ವರ್ಷ ಏನನ್ನೂ ಬರೆಯಲು ಆಗಿರಲಿಲ್ಲ. ಆದರೆ, 2025ರಲ್ಲಿ ‘ಮಿಲೇನಿಯಂ ಅಮ್ಮ’ ಅನ್ನುವ ಅನುಭವ ಕಥನ ಬರೆದೆ. ತಾಯ್ತನ, ಬಾಣಂತನದ ಅನುಭವಗಳೆಲ್ಲವೂ ಈಗ ಹೇಗೆ ಬದಲಾಗಿವೆ ಎಂಬುದರ ವಿವರ ಇದರಲ್ಲಿದೆ. ನಾನು ಮೂಲತಃ ವಿಜ್ಞಾನದ ವಿದ್ಯಾರ್ಥಿನಿ, ಎ.ಐ ಎಂಜಿನಿಯರ್. ಆದರೆ, ಸಾಹಿತ್ಯದ ಬಗೆಗಿನ ಆಸಕ್ತಿಯಿಂದ ಈ ವರ್ಷ ಕನ್ನಡ ಸಾಹಿತ್ಯದ ಅಧ್ಯಯನ ಶುರು ಮಾಡಿದೆ. ಅದು ನನಗೆ ತುಂಬಾ ಖುಷಿ ಕೊಟ್ಟ ಸಂಗತಿ.

ಸದ್ಯಕ್ಕೆ ಫ್ರೀಲಾನ್ಸರ್ ಆಗಿರುವ ನನಗೆ, ಹೊಸ ವರ್ಷದಲ್ಲಿ ವೃತ್ತಿ ಕ್ಷೇತ್ರದಲ್ಲಿ ಪೂರ್ಣ ಪ್ರಮಾಣದಲ್ಲಿ ತೊಡಗಿಕೊಳ್ಳಬೇಕು, ಮಕ್ಕಳಿಗೆ ಇನ್ನಷ್ಟು ಆರೋಗ್ಯಕರವಾದ ಅಡುಗೆ ಮಾಡಿಕೊಡಬೇಕೆಂಬ ಇಚ್ಛೆ ಇದೆ. ಹೆಣ್ಣುಮಕ್ಕಳ ವಿಚಾರ, ಅವರ ಸಮಸ್ಯೆಗಳು, ಉದ್ಯೋಗಸ್ಥ ಮಹಿಳೆಯರ ಕುರಿತು ಬರೆಯಬೇಕೆಂಬ ತುಡಿತ ಇದೆ.

ಸಾಮಾನ್ಯವಾಗಿ ಹೆಣ್ಣುಮಕ್ಕಳು ತಾಯಿಯಾಗಿ, ಹೆಂಡತಿಯಾಗಿ, ಮಗಳಾಗಿ ಪರ್ಫೆಕ್ಟ್ ಆಗಿ ಇರಬೇಕೆಂದು ಬಯಸುತ್ತಿರುತ್ತಾರೆ. ಆದರೆ, ಯಾರೇ ಆಗಲಿ ಪರ್ಫೆಕ್ಟ್ ಆಗಿ ಇರಲು ಪ್ರಯತ್ನಿಸಬೇಡಿ. ನಮ್ಮ ಜೀವನ ಇರುವುದೇ ಕಲಿಯಲು, ತಪ್ಪು ಮಾಡಿದರೆ ಮತ್ತೆ ತಿದ್ದಿಕೊಂಡು ಮುನ್ನಡೆಯಬೇಕು. ಕೆಲವು ಅತಿರೇಕಗಳನ್ನು ನಿಯಂತ್ರಿಸಿಕೊಳ್ಳಬೇಕು. ಹಾಗಾಗಿ, ಯಾರೂ ಪರಿಪೂರ್ಣರಾಗಿರಲು ಸಾಧ್ಯವಿಲ್ಲ. ಅದರ ಅವಶ್ಯಕತೆಯೂ ನಮಗಿಲ್ಲ. ಇದು ಹೊಸ ವರ್ಷದಲ್ಲಿ ಹೆಣ್ಣುಮಕ್ಕಳಿಗೆ ನಾನು ನೀಡುವ ಸಲಹೆ.

ಮೇಘನಾ ಸುಧೀಂದ್ರ
ಲೇಖಕಿ, ಎಂಜಿನಿಯರ್

ಫೋನ್ ಗೀಳು ತೊರೆಯಲು ಕ್ರೀಡೆ ಮದ್ದು



ನನ್ನ ಜೀವನದಲ್ಲಿ ಅಂದುಕೊಂಡಿದ್ದನ್ನು ಸಾಧಿಸಿರುವೆ. 2025ರಲ್ಲಿ ಮಹಿಳೆಯರ ಕಬಡ್ಡಿ ವಿಶ್ವಕಪ್ ಜಯಿಸಿದ ಭಾರತ ತಂಡದ ಕೋಚ್ ಆಗಿ ಮಾಡಿದ ಸಾಧನೆಯು ವಿಶೇಷವಾಗಿದೆ. ಆಟಗಾರ್ತಿಯಾಗಿದ್ದಾಗಲೂ ಭಾರತ ತಂಡದ ಜಯಕ್ಕೆ ಮಹತ್ವದ ಕಾಣಿಕೆ ನೀಡಿದ್ದೆ. ಕೋಚ್ ಆಗಿ ಮಹತ್ವದ ಪ್ರಶಸ್ತಿಗಳ ‘ಹ್ಯಾಟ್ರಿಕ್’ ಸಾಧಿಸಿರುವೆ.

ಆದರೆ ಇಷ್ಟಕ್ಕೇ ಮುಗಿಯುವುದಿಲ್ಲ. ಹೊಸ ವರ್ಷದಲ್ಲಿ ಪ್ರಮುಖ ಟೂರ್ನಿಗಳು ನಡೆಯಲಿವೆ. ಅದರಲ್ಲಿ ಚೀನಾದಲ್ಲಿ ಬೀಚ್ ಏಷ್ಯನ್ ಗೇಮ್ಸ್ ನಡೆಯಲಿದೆ. ಇದೇ ವರ್ಷ ಏಷ್ಯನ್ ಕ್ರೀಡಾಕೂಟವೂ ನಡೆಯಲಿದೆ. ಎರಡೂ ಟೂರ್ನಿಗಳಲ್ಲಿ ಬಂಗಾರದ ಮೇಲೆ ನಮ್ಮ ಕಣ್ಣಿದೆ. ಗೆಲ್ಲುವ ವಿಶ್ವಾಸವೂ ಇದೆ. ಉತ್ತಮ ಆಟಗಾರ್ತಿಯರು ಇರುವ ತಂಡ ನಮ್ಮದು.

ವೈಯಕ್ತಿಕವಾಗಿ ಮತ್ತು ವೃತ್ತಿಪರವಾಗಿ ಸದಾ ಕಬಡ್ಡಿ ಬಗ್ಗೆಯೇ ನನ್ನ ಚಿತ್ತವಿದೆ. ಪುರುಷರಿಗೆ ಪ್ರೊ ಕಬಡ್ಡಿ ಇರುವಂತೆ ಮಹಿಳೆಯರಿಗೂ ಪ್ರೀಮಿಯರ್ ಲೀಗ್ ಆರಂಭಿಸಬೇಕು. ನಾನು ಉತ್ತಮ ಕೋಚ್ ಎಂಬ ಹೆಸರು ಪಡೆಯಬೇಕು, ‘ದ್ರೋಣಾಚಾರ್ಯ’ ಗೌರವ ಗಳಿಸಬೇಕು ಎಂಬ ಗುರಿ ನನ್ನದು. ಬಾಲ್ಯದಿಂದಲೂ ‘ಅರ್ಜುನ’ ಪುರಸ್ಕಾರ ಪಡೆಯಬೇಕೆಂಬ ಗುರಿ ಇಟ್ಟುಕೊಂಡಿದ್ದೆ. ಆಟಗಾರ್ತಿಯಾಗಿ ಅದನ್ನು ಸಾಧಿಸಿದ್ದೇನೆ.

ಈಗಿನ ಮಕ್ಕಳು ಮತ್ತು ಯುವಜನ ಫೋನ್ ಗೀಳಿನಿಂದ ದೂರ ಇರಬೇಕು. ಅದಕ್ಕೆ ಕ್ರೀಡೆಯಲ್ಲಿ ತೊಡಗಿಕೊಳ್ಳುವುದೇ ಉತ್ತಮ ಹಾದಿ. ಶಿಸ್ತು, ಸತತ ಪರಿಶ್ರಮದ ಮೂಲಕ ಗುರಿ ಸಾಧನೆ ಮಾಡಬೇಕು.

ತೇಜಸ್ವಿನಿ ಬಾಯಿ, ವಿಶ್ವಕಪ್ ವಿಜೇತ ಭಾರತ ಮಹಿಳಾ ಕಬಡ್ಡಿ ತಂಡದ ಕೋಚ್

ನಿರೂಪಣೆ: ಮಂಜುಶ್ರೀ ಎಂ. ಕಡಕೋಳ, ರೂಪಾ ಕೆ.ಎಂ., ಸುಕೃತ ಎಸ್., ಗಿರೀಶ ದೊಡ್ಡಮನಿ

ಅವಳಿಗಾಗಿ ಮಿಡಿಯಿತು ಮನ

• **ಕವಿತಾ ಹರೀಶ್**



ಭಾವಯಾನ

‘ಮೆಜೆಸ್ಟಿಕ್‌ಗೆ ಹೋಗುತ್ತಾ’ ಎಂದು ಕೂಗುತ್ತಲೇ ಓಡಿಬಂದು ಬಸ್ ಹತ್ತಿದ ಅವಳ ಸೊಂಟದಲ್ಲಿ ಸಣ್ಣಮಗು, ಕೈಗಳಲ್ಲಿ ಎರಡು ದೊಡ್ಡ ದೊಡ್ಡ ಬ್ಯಾಗುಗಳಿದ್ದವು. ಏದುಸಿರು ಬಿಡುತ್ತಿದ್ದ ಅವಳು, ಅಲ್ಲೇ ಖಾಲಿ ಇದ್ದ ಸೀಟಿನತ್ತ ಮಗಳನ್ನು ತಳ್ಳಿ, ‘ಹೋಗಿ ಕುತ್ಕೊ, ಖಾಲಿ ಇದೆ’ ಎಂದಳು. ಅದನ್ನು ನೋಡಿದ ಯಾರಿಗೇ ಆದರೂ ಇವಳು ಬೆಂಗಳೂರಿಗೆ ಹೊಸಬಳು ಎಂಬುದು ತಿಳಿಯುತ್ತಿತ್ತು. ಏಕೆಂದರೆ, ಅದು ಕಂಡಕ್ಟರ್‌ಗೆ ಮೀಸಲಾದ ಸೀಟಾಗಿತ್ತು.

ಆಗ ತಕ್ಷಣ ಡ್ರೈವರ್ ‘ಏ ಹೋಗಿ ಬೇರೆ ಸೀಟಲ್ಲಿ ಕೂತ್ಕೊ, ಇದು ಕಂಡಕ್ಟರ್ ಸೀಟು’ ಎಂದು ಗದರಿದಾಗ ಅವಳು, ‘ಹೋಗ್ಲಿ ಬಾ, ಇಲ್ಲಿ ಕೂತ್ಕೊ ಎನ್ನುತ್ತಾ’ ಡ್ರೈವರ್ ಕ್ಯಾಬಿನ್ ಒಳಗೆ ಎತ್ತರಕ್ಕೆ ಇದ್ದ ಜಾಗದ ಮೇಲೆ ಮಗಳನ್ನು ಕೂರಿಸಿದಳು. ಅವಳು ಸುಮಾರು 20 ವರ್ಷದ ಒಳಗಿನವಳೇ ಆಗಿದ್ದಿರಬಹುದು. ಹಳ್ಳಿಯವಳಂತಿದ್ದ ಅವಳು ಬಡತನದಿಂದ ಅಥವಾ ಮನೆಯವರ ಒತ್ತಾಯಕ್ಕೆ ಬೇಗ ಮದುವೆಯಾಗಿರಬಹುದು ಅನ್ನಿಸಿತು.

ಮತ್ತೆ ಅವಳು ಮಗಳನ್ನು ನೋಡಿ, ‘ಸರಿ ಕುತ್ಕೊ, ಬೀಳ್ತೀಯ’ ಎಂದು ಕೂಗಿದಳು. ಆಗ ಡ್ರೈವರ್ ‘ಏಯ್, ಮೆಲ್ಲಗ್ ಮಾತಾಡು, ಏನ್ ಅಷ್ಟು ಜೋರಾಗಿ ಕಿರುಚ್ತೀಯ?’ ಎಂದರು. ಅವಳಿಗೆ ಎಲ್ಲಿತ್ತೋ ಕೋಪ, ‘ಹೋಯ್, ಏನು ಹಂಗ್ ಮಾತಾಡ್ತೀಯ? ಈ ಬಸ್ಸೇನು ನಿಮ್ಮಪ್ಪಂದಾ?’ ಅಂದಳು. ಅದಕ್ಕೆ ಅವರು, ‘ಏನು ಅಪ್ಪ ಅಂತೆಲ್ಲ ಮಾತಾಡ್ತೀಯ’ ಎಂದು ಜೋರು ಮಾಡಿದರು. ಅದಕ್ಕೇನೂ ಹೆದರದ ಅವಳು ‘ಈ ಬಸ್ಸು, ನಿಮ್ಮಪ್ಪಂದೂ ಅಲ್ಲ, ನಮ್ಮಪ್ಪಂದೂ ಅಲ್ಲ, ಸರ್ಕಾರದ್ದು. ಸುಮ್ನೆ ಮುಂದೆ ನೋಡ್ಕೊಂಡು ಗಾಡಿ ಓಡ್ಸು. ಹೆಣ್ಣುಮಕ್ಳಿಗೆ ಫ್ರೀ ಕೊಟ್ರವ್ರೆ ಅಂತ ಇವ್ರಿಗೆಲ್ಲಾ ಉರಿ. ನಮ್ಮಂತೋರು ಬರೋದ್ರಿಂದ್ಲೇ ನಿಮ್ಗೆ ಕೆಲಸ’ ಎಂದು, ಮೊದಲೇ ಜೋರಾಗಿದ್ದ ದನಿಯಲ್ಲಿ ಇನ್ನಷ್ಟು ಜೋರಾಗಿ ಹೇಳಿದಾಗ, ಬಸ್ಸಿನಲ್ಲಿ ಇದ್ದವರೆಲ್ಲರೂ ಅವಳತ್ತ ತಿರುಗಿ ನೋಡಿದರು.

ಅಷ್ಟೇ ಅಲ್ಲ ಮಹಿಳಾ ಕಂಡಕ್ಟರ್ ಕಡೆ ನೋಡುತ್ತಾ ‘ಬುದ್ಧಿ ಹೇಳಿ ಮೇಡಂ ನವ್ರೆ ನಿಮ್ ಡ್ರೈವರ್‌ಗೆ, ಹ್ಯಾಂಗ್ ಮಾತಾಡ್ತಾನೆ ನೋಡಿ’ ಅಂದ್ಲು. ಆಗ ಕಂಡಕ್ಟರ್ ‘ಸುಮ್ನೆ ಇರಣ್ಣ ನೀನು, ಹೋಗಿ ಹೋಗಿ ಆ ಹುಡುಗೀಗೆ ಏನೇನೋ ಹೇಳ್ತೀಯಲ್ಲ. ಅವರ ಸ್ಟಾಪ್ ಬಂದ್ರೆ ಇಳಿದು ಹೋಗ್ತಾರೆ’ ಅಂದ ಮೇಲೆ ಪರಿಸ್ಥಿತಿ ತಣ್ಣಗಾಯಿತು. ಇದ್ಯಾವುದರ ಪರಿವೆಯೇ ಇಲ್ಲದ ಅವಳ ಮಗು ಮಾತ್ರ, ಅಮ್ಮ ಬಸ್‌ನಲ್ಲಿ ಎಲ್ಲಿಗೋ ಕರ್ಕೊಂಡು ಹೋಗ್ತಾ ಇದ್ದಾಳೆ ಅನ್ನುವ ಖುಷಿಯಲ್ಲಿ ನಸುನಗುತ್ತಿತ್ತು.

ಇಲ್ಲಿ ನನ್ನ ಗಮನ ಸೆಳೆದದ್ದು, ಅದೇ ಬಸ್ಸಿನಲ್ಲಿ ಅವಳದೇ ವಯಸ್ಸಿನ ಹೆಣ್ಣುಮಕ್ಕಳು ಕಾಲೇಜಿಗೆ ಹೋಗುತ್ತಿದ್ದುದು. ಅವರೆಲ್ಲ ಇವಳನ್ನೇ ನೋಡುತ್ತಿದ್ದರು. ಓರಗೆಯವರಾಗಿದ್ದರೂ ಅವರ ಸ್ಥಿತಿ ಮಾತ್ರ ಭಿನ್ನವಾಗಿತ್ತು. ಓದು ಕಲಿತು, ಆಡಿ ನಲಿಯುವ ವಯಸ್ಸಿನಲ್ಲಿ ಈ ಹುಡುಗಿಗೆ ಸಂಸಾರದ ಭಾರ ಹೆಗಲೇರಿತ್ತು.

ಸ್ವಲ್ಪ ಹೊತ್ತಿನಲ್ಲೇ ಅವಳ ಮೊಬೈಲ್‌ಗೆ ಒಂದು ಕರೆ ಬಂತು. ಬಹುಶಃ ಅವಳು ಸ್ಪೀಕರ್ ಒತ್ತಿದ್ದಳೇನೊ. ಅತ್ತಲಿದ್ದ ಹೆಣ್ಣುದನಿ ಜೋರಾಗಿ ಚೀರುತ್ತಾ ‘ಎಲ್ಲೇ ಇದ್ದೀಯಾ? ಬಾರೆ ಮನೆಗೆ. ಎಲ್ಲೂ ಹೋಗ್ಬೇಡ’ ಎಂದು ಒತ್ತಾಯಿಸುತ್ತಿತ್ತು. ಇವಳು, ‘ನಾನು ನಮ್ಮೂರಿಗೆ ಹೋಗ್ತಾ ಇದ್ದೀನಿ. ಮತ್ತೆ ನಾನು ಅವನತ್ರ ಹೋಗಲ್ಲ, ಅವನು ನಂಗೆ ಅವಮಾನ ಮಾಡ್ದ, ಕೇಳಿದ್ದಕ್ಕೆ ಜಗಳ ಆಡ್ದ. ನಾನು ಯಾರನ್ನೂ ನಂಬಲ್ಲ. ನೀವೆಲ್ಲ ಮತ್ತೆ ಅವನತ್ರ ಕಳಿಸ್ತೀರ. ನಂಗೆ ಅದೆಲ್ಲ ಬೇಕಾಗಿಲ್ಲ. ಏನಾದ್ರೂ ಕೆಲಸ ಮಾಡ್ಕೊಂಡು ನಾನು ನನ್ನ ಮಗಳು ಬದುಕ್ತೀವಿ. ಮತ್ತೆ ಫೋನ್ ಮಾಡ್ಬೇಡ’ ಎನ್ನುತ್ತಾ ಫೋನ್ ಕಟ್ ಮಾಡಿದಳು.

ಏನು ಕಷ್ಟವೋ ಏನೋ, ಅವಳ ಬಳಿ ದುಡ್ಡಿದೆಯೋ ಇಲ್ಲವೋ. ಫ್ರೀ ಬಸ್ ಇರೋದ್ರಿಂದ, ಊರಿಗೆ ಹೋಗಿ ಸೇರಲು ಅನುಕೂಲ ಆಗಿದೆ ಅನ್ನಿಸಿತು. ಆದರೂ ಅವಳ ಮುಖದಲ್ಲಿ ಸೋಲಿನ ಭಾವನೆ ಇರಲಿಲ್ಲ. ಅವಳು ಅಳುತ್ತಲೂ ಇರಲಿಲ್ಲ. ಬಿಡುಗಡೆಯ ಭಾವನೆ ಇತ್ತು.

ದುಷ್ಟ ಗಂಡನಿಂದ ದಿನಾ ಬೈಸಿಕೊಂಡು, ಹೊಡೆಸಿಕೊಂಡು ಬದುಕುತ್ತಿರುವ ಎಷ್ಟೋ ಹೆಣ್ಣುಮಕ್ಕಳು ನಮ್ಮ ನಡುವೆ ಇದ್ದಾರೆ. ಆದರೆ ಈ ಚಿಕ್ಕ ವಯಸ್ಸಿನ ಹೆಣ್ಣುಮಗಳು, ಅಷ್ಟೇನೂ ಓದಿರದಿದ್ದರೂ ಜೊತೆಗೊಂದು ಹೆಣ್ಣುಮಗು ಇದ್ದರೂ, ಸರಿಯಿಲ್ಲದ ಗಂಡನೊಟ್ಟಿಗೆ ಬಾಳಲಾರೆ, ಹೇಗಾದರೂ ದುಡಿದು ಬದುಕುವೆ ಎನ್ನುವ ಆತ್ಮವಿಶ್ವಾಸದಿಂದ ತನ್ನ ಊರಿಗೆ ಹೊರಟಿದ್ದುದನ್ನು ನೋಡಿ ಅಚ್ಚರಿಯಾಯಿತು. ಈ ಕಾಲದಲ್ಲಿ, ಓದಿ ಸಂಪಾದನೆ ಮಾಡುವ ಹೆಣ್ಣುಮಕ್ಕಳಿಗೆ ಇರುವಷ್ಟು ಧೈರ್ಯ ಈಕೆಗೆ ಹೇಗೆ ಬಂದಿರಬಹುದು ಎನ್ನಿಸಿತು.

ಪ್ರಪಂಚ ಬಹಳಷ್ಟು ಬದಲಾಗಿದೆ. ಸಂತೋಷವಾಗಿ ಬದುಕಲು ಎಲ್ಲರಿಗೂ ಹಕ್ಕಿದೆ. ಆದರೆ ಕೆಲವು ಹೆಣ್ಣುಮಕ್ಕಳು ಸಮಾಜದ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ ಎನ್ನುವ ಭಯದಿಂದಲೋ ಇಷ್ಟೇ ನನ್ನ ಬದುಕು ಎಂದುಕೊಂಡೋ ದುಃಖದ ಭಾರವನ್ನು ಹೊತ್ತುಕೊಂಡೇ ಬದುಕುತ್ತಿರುತ್ತಾರೆ, ಅಲ್ಲವೇ?

ಅವಳಿಗೆ ಗೆಲುವಾಗಲಿ, ಜಯ ಸಿಗಲಿ, ಮುಂದೆ ಧೈರ್ಯವಾಗಿ ಬದುಕಲು ಆ ದೇವರು ದಾರಿ ತೋರಲಿ ಎಂದು ಹಾರೈಸಿತು ನನ್ನ ಮನ.

ಕಾಡುತ್ತಿದೆ ಆ ಕಾಮುಕನ ಕಹಿ ನೆನಪು



ಅಂತರಂಗ

ಅಕ್ಷರ ದಾಮ್ಲೆ, ಮನಃಶಾಸ್ತ್ರಜ್ಞ

ನಮಸ್ತೆ ಸರ್, ನನ್ನ ವಯಸ್ಸು 40. ಹೆರಿಗೆಯಾದ ಮೇಲೆ ಸನ್ನಿ ಆಗಿತ್ತು. ನಾನು 10ನೇ ತರಗತಿಯಲ್ಲಿ ಇದ್ದಾಗ ಶಿಕ್ಷಕರೊಬ್ಬರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದೆ. ಅದರ ಕಹಿ ನೆನಪು ಹೇಗಿತ್ತೆಂದರೆ, ಮಗುವಿಗೆ ಹಾಲೂಡಿಸುವಾಗ ಅದು ನೆನಪಿಗೆ ಬಂದು, ವಿಚಿತ್ರವಾದ ಆವೇಶ ಉಂಟಾಗುತ್ತಿತ್ತು. ಆಗ ಮಗುವನ್ನು ಎತ್ತಿ ಎಸೆಯುವಷ್ಟು ಕೆಟ್ಟ ಆಲೋಚನೆ ಬರುತ್ತಿತ್ತು. ಇದಕ್ಕಾಗಿ ಚಿಕಿತ್ಸೆಯನ್ನೂ ಪಡೆದುಕೊಂಡೆ. ಮಗನಿಗೆ ಈಗ 10 ವರ್ಷ. ಅವನನ್ನು ನೋಡಿದಾಗಲೆಲ್ಲ ತಾಯಿಯಾಗಿ ಪಾಪಪ್ರಜ್ಞೆ ಕಾಡುತ್ತದೆ. ದೇಹ ಹಾಗೂ ಮನಸ್ಸಿನ ಮೇಲಾದ ಗಾಯದಿಂದ ಹೊರಬರಲಾಗದೆ ಒದ್ದಾಡುತ್ತಿದ್ದೇನೆ. ಇದಕ್ಕೆ ಪರಿಹಾರವೇನು?

ಹೆಸರು ತಿಳಿಸಿಲ್ಲ, ರಾಮನಗರ

ಕೆಲವು ಘಟನೆಗಳಿಗೆ ನಾವು ಕಾರಣರಾಗಿರದಿದ್ದರೂ ಅದರ ಕಹಿ ಪರಿಣಾಮಗಳ ಬಲಿಪಶುಗಳಾಗಿರುತ್ತೇವೆ, ತಪ್ಪಿತಸ್ಥ ಮನೋಭಾವಕ್ಕೂ ಒಳಗಾಗುತ್ತೇವೆ. ಆಮೇಲೆ, ಎಲ್ಲ ಜವಾಬ್ದಾರಿಯನ್ನೂ ನಮ್ಮ ಮೇಲೇ ಹಾಕಿಕೊಂಡು ಕೊರಗುತ್ತೇವೆ. ಮಾತ್ರವಲ್ಲ, ಆ ಕಹಿ ಘಟನೆಯ ಗಾಯ ಆಗಾಗ ನಮ್ಮನ್ನು ತಿವಿಯುತ್ತಿದ್ದರೂ ಯಾರಲ್ಲೂ ಹೇಳಿಕೊಳ್ಳಲಾಗದೆ ಚಡಪಡಿಸುತ್ತಿರುತ್ತೇವೆ.

ಅಂಕಿ- ಅಂಶಗಳ ಪ್ರಕಾರ, ಭಾರತದಲ್ಲಷ್ಟೇ ಅಲ್ಲ ವಿಶ್ವದೆಲ್ಲೆಡೆ ಆಗುವಂತಹ ಶೇಕಡ 80ರಷ್ಟು ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಲೈಂಗಿಕ ಪರಭಕ್ಷಕರು ಗೊತ್ತಿರುವವರೇ ಆಗಿರುತ್ತಾರೆ. ಲೈಂಗಿಕ ದೌರ್ಜನ್ಯ ಎನ್ನುವುದು ವ್ಯಕ್ತಿಗಳ ಮೇಲೆ ಭೀಕರವಾದ ಪರಿಣಾಮ ಬೀರುತ್ತದೆ. ಮೊದಲನೆಯದು, ಅದು ಅವರ ‘ಪರ್ಸನಲ್ ಸ್ಪೇಸ್’ನ ಉಲ್ಲಂಘನೆಯಾಗಿರುತ್ತದೆ. ಪ್ರಪಂಚದ ಕುರಿತು ತೀವ್ರವಾದ ಭಯವನ್ನು ಉಂಟುಮಾಡುತ್ತದೆ. ಗಂಡಸರೆಲ್ಲಾ ಕೆಟ್ಟವರು, ದಾನವರಂತೆ ವರ್ತಿಸುವವರು ಅನ್ನುವಂತಹ ಮನೋಭಾವ ಬೆಳೆಯುತ್ತದೆ. ಎಷ್ಟೋ ಮಂದಿಗೆ ತಮ್ಮ ಶರೀರದ ಬಗ್ಗೆಯೇ ಹೇಸಿಗೆ ಎನಿಸಲಾರಂಭಿಸುತ್ತದೆ. ಇನ್ನೊಂದಷ್ಟು ಜನ ಹೊರಗಿನ ಪ್ರಪಂಚದ ಉಸಾಬರಿಯೇ ಬೇಡ ಅನ್ನುವ ರೀತಿಯಲ್ಲಿ ಇದ್ದುಬಿಡುತ್ತಾರೆ. ಮಾತ್ರವಲ್ಲ, ಮನಸ್ಸಿನಲ್ಲಿ ತೀವ್ರವಾದ ಭಯ ಮತ್ತು ಅಭದ್ರತೆಯನ್ನು ಅನುಭವಿಸುತ್ತಾರೆ.

ಇಂತಹ ಕಹಿ ಘಟನೆಗಳು ನಡೆದಾಗ, ಅನೇಕರು ಅದನ್ನು ಹಿರಿಯರ ಬಳಿ ಹೇಳುವುದಿಲ್ಲ. ಯಾಕೆಂದರೆ, ಮೊದಲನೆಯ ಪ್ರಶ್ನೆ ‘ಹೇಗೆ ಹೇಳುವುದು?’ ಎಂಬುದು. ಎರಡನೆಯದು, ನಮ್ಮ ಸಮಾಜದಲ್ಲಿ ಶೋಷಿತೆಯನ್ನೇ ಆರೋಪಕ್ಕೆ ಒಳಪಡಿಸುವ ಮನಃಸ್ಥಿತಿ ಇರುವುದು. ಅಂದರೆ, ಬಲಾತ್ಕಾರ ಮಾಡಿದವನ ತಪ್ಪಿಗಿಂತ, ‘ನೀನು ಯಾಕೆ ಅಲ್ಲಿ ಹೋದೆ, ನೀನು ಯಾಕೆ ಆ ರೀತಿಯ ಬಟ್ಟೆಯನ್ನು ಹಾಕಿಕೊಂಡಿದ್ದೆ ಅಥವಾ ನಿನಗೆ ಎಚ್ಚರ ಇರಬೇಕಿತ್ತಲ್ಲಾ ಎಂಬಂತಹ ಪ್ರಶ್ನೆಗಳನ್ನೇ ಕೇಳುತ್ತಾರೆ. ಹಾಗಾಗಿ, ಹೆಚ್ಚಿನವರು ಮುಚ್ಚಿಡುತ್ತಾರೆ. ಬಾಹ್ಯಪ್ರಪಂಚದಿಂದ ಮುಚ್ಚಿಡಬಹುದು, ಆದರೆ ಆಂತರಿಕ ಪ್ರಪಂಚದಿಂದ ಮುಚ್ಚಿಡಲು ಸಾಧ್ಯವಿಲ್ಲವಲ್ಲಾ? ನಮಗಾದ ಕಹಿ ಅನುಭವ ನಮ್ಮ ಮನಸ್ಸಿನಲ್ಲೂ ದೇಹದಲ್ಲೂ ನೆನಪಾಗಿ ಉಳಿದಿರುತ್ತದೆ. ಶರೀರದಲ್ಲಿ ಆಗುವ ಸಂವೇದನೆಗಳಿಗೆ ಕಾರಣ ‘ಸೆಲ್ಯುಲಾರ್ ಮೆಮೊರಿ’ ಅಂದರೆ, ನಮ್ಮ ಜೀವಕೋಶಗಳ ಸ್ತರದಲ್ಲಿ ಉಳಿದಿರುವಂತಹ ನೆನಪು. ಇದು, ಬಹುಶಃ ನೀವು ನಿಮ್ಮ ಮಗನಿಗೆ ಹಾಲೂಡಿಸುವಾಗ ಅಡ್ಡಿಪಡಿಸುತ್ತಿದ್ದುದು. ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಅನೇಕರು ಮದುವೆಯಾಗುವುದಕ್ಕೂ ಅಳುಕುತ್ತಾರೆ. ಯಾಕೆಂದರೆ, ಪುರುಷನ ಸ್ಪರ್ಶವೂ ಅವರಿಗೆ ಎಷ್ಟೋ ಬಾರಿ ದೌರ್ಜನ್ಯದ ಕರಾಳ ಅನುಭವವನ್ನು ನೆನಪಿಸಿ ಬಿಡುತ್ತದೆ.

ಹಾಗಿದ್ದರೆ ಇದಕ್ಕೆ ಪರಿಹಾರವೇ ಇಲ್ಲವೇ? ಖಂಡಿತವಾಗಿಯೂ ಇದೆ. ಮನಃಶಾಸ್ತ್ರೀಯವಾಗಿ ಇಂತಹ ಪ್ರಕರಣಗಳಿಂದ ಮನಸ್ಸಿನ ಮೇಲೆ ಆಗುವ ಪರಿಣಾಮವನ್ನು ‘ಟ್ರಾಮಾ’ ಎಂದು ಕರೆಯುತ್ತೇವೆ. ಅದನ್ನು ನಿವಾರಿಸುವುದಕ್ಕೆ ಬೇರೆ ಬೇರೆ ರೀತಿಯ ಥೆರಪಿಯ ವಿಧಾನಗಳಿವೆ. ನನಗೆ ಹೆಚ್ಚು ಸಮಂಜಸವಾಗಿ ಕಂಡಿರುವುದು ‘ಇನ್ನರ್ ಚೈಲ್ಡ್ ಹೀಲಿಂಗ್’. ಯಾಕೆಂದರೆ ಇದು ಮಾನಸಿಕ ಮತ್ತು ದೈಹಿಕ ಟ್ರಾಮಾಗಳೆರಡನ್ನೂ ಜೊತೆಗೆ ತೆಗೆಯುವಲ್ಲಿ ಸಹಾಯ ಮಾಡುತ್ತದೆ.

ಈ ಥೆರಪಿಯಲ್ಲಿ ಏನಾಗುತ್ತದೆ?: ಹಿಂದೆ ನಡೆದ ಘಟನೆಯನ್ನು ಮರೆಯಲು ಸಾಧ್ಯವಿಲ್ಲ. ಆದರೆ, ಅದು ಉಂಟುಮಾಡಿದ ನೋವು ಮತ್ತು ಗಾಯವನ್ನು ವಾಸಿಮಾಡುವ ಮೂಲಕ, ನಮ್ಮ ಭಾವನೆಗಳ ಭಾರವನ್ನು ಇಳಿಸಬಹುದು. ತನ್ಮೂಲಕ ನಾವು ಮುಂದಿನ ಜೀವನವನ್ನು ಹಗುರವಾಗಿಸಿಕೊಳ್ಳಬಹುದು. ಹೊಸ ಸಾಧ್ಯತೆಗಳನ್ನು ಹುಡುಕಬಹುದು.

ನಿಮ್ಮನ್ನು ನೀವು ವಾಸಿ ಮಾಡಿಕೊಂಡು, ಮಗನಿಗೆ ಭಾವನಾತ್ಮಕ ಬೆಂಬಲವನ್ನು ಕೊಟ್ಟುಕೊಂಡು, ಸ್ತ್ರೀಯರನ್ನು ಭೋಗದ ವಸ್ತುವಿನಂತೆ ನೋಡದೆ ಗೌರವಿಸುವಂತಹ ಉತ್ತಮ ವ್ಯಕ್ತಿಯನ್ನಾಗಿ ಆತನನ್ನು ರೂಪಿಸುವುದೇ ನಿಮಗೆ ಕಾಡುತ್ತಿರುವ ಪಾಪಪ್ರಜ್ಞೆಗೆ ಪರಿಹಾರ ಎಂಬುದು ನನ್ನ ಅಭಿಪ್ರಾಯ. ಎಲ್ಲ ಹೆತ್ತವರೂ ತಮ್ಮ ಗಂಡುಮಕ್ಕಳನ್ನು ಈ ರೀತಿಯಲ್ಲಿ ಬೆಳೆಸಿದರೆ, ಸುರಕ್ಷಿತ ಸಮಾಜವನ್ನು ಕಟ್ಟಲು ಸಾಧ್ಯವಾಗುತ್ತದೆ.

ಅಮ್ಮ ಹೇಳ್ತಾಳೆ



ತಿಳಿಸಾರು ಅಥವಾ ರಸಂಗೆ ಕಾಯಿಹಾಲು ಹಾಕಿ, ಕೊಬ್ಬರಿಎಣ್ಣೆಯಲ್ಲಿ ಒಗ್ಗರಣೆ ಕೊಟ್ಟರೆ ಭಿನ್ನವಾದ ರುಚಿ ಕೊಡುತ್ತದೆ.

ನ್ಯೂ ಇಯರ್ ಪಾರ್ಟಿಗೆ ಫಟಾಫಟ್ ಸೀಫುಡ್

ಹೊಸ ವರ್ಷದ ಹೊಸ್ತಿಲಲ್ಲಿ ಇದ್ದೇವೆ. ನ್ಯೂ ಇಯರ್ ಪಾರ್ಟಿಗಾಗಿ ಮಾಡಲು ಹೆಚ್ಚು ಸಮಯ ಬೇಡದ, ಅತಿ ಕಡಿಮೆ ಸಾಮಗ್ರಿಗಳನ್ನು ಬಳಸಿ ಫಟಾಫಟ್ ಎಂದು ಮಾಡಬಹುದಾದ ಸಮುದ್ರಾಹಾರದ ಕೆಳಕಂಡ ರೆಸಿಪಿಗಳನ್ನು ಎಲಿಜಬೆತ್ ಹೆನ್ರಿ ನೀಡಿದ್ದಾರೆ.

ರಸಾಸ್ವಾದ



ರೆಡ್‌ಹಾಟ್ ಮಸಾಲ ಫಿಷ್

ಬೇಕಾಗುವ ಸಾಮಗ್ರಿ: ಎರಡೂವರೆ ಚಮಚ ಕೆಂಪುಮೆಣಸಿನ ಪುಡಿ, ಅರಸಿನ ಅರ್ಧ ಚಮಚ, ಒಂದು ಚಮಚ ಶುಂಠಿ–ಬೆಳ್ಳುಳ್ಳಿ ಪೇಸ್ಟ್ ಮತ್ತು ಉಪ್ಪು.

ಮಾಡುವ ವಿಧಾನ: ಮೇಲೆ ತಿಳಿಸಿದ ಅಷ್ಟೂ ಸಾಮಗ್ರಿಗಳನ್ನು ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಬೇಕು. ನಂತರ ಮೀನಿನ ಮಧ್ಯ ಭಾಗಕ್ಕೆ ಈ ಮಸಾಲೆಯನ್ನು ಹಾಕಿ ಮ್ಯಾರಿನೇಟ್ ಮಾಡಿ, ಅರ್ಧ ಗಂಟೆ ಬಿಟ್ಟು ತವಾದಲ್ಲಿ ಫ್ರೈ ಮಾಡಬೇಕು.

ಸಿಗಡಿ ಕರಿಲೀವ್ಸ್

ಬೇಕಾಗುವ ಸಾಮಗ್ರಿ: ಅರ್ಧ ಕೆ.ಜಿ. ಸಿಗಡಿ, ಒಂದು ಚಮಚ ದನಿಯಾ, ಅರ್ಧ ಚಮಚ ಜೀರಿಗೆ, ಅರ್ಧ ಚಮಚ ಕಾಳಮೆಣಸು, ಒಂದು ಹಿಡಿಯಷ್ಟು ಕರಿಬೇವಿನ ಸೊಪ್ಪು, ಚಿಕ್ಕ ನೆಲ್ಲಿಕಾಯಿ ಗಾತ್ರದ ಅರ್ಧದಷ್ಟು ಹುಣಿಸೆಹಣ್ಣು, ಎರಡು ಬ್ಯಾಡಗಿ ಮೆಣಸಿನಕಾಯಿ, ಎರಡು ಹಸಿಮೆಣಸಿನಕಾಯಿ. ಇವಿಷ್ಟನ್ನೂ ಮಿಕ್ಸಿಗೆ ಹಾಕಿ, ನೀರು ಹಾಕದೆ ಚೆನ್ನಾಗಿ ಪುಡಿ ಮಾಡಿಕೊಳ್ಳಿ.

ಮಾಡುವ ವಿಧಾನ: ಒಂದು ಪಾತ್ರೆಯಲ್ಲಿ ಎಣ್ಣೆ ಹಾಕಿ, ಚೆನ್ನಾಗಿ ತೊಳೆದಿಟ್ಟುಕೊಂಡ ಸಿಗಡಿ ಮತ್ತು ಕರಿಬೇವನ್ನು ಹಾಕಿ ಚೆನ್ನಾಗಿ ಹುರಿದುಕೊಳ್ಳಬೇಕು. ಬಳಿಕ ನೀರು ಹಾಕಿ ಚೆನ್ನಾಗಿ ಬೇಯಿಸಬೇಕು. ಆಮೇಲೆ ಮಿಕ್ಸಿಯಲ್ಲಿರುವ ಪುಡಿಯನ್ನು ಹಾಕಿ ಮತ್ತಷ್ಟು ಬೇಯಿಸಿದರೆ ಸಿಗಡಿ ಕರಿಲೀವ್ಸ್ ಸವಿಯಲು ಸಿದ್ಧ.



ಸಿಗಡಿ ಘೀ ರೋಸ್ಟ್



ಬೇಕಾಗುವ ಸಾಮಗ್ರಿ: ಅರ್ಧ ಕೆ.ಜಿ. ಸಿಗಡಿ, ಎಂಟು ಬ್ಯಾಡಗಿ ಮೆಣಸಿನಕಾಯಿ, ಚಿಕ್ಕ ನೆಲ್ಲಿಕಾಯಿ ಗಾತ್ರದಷ್ಟು ಹುಣಿಸೆಹಣ್ಣು, ಅರ್ಧ ಚಮಚ ಜೀರಿಗೆ, ಅರ್ಧ ಚಮಚ ಉಪ್ಪು, ನಾಲ್ಕು ಕಾಳು ದನಿಯಾ, ನಾಲ್ಕೈದು ಬೆಳ್ಳುಳ್ಳಿ ಎಸಳು. ಇಷ್ಟನ್ನೂ ಬಿಸಿನೀರಿನಲ್ಲಿ ನೆನೆಸಿಡಬೇಕು. ಆಮೇಲೆ ಇವೆಲ್ಲವನ್ನೂ ಮಿಕ್ಸಿಗೆ ಹಾಕಿ ಚೆನ್ನಾಗಿ ರುಬ್ಬಿಕೊಳ್ಳಬೇಕು.

ಮಾಡುವ ವಿಧಾನ: ಚೆನ್ನಾಗಿ ತೊಳೆದಿಟ್ಟ ಸಿಗಡಿಗೆ ಅರಸಿನ ಹಾಗೂ ಉಪ್ಪು ಹಾಕಿ ನೆನೆಸಿಡಬೇಕು. ಆಮೇಲೆ ಸಿಗಡಿಯಲ್ಲಿರುವ ನೀರನ್ನು ಸಂಪೂರ್ಣವಾಗಿ ಸೋಸಿಕೊಳ್ಳಬೇಕು. ಪಾತ್ರೆಗೆ ಒಂದು ಚಮಚ ತುಪ್ಪ ಹಾಕಿ, ಅದರ ಜತೆಗೆ ಸಿಗಡಿಯನ್ನು ಹಾಕಿ ಚೆನ್ನಾಗಿ ಹುರಿದುಕೊಳ್ಳಬೇಕು. ಬಳಿಕ ರುಬ್ಬಿಟ್ಟುಕೊಂಡ ಮಸಾಲೆಯನ್ನು ಸೇರಿಸಿ, ಬೇಯಲು ಬಿಡಬೇಕು. ಚೆನ್ನಾಗಿ ಬೆಂದಾದ ಮೇಲೆ ಪಾತ್ರೆಯನ್ನು ಇಳಿಸುವಾಗ ಅರ್ಧ ಚಮಚ ಸಕ್ಕರೆ ಹಾಕಬೇಕು. ಸಕ್ಕರೆ ಸೇರಿಸುವುದರಿಂದ ಸಿಗಡಿ ರುಚಿ ದುಪ್ಪಟ್ಟಾಗುತ್ತದೆ.

ಗ್ರೀನ್ ಫಿಷ್ ಫ್ರೈ

ಶೀಲಾ, ಕಾಟ್ಲಾ, ಬಂಗುಡೆ ಈ ಮೂರು ಬಗೆಯ ಮೀನುಗಳಲ್ಲಿ ಯಾವುದಿದ್ದರೂ ಸರಿ.


ಬೇಕಾಗುವ ಸಾಮಗ್ರಿ: ಒಂದು ಕೆ.ಜಿ. ಮೀನು (ಮೀನಿನ ಮಧ್ಯಭಾಗ ಮಾತ್ರ ಬಳಸಿ), ಒಂದು ಹಿಡಿಯಷ್ಟು ದನಿಯಾ, ಒಂದು ಹಿಡಿಯಷ್ಟು ಪುದೀನಾ ಸೊಪ್ಪು, ಆರು ಹಸಿಮೆಣಸಿನಕಾಯಿ, ಒಂದು ಚಮಚದಷ್ಟು ಶುಂಠಿ–ಬೆಳ್ಳುಳ್ಳಿ ಪೇಸ್ಟ್, ಉಪ್ಪು ರುಚಿಗೆ ತಕ್ಕಷ್ಟು.

ಮಾಡುವ ವಿಧಾನ: ಮೀನು ಹೊರತುಪಡಿಸಿ ಉಳಿದೆಲ್ಲ ಸಾಮಗ್ರಿಗಳನ್ನು ಮಿಕ್ಸಿಗೆ ಹಾಕಿ, ಸ್ವಲ್ಪ ನೀರು ಹಾಕಿ ಚೆನ್ನಾಗಿ ರುಬ್ಬಿಕೊಳ್ಳಬೇಕು. ನಂತರ ಈ ಮಸಾಲೆಯನ್ನು, ಕತ್ತರಿಸಿದ ಮೀನಿನ ಮಧ್ಯಭಾಗಕ್ಕೆ ಹಾಕಿ ಮ್ಯಾರಿನೇಟ್ ಮಾಡಬೇಕು. ಹತ್ತು ನಿಮಿಷ ಬಿಟ್ಟು ತವಾದಲ್ಲಿ ಫ್ರೈ ಮಾಡಬೇಕು. ಫ್ರೈಗೆ ಕೊಬ್ಬರಿ ಎಣ್ಣೆ ಬಳಸಿದರೆ ರುಚಿಕಟ್ಟಾಗಿರುತ್ತದೆ.



ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಆದರ್ಶಗಳು ನಾವು ದಿನವೂ ಪಠಣ ಮಾಡಬೇಕಾದ ಗೊಡ್ಡು ಮಂತ್ರಗಳಲ್ಲ; ಅವು ನಮ್ಮ ಜೀವನದ ಉಸಿರು.


–ಕುವೆಂಪು

ಸಂಪಾದಕೀಯ

ಬಸ್ ಪ್ರಯಾಣವೆಂಬ ಮೃತ್ಯುಪಂಜರ ಸುರಕ್ಷತೆ ಜೊತೆ ರಾಜಿ ಅಪಾಯಕರ

ಹಿರಿಯೂರು ತಾಲ್ಲೂಕು ಗೋರ್ಲಡುಕು ಕ್ರಾಸ್ ಬಳಿ ಸೀಬರ್ಡ್ ಸ್ಲೀಪರ್ ಬಸ್ ಹಾಗೂ ಕಂಟೇನರ್ ನಡುವೆ ಸಂಭವಿಸಿದ ಡಿಕ್ಕಿಯಲ್ಲಿ ಏಳು ಮಂದಿ ಸಾವಿಗೀಡಾಗಿರುವ ದುರ್ಘಟನೆ ಗಾಬರಿ ಹುಟ್ಟಿಸುವಂತಿದೆ. ಈ ಘಟನೆ, ರಾತ್ರಿ ಪ್ರಯಾಣ ಹಾಗೂ ಸ್ಲೀಪರ್ ಬಸ್‌ಗಳ ಸುರಕ್ಷತೆಯ ಬಗೆಗಿನ ಆತಂಕವನ್ನು ಹೆಚ್ಚಿಸುವಂತಿದೆ. ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಗುದ್ದಿರುವ ಕಂಟೇನರ್, ಎದುರಿನಿಂದ ಬರುತ್ತಿದ್ದ ಬಸ್‌ಗೆ ಡಿಕ್ಕಿ ಹೊಡೆದು ಬೆಂಕಿ ಹೊತ್ತಿಕೊಂಡಿದೆ. ಆ ಬೆಂಕಿಯಲ್ಲಿ ಬಸ್‌ನಲ್ಲಿದ್ದ ಮೂವತ್ತು ಪ್ರಯಾಣಿಕರಲ್ಲಿ ಐವರು ಸಾವಿಗೀಡಾಗಿದ್ದಾರೆ. ಕ್ರಿಸ್‌ಮಸ್ ರಜೆ ಕಳೆಯಲು ಗೋಕರ್ಣಕ್ಕೆ ಹೋಗುತ್ತಿದ್ದ ಮೂವರು ತರುಣಿಯರು ಹಾಗೂ ತಾಯಿ–ಮಗಳು ಬೆಂಕಿಯಲ್ಲಿ ಗುರುತು ಸಿಗದ ಮಟ್ಟಿಗೆ ಸುಟ್ಟು ಕರಕಲಾಗಿದ್ದಾರೆ. ಕಂಟೇನರ್ ಅಪ್ಪಚ್ಚಿಯಾಗಿ ಅದರ ಚಾಲಕ ಕುಳಿತಲ್ಲೇ ಕೊನೆಯುಸಿರೆಳೆದಿದ್ದಾನೆ. ಗಾಯಗೊಂಡಿದ್ದ ಬಸ್ ಚಾಲಕ ಆಸ್ಪತ್ರೆಯಲ್ಲಿ ಮೃತನಾಗಿದ್ದಾನೆ. ಕಂಟೇನರ್ ಚಾಲಕನ ನಿರ್ಲಕ್ಷ್ಯದ ಚಾಲನೆಯೇ ಅಪಘಾತಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಆದರೆ, ಡಿಕ್ಕಿಯಿಂದ ಹೊತ್ತಿಕೊಂಡ ಬೆಂಕಿಯಿಂದ ಸಾವು–ನೋವು ಸಂಭವಿಸಿರುವುದರ ಹಿನ್ನೆಲೆಯಲ್ಲಿ, ಬಸ್‌ನಲ್ಲಿದ್ದ ಸುರಕ್ಷತಾ ಕ್ರಮಗಳ ಕೊರತೆಯನ್ನೂ ಅವಘಡಕ್ಕೆ ಕಾರಣವನ್ನಾಗಿ ನೋಡಬೇಕಾಗಿದೆ.

ಸ್ಲೀಪರ್ ಬಸ್‌ಗಳಿಗೆ ಬೆಂಕಿ ಹೊತ್ತಿಕೊಳ್ಳುವ ಘಟನೆಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿವೆ. ಹಾಗಾಗಿ, ಪ್ರಸಕ್ತ ದುರ್ಘಟನೆಯು ಸ್ಲೀಪರ್ ಬಸ್‌ಗಳಲ್ಲಿನ ಸುರಕ್ಷತಾ ಕ್ರಮಗಳ ಬಗ್ಗೆ ಗಂಭೀರ ಚಿಂತನೆಯ ಅಗತ್ಯವನ್ನು ಸೂಚಿಸುವಂತಿದೆ. ಹೈದರಾಬಾದ್‌ನಿಂದ ಬೆಂಗಳೂರಿಗೆ ಬರುತ್ತಿದ್ದ ಸ್ಲೀಪರ್ ಬಸ್ ಆಂಧ್ರಪ್ರದೇಶದ ಕರ್ನೂಲ್ ಬಳಿ ಅಪಘಾತಕ್ಕೀಡಾಗಿ ಹೊತ್ತಿಕೊಂಡ ಬೆಂಕಿಗೆ ಇಪ್ಪತ್ತು ಜನರು ಆಹುತಿಯಾದ ದುರ್ಘಟನೆ ಕಳೆದ ಅಕ್ಟೋಬರ್‌ನಲ್ಲಿ ನಡೆದಿತ್ತು. ಅದೇ ತಿಂಗಳಲ್ಲಿ, ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಶಾರ್ಟ್ ಸರ್ಕಿಟ್‌ನಿಂದ ಉಂಟಾದ ಬೆಂಕಿಯಲ್ಲಿ ಸ್ಲೀಪರ್ ಬಸ್‌ನಲ್ಲಿದ್ದ ಇಪ್ಪತ್ತಾರು ಪ್ರಯಾಣಿಕರು ಸಾವಿಗೀಡಾಗಿದ್ದರು. ಸ್ಲೀಪರ್ ಬಸ್‌ಗಳಿಗೆ ಸಂಬಂಧಿಸಿದ ಈ ಸರಣಿ ಅಪಘಾತಗಳು ಹಾಗೂ ಅವುಗಳಿಂದ ಉಂಟಾದ ಸಾವು ನೋವು ಸಾರ್ವಜನಿಕರನ್ನು ತಲ್ಲಣಗೊಳಿಸುವಂತಿದೆ. ಈ ದುರ್ಘಟನೆಗಳಿಗೆ, ಸುರಕ್ಷತಾ ಕ್ರಮಗಳು ಬಸ್‌ಗಳಲ್ಲಿ ಸರಿಯಾಗಿ ಪಾಲನೆಯಾಗದಿರುವುದೇ ಕಾರಣ ಎನ್ನಲಾಗಿದೆ. ಸ್ಲೀಪರ್ ಬಸ್‌ಗಳಲ್ಲಿ ಅಗ್ನಿಶಾಮಕ ಉಪಕರಣಗಳ ಕೊರತೆ ಹಾಗೂ ತುರ್ತು ನಿರ್ಗಮನ ದ್ವಾರಗಳ ಅಸಮರ್ಪಕ ವಿನ್ಯಾಸ ಎದ್ದುಕಾಣಿಸುತ್ತಿದೆ. ಸ್ಲೀಪರ್ ಬಸ್‌ಗಳ ನಿರ್ಮಾಣ ಮತ್ತು ಕಾರ್ಯಾಚರಣೆಗೆ ಕೇಂದ್ರ ಸರ್ಕಾರದ ಎಐಎಸ್–119 (ಸ್ಲೀಪರ್ ಕೋಚ್‌ಗಳಿಗೆ ವಿಶೇಷ ಮಾನದಂಡಗಳು) ಮತ್ತು ಎಐಎಸ್–052 (ಬಸ್ ಬಾಡಿ ಕೋಡ್) ನಿಯಮಗಳು ಅನ್ವಯವಾಗುತ್ತವೆ. ಈ ನಿಯಮಗಳು ಖಾಸಗಿ ಬಸ್‌ಗಳಲ್ಲಿ ಸರಿಯಾಗಿ ಪಾಲನೆ ಆಗಿವೆಯೋ ಇಲ್ಲವೋ ಎನ್ನುವುದರ ಪರಿಶೀಲನೆ ಸರಿಯಾಗಿ ನಡೆಯದಿರುವುದು ದುರಂತ ಸಂಭವಿಸಿದಾಗಷ್ಟೇ ಚರ್ಚೆಗೆ ಬರುತ್ತದೆ.



ಸ್ಲೀಪರ್ ಬಸ್‌ಗಳಲ್ಲಿ ಅಗ್ನಿ ಅವಘಡಗಳಿಂದ ಸಂಭವಿಸುತ್ತಿರುವ ಸಾವುನೋವುಗಳಿಗೂ, ಬಸ್‌ಗಳಲ್ಲಿನ ಸುರಕ್ಷತಾ ಕ್ರಮಗಳ ವೈಫಲ್ಯಕ್ಕೂ ಸಂಬಂಧವಿದೆ.

ರಾಜ್ಯದಲ್ಲಿ 2021ರಿಂದ 2025ರ ಅವಧಿಯಲ್ಲಿ ಒಟ್ಟು 55,753 ನಾಗರಿಕರು ಅಪಘಾತಗಳಲ್ಲಿ ಪ್ರಾಣ ಕಳೆದುಕೊಂಡಿದ್ದಾರೆ. ಈ ಸಂಖ್ಯೆ ರಸ್ತೆ ಸುರಕ್ಷತೆ ಮತ್ತು ವಾಹನ ಚಾಲನೆಯ ಗುಣಮಟ್ಟದ ಬಗ್ಗೆ ಕಳವಳ ಹುಟ್ಟಿಸುವಂತಿದೆ. ಅಪಘಾತಗಳ ನಿಯಂತ್ರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳು ಪರಿಣಾಮಕಾರಿಯಾಗಿಲ್ಲ ಎನ್ನುವುದಕ್ಕೂ ಅಪಘಾತಗಳಿಂದ ಸಂಭವಿಸಿದ ಸಾವಿನ ಸಂಖ್ಯೆ ನಿದರ್ಶನದಂತಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ಡಿವೈಡರ್‌ಗಳ ಸರಿಯಾದ ನಿರ್ಮಾಣ ಮತ್ತು ನಿರ್ವಹಣೆಯ ಕೊರತೆಯೂ ದುರಂತಗಳಿಗೆ ಕಾರಣವಾಗಿದೆ. ಅತಿವೇಗದ ಜೊತೆಗೆ, ಚಾಲಕರ ಮೇಲಿನ ಕರ್ತವ್ಯದ ಅತಿಯಾದ ಒತ್ತಡವೂ ಅಪಘಾತಗಳಿಗೆ ಎಡೆ ಮಾಡಿಕೊಡುತ್ತಿದೆ. ಭಾರೀ ದುರಂತ ಸಂಭವಿಸಿದಾಗ ಸಂಚಾರ ಸುರಕ್ಷತಾ ಕ್ರಮ ಹಾಗೂ ವಾಹನಗಳ ಗುಣಮಟ್ಟದ ಬಗ್ಗೆ ಕಾಳಜಿ ವ್ಯಕ್ತವಾಗುತ್ತದೆ. ಪ್ರಸ್ತುತ, ಹಿರಿಯೂರು ಬಳಿ ಸಂಭವಿಸಿರುವ ದುರ್ಘಟನೆ ಸ್ಲೀಪರ್ ಬಸ್‌ಗಳ ಸುರಕ್ಷತೆಯ ಬಗ್ಗೆ ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಕಾರಣವಾಗಬೇಕು. ಸ್ಲೀಪರ್ ಬಸ್‌ಗಳಲ್ಲಿನ ಸುರಕ್ಷತಾ ವ್ಯವಸ್ಥೆ ಖಾತರಿಗೊಳಿಸುವ ನಿಟ್ಟಿನಲ್ಲಿ, ಮುಖ್ಯವಾಗಿ ಅಗ್ನಿನಿರೋಧಕ ವ್ಯವಸ್ಥೆಯನ್ನು ಕಡ್ಡಾಯವಾಗಿ ಅನುಸರಿಸುವ ಬಗ್ಗೆ ಸರ್ಕಾರ ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಖಾಸಗಿ ಬಸ್‌ಗಳ ನಿಯಮಿತ ಪರಿಶೀಲನೆಯೂ ಕಡ್ಡಾಯವಾಗಿ ನಡೆಯಬೇಕು. ವ್ಯವಸ್ಥೆಯ ಲೋಪದಿಂದಾಗಿ ಅಪಘಾತಗಳು ಸಂಭವಿಸುವುದು ಹಾಗೂ ಜೀವಹಾನಿ ಆಗುವುದು ನಾಗರಿಕ ವ್ಯವಸ್ಥೆಗೆ ಒಪ್ಪುವುದಿಲ್ಲ.

ಶಾಲೆ ಉಳಿದರಷ್ಟೇ ಗ್ರಾಮಭಾರತ!



ವಿಶ್ಲೇಷಣೆ

ಕಿರಣ್ ಗಾಜನೂರು

ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ದುರ್ಬಲಗೊಳಿಸುವುದೆಂದರೆ, ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸುವುದು ಎಂದರ್ಥ. ಸರ್ಕಾರಿ ಶಾಲೆಗಳ ಉಳಿವಿನಲ್ಲಿ ಗ್ರಾಮಭಾರತದ ಉಳಿವೂ ಇದೆ. ಸಾಮಾಜಿಕ ಹಾಗೂ ಸಾಂಸ್ಕೃತಿಕ ಆರೋಗ್ಯಕ್ಕೂ ಸರ್ಕಾರಿ ಶಾಲೆಗಳು ಜೀವಂತವಾಗಿರುವುದಕ್ಕೂ ಸಂಬಂಧವಿದೆ.

ವರ್ತಮಾನದಲ್ಲಿ ಪ್ರಭುತ್ವವೊಂದು ನಡೆಸಬಹುದಾದ ಅತಿದೊಡ್ಡ ಹಿಂಸೆ ಯಾವುದಾದರೂ ಇದ್ದರೆ, ಅದು ಶಾಲೆಗಳೇ ಇಲ್ಲದ ಗ್ರಾಮಗಳನ್ನು ಸೃಜಿಸುವುದು! ದುರದೃಷ್ಟವಶಾತ್, ಇಂಥ ಹಿಂಸೆಯನ್ನು ಸೃಷ್ಟಿಸುವುದರಲ್ಲಿ ಸರ್ಕಾರಗಳು ಸ್ಪರ್ಧೆ ನಡೆಸುತ್ತಿರುವಂತಿದೆ.

ಅದೊಂದು ಸರ್ಕಾರಿ ಪ್ರಾಥಮಿಕ ಶಾಲೆಯ ಆವರಣ. ನಾಲ್ಕನೇ ತರಗತಿ ಓದುತ್ತಿರುವ ಬಾಲಕಿಯೊಬ್ಬಳು ತನ್ನ ಜೊತೆ ಎರಡು ವರ್ಷ ವಯಸ್ಸಿನ ತಮ್ಮನನ್ನು ಕರೆದುಕೊಂಡು ಶಾಲೆಗೆ ಬಂದಿದ್ದಳು. ಶಾಲೆಯಲ್ಲಿ ಪಾಠ ನಡೆಯುತ್ತಿದ್ದರೆ, ಈ ಪುಟ್ಟ ಬಾಲಕಿ ತನ್ನ ತಮ್ಮನ ಕಿರಿಕಿರಿ, ಅಳು, ಇತ್ಯಾದಿ ನಿಭಾಯಿಸುವುದರಲ್ಲಿ ವ್ಯಸ್ತವಾಗಿದ್ದಳು. ಈ ಜಂಜಡಗಳ ನಡುವೆಯೇ ಆಕೆ ಕಲಿಯಬೇಕಾಗಿತ್ತು. ಹತ್ತರ ವಯಸ್ಸಿಗೇ ಆ ಬಾಲಕಿಗೆ ದಕ್ಕಿದ ತಾಯ್ತನದ ಜವಾಬ್ದಾರಿ ಕಂಡು ಮನಸ್ಸು ವ್ಯಾಕುಲಗೊಂಡಿತ್ತು.

2018 ಮತ್ತು 2019ರ ನಡುವಿನ ಅವಧಿಯಲ್ಲಿ, ಕಲ್ಯಾಣ ಕರ್ನಾಟಕದ ಅತ್ಯಂತ ಹಿಂದುಳಿದ ಜಿಲ್ಲೆಯಾದ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ಸರ್ಕಾರಿ ಶಾಲಾ ಶಿಕ್ಷಕರ ಕೌಶಲಾಭಿವೃದ್ಧಿಗೆ ನೆರವಾಗುವ ಉದ್ಯೋಗ ನನ್ನದಾಗಿತ್ತು. ಆ ಸಮಯದಲ್ಲಿಯೇ, ಪರಿಸ್ಥಿತಿ ಸೃಷ್ಟಿಸಿದ ‘ಪುಟಾಣಿ ತಾಯಿ’ಯನ್ನು ನಾನು ಕಂಡಿದ್ದು. ಆ ಬಾಲಕಿ, ನನ್ನಲ್ಲಿ ಗಾಢ ವಿಷಾದವನ್ನೂ ಅಚ್ಚರಿಯನ್ನೂ ಹುಟ್ಟಿಸಿದ್ದಳು. ದಿನಕಳೆದಂತೆ, ಇದು ಆ ಭಾಗದ ಶಾಲೆಗಳಲ್ಲಿ ಇರುವ ‘ಸಾಮಾನ್ಯ ಸಂಗತಿ’ ಎಂದು ತಿಳಿದು ಮನಸ್ಸು ಭಾರವಾಗಿತ್ತು.

ವಾಸ್ತವದಲ್ಲಿ ಈ ಮಾದರಿಯ ಮಕ್ಕಳ ತಂದೆ–ತಾಯಂದಿರು ಕೂಲಿ ಕಾರ್ಮಿಕರು. ಅವರಿಗೆ, ಬೆಳಗ್ಗೆ ಏಳೆಂಟು ಗಂಟೆಯ ಹೊತ್ತಿಗೆಲ್ಲ ಹೊಲಕ್ಕೋ, ಕೂಲಿಗಾಗಿ ಸಮೀಪದ ನಗರಕ್ಕೋ ಹೋಗುವ ಅನಿವಾರ್ಯತೆ ಇರುತ್ತದೆ. ಆ ಕಾರಣಕ್ಕೆ ಚಿಕ್ಕಮಗುವಿನ ಜವಾಬ್ದಾರಿ ಅದೇ ಕುಟುಂಬದ ದೊಡ್ಡ ಮಗುವಿನ ಮೇಲೆ ಬೀಳುತ್ತದೆ. ಹಾಗಾಗಿಯೇ ಈ ಭಾಗದಲ್ಲಿ ಶಾಲೆಗೆ ಹೋಗುವ ಮಕ್ಕಳು ತಮ್ಮ ಕಿರಿಯ ಸೋದರ, ಸೋದರಿಯನ್ನು ನೋಡಿಕೊಳ್ಳಬೇಕಾದ ಸನ್ನಿವೇಶ ಸೃಷ್ಟಿಯಾಗಿದೆ ಹಾಗೂ ಅದು ಸಹಜ ಎನ್ನುವಂತಾಗಿದೆ. ಇದನ್ನು ಶಿಕ್ಷಣ ಇಲಾಖೆ ‘ಸಿಬ್ಲಿಂಗ್ ಸಮಸ್ಯೆ’ ಎಂದು ಗುರುತಿಸುತ್ತದೆ.

ಕರ್ನಾಟಕ ಸರ್ಕಾರ ಇತ್ತೀಚೆಗೆ ಸುಮಾರು 700 ಶಾಲೆಗಳನ್ನು ಉನ್ನತೀಕರಿಸಿ, ಅಲ್ಲಿಗೆ ಐದಾರು ಕಿಲೋಮೀಟರ್ ದೂರದಲ್ಲಿನ ಸರ್ಕಾರಿ ಶಾಲೆಯನ್ನು ವಿಲೀನಗೊಳಿಸುವ ಕೆಪಿಎಸ್– ಮ್ಯಾಗ್ನೆಟ್ ಶಾಲಾ ಯೋಜನೆಯನ್ನು ರೂಪಿಸಿದೆ. ಇದರ ಅರ್ಥ, ನಮ್ಮ ಹಳ್ಳಿಗಳಲ್ಲಿ ಇರುವ ಬಹುತೇಕ ಪ್ರಾಥಮಿಕ ಶಾಲೆಗಳು ಮುಚ್ಚಿಹೋಗಲಿವೆ. ಶಾಲೆ ಮುಚ್ಚಿಹೋದರೆ ಮೇಲೆ ನೆನಪಿಸಿಕೊಂಡ ಪ್ರಕರಣದಂತಹ ನೂರಾರು ಅಕ್ಕ, ತಮ್ಮಂದಿರು ಆರೇಳು ಕಿಲೋಮೀಟರ್ ದೂರದಲ್ಲಿನ ಶಾಲೆಗೆ ಹೋಗುವುದನ್ನು ನಾವು ಕಲ್ಪಿಸಿಕೊಳ್ಳಲೂ ಸಾಧ್ಯವಾಗುವುದಿಲ್ಲ.

ಸರ್ಕಾರಿ ಸುತ್ತೋಲೆಯಲ್ಲಿ ಶಿಕ್ಷಣದ ಗುಣಮಟ್ಟ ಕುರಿತು ಸುಂದರ ಪದಪುಂಜಗಳನ್ನು ಬಳಸಿರುವ ಕಾರಣಕ್ಕೆ, ‘ಕರ್ನಾಟಕ ಪಬ್ಲಿಕ್ ಸ್ಕೂಲ್’ (ಮ್ಯಾಗ್ನೆಟ್ ಶಾಲಾ ಯೋಜನೆ) ಕೇಳುವುದಕ್ಕೆ ಸುಂದರವಾಗಿಯೇ ಇದೆ. ವಾಸ್ತವದಲ್ಲಿ ಇದು ಗ್ರಾಮೀಣ ಭಾಗದ ಪ್ರಾಥಮಿಕ ಶಿಕ್ಷಣ ಮತ್ತು ಗ್ರಾಮದ ಸಾಂಸ್ಕೃತಿಕ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ.

ನಮ್ಮ ದೇಶಕ್ಕೆ, ಅದರಲ್ಲೂ ಗ್ರಾಮೀಣ ಭಾರತಕ್ಕೆ ಆಧುನಿಕತೆ, ವೈಜ್ಞಾನಿಕ ಆಲೋಚನೆ, ಸಾಮಾಜಿಕ ನ್ಯಾಯದ ಕುರಿತ ಅರಿವು ಹಾಗೂ ಹೊಸ ವಿಚಾರಗಳ ಪ್ರವೇಶವಾದುದು ಸರ್ಕಾರಿ ಶಾಲೆಗಳ ಮೂಲಕ. ಆ ಕಾರಣದಿಂದಾಗಿಯೇ, ನಮ್ಮ ಗ್ರಾಮೀಣ ಸಮಾಜದಲ್ಲಿ ಸರ್ಕಾರಿ ಶಾಲೆ ಎಂಬುದು ಮಕ್ಕಳಿಗೆ ಶಿಕ್ಷಣ ನೀಡುವ ಸ್ಥಳವಷ್ಟೇ ಆಗಿಲ್ಲ. ಅದು, ಇಡೀ ಗ್ರಾಮದ ಆಲೋಚನೆಯನ್ನು ಪ್ರಭಾವಿಸಬಹುದಾದ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದೆ.

ಶಾಲೆಗಳ ಮುಚ್ಚುವಿಕೆ ಈಗಿನ ಗತಿಯಲ್ಲಿಯೇ ಮುಂದುವರಿದರೆ, ಸುಮಾರು 6,000 ಸರ್ಕಾರಿ ಶಾಲೆಗಳು ಬಾಗಿಲು ಮುಚ್ಚಲಿವೆ ಎಂದು ವರದಿಯೊಂದು ಹೇಳುತ್ತದೆ. ಅಂದರೆ, 6,000 ಗ್ರಾಮಗಳನ್ನು ಶಾಲೆಯ ಅಸ್ತಿತ್ವವೇ ಇಲ್ಲದ ಸ್ಥಿತಿಯಲ್ಲಿ ಕಲ್ಪಿಸಿಕೊಳ್ಳಬೇಕಿದೆ. ಶಾಲೆಯೇ ಇಲ್ಲದ ಗ್ರಾಮವನ್ನು ಕಲ್ಪಿಸಿಕೊಳ್ಳುವುದು ಕೆಟ್ಟ ಕನಸಿನಂತೆ ಭಾಸವಾಗುತ್ತಿದೆ. ಇದರ ಪರಿಣಾಮ ಕೇವಲ ಶಿಕ್ಷಣದ ಮೇಲೆ ಆಗುವುದಿಲ್ಲ; ಗ್ರಾಮೀಣ ಭಾಗದ ಸಾಂಸ್ಕೃತಿಕ ಪರಿಸರವೇ ನಾಶವಾಗಿ ಹೋಗುತ್ತದೆ.

ಶಾಲೆ ಇಲ್ಲದ ಊರಿನಲ್ಲಿ ಸ್ವಾತಂತ್ರ್ಯ ದಿನದ ಆಚರಣೆ ಇರುವುದಿಲ್ಲ, ಗಾಂಧಿ ಜಯಂತಿಯೂ ಇಲ್ಲ. ಮಕ್ಕಳ ದಿನಾಚರಣೆಯೂ ಅಲ್ಲಿ ನಡೆಯುವುದಿಲ್ಲ ಎನ್ನುವುದನ್ನು ಕಲ್ಪಿಸಿಕೊಳ್ಳಲಾರದಷ್ಟು ನಮ್ಮ ಪ್ರಜ್ಞೆ ಬಡ ಹಾಗೂ ಜಡವಾಗಿದೆ ಎಂದರೆ ಏನು ಹೇಳುವುದು? ಗ್ರಾಮವೊಂದರಲ್ಲಿನ ಶಾಲೆಯ ಅನುಪಸ್ಥಿತಿಯನ್ನು ನಮ್ಮ ಸಮಾಜದ ಯಾವೆಲ್ಲಾ ಪಟ್ಟಭದ್ರ ಶಕ್ತಿಗಳು ತುಂಬುತ್ತವೆ ಎನ್ನುವುದನ್ನು ಊಹಿಸಿಕೊಳ್ಳಲಾರದ ಜಡತ್ವಕ್ಕೆ ನಮ್ಮ ಪ್ರಜಾಪ್ರತಿನಿಧಿಗಳು ಒಳಗಾಗಿದ್ದಾರೆಯೇ ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕಿದೆ.

ಆರೇಳು ಕಿಲೋಮೀಟರ್ ದೂರದ ಶಾಲೆಗೆ ಮಗುವೊಂದು ಹೇಗೆ ತಲಪುತ್ತದೆ ಎನ್ನುವ ಪ್ರಶ್ನೆಗೆ, ‘ವಾಹನ ವ್ಯವಸ್ಥೆ ಮಾಡುತ್ತೇವೆ’ ಎನ್ನುವ ಉತ್ತರವನ್ನು ‘ಕೆಪಿಎಸ್’ ಶಾಲೆಗಳ ಯೋಜನೆಯ ಪ್ರತಿಪಾದಕರು ನೀಡುತ್ತಿದ್ದಾರೆ. ಇದು ಎಷ್ಟೊಂದು ಹಾಸ್ಯಾಸ್ಪದ ಸಂಗತಿ ಎಂದರೆ, ಈ ಶಿಕ್ಷಣ ತಜ್ಞರು ಗ್ರಾಮೀಣ ಭಾಗದ ಪೋಷಕರನ್ನು ಮೇಲ್ಮಧ್ಯಮ ವರ್ಗದ ಪೋಷಕರಂತೆ ಕಲ್ಪಿಸಿಕೊಂಡಿರುವಂತಿದೆ. ಬೆಳಗ್ಗೆ ಎದ್ದು, ನೌಕರಿಗೆ ಹೋಗುವ ಗಂಡನಿಗೆ ಉಪಾಹಾರ ಕೊಟ್ಟು ಕೆಲಸಕ್ಕೆ ಕಳಿಸುವ ಗೃಹಿಣಿ, ಮಕ್ಕಳನ್ನು ಸಿದ್ಧಮಾಡಿ ಶಾಲಾ ಬಸ್ಸಿಗೆ ಹತ್ತಿಸಿ ಟಾಟಾ ಮಾಡುತ್ತಾಳೆ; ಸಂಜೆ ಶಾಲಾ ವಾಹನಕ್ಕೆ ಕಾದಿದ್ದು ಮಕ್ಕಳನ್ನು ಇಳಿಸಿಕೊಳ್ಳುತ್ತಾಳೆ. ಇಂಥ ಪೋಷಕರ ಚಿತ್ರಣವನ್ನು ಅವರು ಕಲ್ಪಿಸಿಕೊಂಡಂತಿದೆ. ಇಂದಿಗೂ ಭಾರತದ ಗ್ರಾಮೀಣ ಪ್ರದೇಶದಲ್ಲಿನ ಸುಮಾರು ಶೇ 75ರಷ್ಟು ಕುಟುಂಬಗಳ ಸದಸ್ಯರು ಕೃಷಿ ಕೂಲಿ ಕಾರ್ಮಿಕರಾಗಿದ್ದಾರೆ. ದುಡಿದು ತಿನ್ನಬೇಕಾದ ಒತ್ತಡದ ಬದುಕನ್ನು ನಿತ್ಯವೂ ಎದುರಿಸುತ್ತಿರುವವರು ಮತ್ತು ಬೆಳಗ್ಗೆ ಎಂಟಕ್ಕೆ ಕೂಲಿಗೆ ಹೋಗಬೇಕಾದ ಅನಿವಾರ್ಯತೆ ಇರುವವರು, ತಮ್ಮ ಮಕ್ಕಳನ್ನು ವಾಹನಗಳಲ್ಲಿ ಶಾಲೆಗೆ ಕಳಿಸುತ್ತಾರೆ ಎಂದು ಕಲ್ಪಿಸಿಕೊಳ್ಳುವುದೂ ಕ್ರೌರ್ಯ ಎನ್ನಿಸುತ್ತದೆ. ಅದರಲ್ಲೂ, ಕಲ್ಯಾಣ ಕರ್ನಾಟಕದ ಬಿಸಿಲಿನ ಕಾರಣಕ್ಕೆ, ಬೆಳಗ್ಗೆ ಆರಕ್ಕೇ ದುಡಿಮೆಗೆ ಹೋಗುವ ಮಂದಿಯೇ ಹಳ್ಳಿಗಳಲ್ಲಿ ಹೆಚ್ಚಾಗಿ ಇರುವುದು.

ಸಾಮಾಜಿಕ ಹಾಗೂ ಆರ್ಥಿಕ ದುಸ್ಥಿತಿಯನ್ನು ಎದುರಿಸುತ್ತಿರುವ ಪೋಷಕರು, ತಮ್ಮ ಮಕ್ಕಳನ್ನು ಎಲ್ಲಾ ಕೆಲಸ ಬಿಟ್ಟು ಶಾಲಾ ವಾಹನಕ್ಕೆ ಕಾದು ಹತ್ತಿಸಿ ಕಳುಹಿಸುತ್ತಾರೆ ಮತ್ತು ಅವರು ಹಿಂದಿರುಗುವುದನ್ನು ಕಾದಿದ್ದು ಇಳಿಸಿಕೊಳ್ಳುತ್ತಾರೆ ಎನ್ನುವುದು ಆದರ್ಶಮಯ ಯೋಚನೆಯಷ್ಟೇ. ಬಹುತೇಕ ಸಂದರ್ಭಗಳಲ್ಲಿ ಶಿಕ್ಷಕರ ಮಧ್ಯಪ್ರವೇಶದ ಕಾರಣಕ್ಕೆ– ಆ ಊರಿನಲ್ಲಿ ಶಾಲೆ ಇದೆ, ಅಲ್ಲಿ ಬಿಸಿಯೂಟ ಸಿಗುತ್ತದೆ, ಏನೋ ಕಲಿಸುತ್ತಿದ್ದಾರೆ ಅನ್ನುವ ಕಾರಣಕ್ಕೆ– ಮಗು ಶಾಲೆಗೆ ಹೋಗುತ್ತಿದೆಯೇ ಹೊರತು, ಪೋಷಕರ ಕಾಳಜಿಯಿಂದ ಅಲ್ಲ. ದೈನಂದಿನ ದುಡಿಮೆ ನೆಚ್ಚಿಕೊಂಡು ಬದುಕುವ ಜನರಿಗೆ ಅನ್ನವನ್ನೂ ಮೀರಿ ಶಿಕ್ಷಣ ಮೊದಲ ಆಯ್ಕೆ ಆಗಿರಲು ಸಾಧ್ಯವಿಲ್ಲ ಅನ್ನುವ ಸತ್ಯ ನಮಗೆ ಕಾಣದಾಗಿದೆ.

ಗ್ರಾಮೀಣ ಭಾಗದ ಜನರ ತವಕತಲ್ಲಣಗಳನ್ನು ಆಳುವ ವರ್ಗ, ಮುಖ್ಯವಾಗಿ ಗ್ರಾಮೀಣ ಭಾಗದಿಂದಲೇ ಬಂದ ಮುಖ್ಯಮಂತ್ರಿಯವರು ಯೋಚಿಸಬೇಕಿದೆ. ಈ ದೇಶದ ಪ್ರಜಾಪ್ರಭುತ್ವ ಮತ್ತು ಸರ್ಕಾರಿ ಶಿಕ್ಷಣ ವ್ಯವಸ್ಥೆಯ ನಡುವೆ ಒಂದು ಸಾವಯವ ಸಂಬಂಧವಿದೆ. ಸರ್ಕಾರಿ ಶಾಲೆಗಳ ನಾಶ ಈ ನೆಲದಲ್ಲಿ ಶಾಲೆಯನ್ನೇ ಕೇಂದ್ರವಾಗಿ ಇರಿಸಿಕೊಂಡು ಬೆಳೆಯುತ್ತಿರುವ ಪ್ರಜಾತಾಂತ್ರಿಕ ಮೌಲ್ಯಗಳ ನಾಶಕ್ಕೆ ಕಾರಣ ಆಗುತ್ತದೆ. ನಮ್ಮ ದೇಶದ ಪ್ರಜಾಪ್ರಭುತ್ವದ ಸಾಮಾಜೀಕರಣ ಪ್ರಕ್ರಿಯೆ ಆರಂಭವಾಗುವುದೇ ಶಾಲೆಗಳ ಆವರಣಗಳಿಂದ ಅನ್ನುವ ಸತ್ಯವನ್ನು ನಾವು ಮನಗಾಣಬೇಕಿದೆ.

ನಮ್ಮ ಊರಿನಲ್ಲಿ ಒಂದು ಏಕೋಪಾಧ್ಯಾಯ ಪ್ರಾಥಮಿಕ ಶಾಲೆ ಇದ್ದ ಕಾರಣಕ್ಕಷ್ಟೇ ನಾನು ಶಾಲೆ ಕಲಿತು, ಇಂದು ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿದ್ದೇನೆ. ಸಣ್ಣ ಹೋಟೆಲ್ ನಡೆಸುತ್ತಿದ್ದ ತಂದೆಯ ಮಗನಾದ ನಾನು ಪ್ರಸ್ತುತ ಏನಾಗಿರುವೆನೋ ಅದೆಲ್ಲಕ್ಕೂ ಈ ದೇಶದ ಸರ್ಕಾರಿ ಶಿಕ್ಷಣ ವ್ಯವಸ್ಥೆಯೇ ಕಾರಣ. ನನ್ನ ಬಾಲ್ಯದ ಹಿನ್ನೆಲೆಯೇ ಈ ದೇಶದ ಬಹುಸಂಖ್ಯಾತರದೂ ಆಗಿರುವುದರಿಂದ, ಸರ್ಕಾರಿ ಶಾಲೆಯ ಗುಣಮಟ್ಟ ಹೆಚ್ಚಿಸುವ ಸಂಕಥನಕ್ಕೆ ಧ್ವನಿಯಾಗುವುದು ನಮ್ಮೆಲ್ಲರ ಕರ್ತವ್ಯ.

ಸರ್ಕಾರಿ ಶಾಲೆ ವರ್ಸಸ್ ಖಾಸಗಿ ಶಾಲೆ ಎಂಬ ಬೈನರಿ ಚರ್ಚೆಗಳಿಂದ ಸರ್ಕಾರ ಮೊದಲು ಹೊರಬರಬೇಕಾಗಿದೆ. ಒಟ್ಟಾರೆ ಶಿಕ್ಷಣ ವ್ಯವಸ್ಥೆಯ ದೃಷ್ಟಿಯಿಂದ ನಾವು ಸರ್ಕಾರಿ ಶಿಕ್ಷಣ ವ್ಯವಸ್ಥೆಯನ್ನು ಉಳಿಸಿಕೊಳ್ಳಬೇಕಿದೆ. ಅದಕ್ಕೆ ಪೂರಕವಾಗಿ ಖಾಸಗಿ ಶಾಲೆಗಳಿಗೆ ಅನುಮತಿ ನೀಡಬೇಕಿದೆ. ಆದರೆ, ಸರ್ಕಾರಿ ಶಾಲೆಗಳಿಗೆ ಸ್ಪರ್ಧೆ ನೀಡುವಂತೆ ಖಾಸಗಿ ಶಾಲೆಗಳಿಗೆ ನಾವು ಅನುಮತಿ ನೀಡುತ್ತಿದ್ದೇವೆ. ಈ ಖಾಸಗಿ ವ್ಯವಸ್ಥೆಯು ಮಕ್ಕಳನ್ನು ಗ್ರಾಹಕರಂತೆ, ಶಿಕ್ಷಣವನ್ನು ಸರಕಿನಂತೆ ನೋಡುತ್ತಿದೆ. ಗ್ರಾಮಗಳಲ್ಲಿ ಶಾಲೆ ಉಳಿಸಿಕೊಳ್ಳುವುದರ ಅರ್ಥ, ಈ ದೇಶದ ಪ್ರಜಾಪ್ರಭುತ್ವವನ್ನು ಉಳಿಸಿಕೊಳ್ಳುವುದೇ ಆಗಿದೆ ಎನ್ನುವ ಹಕ್ಕೊತ್ತಾಯವನ್ನು ಪ್ರಭುತ್ವದ ಮುಂದೆ ನಾವು ಮಂಡಿಸಬೇಕಿದೆ.



ವಾಚಕರ ವಾಣಿ

ಅರಣ್ಯ ಇಲಾಖೆಯ ಹಗಲು ಕುರುಡುತನ

ಇತ್ತೀಚೆಗೆ ಬಾಬಾಬುಡನ್ ಗಿರಿ, ಮುಳ್ಳಯ್ಯನಗಿರಿಗೆ ಪ್ರವಾಸ ಹೋಗಿದ್ದೆ. ಇಪ್ಪತ್ತು ವರ್ಷಗಳ ಹಿಂದೆ ಹೋಗಿದ್ದಾಗ ಎಲ್ಲೆಲ್ಲೂ ಇದ್ದ ದಟ್ಟ ಶೋಲಾ ಅರಣ್ಯ ಪ್ರದೇಶವು ಎಸ್ಟೇಟುಗಳಿಂದ ಆವೃತವಾಗಿದೆ. ಇದೇ ಪರಿಸ್ಥಿತಿ ದೇವರಮನೆ, ಬಲ್ಲಾಳರಾಯನ ದುರ್ಗದ್ದೂ ಆಗಿದೆ. ಪ್ರವಾಸಿಗರಿಂದ ಶುಲ್ಕ ವಸೂಲಿ ಮಾಡುವ ಅರಣ್ಯ ಇಲಾಖೆ ಪ್ರಬಲ ಖಾಸಗಿ ಎಸ್ಟೇಟ್‌ನವರು ಇಷ್ಟ ಬಂದಂತೆ ಒತ್ತುವರಿ ಮಾಡಲು ಬಿಟ್ಟಿದೆ. ನಂತರ ಇವರೇ ಆನೆ ಬಂತು, ಕಾಟಿ ಬಂತೆಂದು ಹುಯಿಲೆಬ್ಬಿಸುತ್ತಾರೆ. ಈ ಪ್ರಾಣಿಗಳು ಎಲ್ಲಿಗೆ ಹೋಗಬೇಕು? ನಿಜಕ್ಕೂ ರಾಜ್ಯದಲ್ಲಿ ಅರಣ್ಯ ಇಲಾಖೆ ಅಸ್ತಿತ್ವದಲ್ಲಿ ಇದೆಯೇ?

ಮಧುಸೂದನ್ ಬಿ.ಎಸ್., ಬೆಂಗಳೂರು

ನಂಬಿದನು ಪ್ರಹ್ಲಾದ, ನಂಬದಿರ್ದನು ತಂದೆ

‘ವೈಜ್ಞಾನಿಕ ಮನೋಭಾವ: ಹಿಮ್ಮುಖ ಚಲನೆ’ ಲೇಖನದ (ಲೇ: ಈ. ಬಸವರಾಜು, ಪ್ರ.ವಾ., ಡಿ. 25) ಆಶಯ ಚೆನ್ನಾಗಿದೆ. ಆದರೆ, ವೈಚಾರಿಕತೆಯ ಅತಿರೇಕದಲ್ಲಿ ನಂಬಿಕೆಗಳ ಮೇಲೆ ದಾಳಿ ನಡೆಸುವುದು ಎಷ್ಟು ಸರಿ? ಇಸ್ರೊ ಅಧ್ಯಕ್ಷರಾಗಿದ್ದ ಎ.ಎಸ್. ಕಿರಣ್ ಕುಮಾರ್ ಒಂದು ಸಲ, ‘ವಿಜ್ಞಾನಿಗಳಿಗೂ ಈ ಜಗತ್ತು ಈಗಲೂ ತುಂಬಾ ನಿಗೂಢವಾಗಿದೆ. ಗೊತ್ತಿರುವುದು ಶೇಕಡ ಒಂದೋ ಎರಡೋ ಇರಬಹುದಷ್ಟೆ’ ಎಂದಿದ್ದರು. ಡಿವಿಜಿ ಅವರು ಬದುಕಿನ ಈ ಸ್ವರೂಪವನ್ನೇ ‘ನಂಬಿದನು ಪ್ರಹ್ಲಾದ, ನಂಬದಿರ್ದನು ತಂದೆ... ಕಂಬವೋ ಬಿಂಬವೋ ನಂಬಿಕೆಯು ಒಂದಿರಲಿ...’ ಎಂದಿದ್ದಾರೆ. ಗಾಂಧೀಜಿ, ರಮಣ, ರಾಮಾನುಜ, ಪರಮಹಂಸ, ವಿವೇಕಾನಂದ, ಟ್ಯಾಗೋರ್, ಪುತಿನ, ಎಕ್ಕುಂಡಿ ಇಂತಹ ಮಹಿಮರೆಲ್ಲ ದೇವರನ್ನು ನಂಬುತ್ತಿದ್ದವರೇ. ಆದರೆ, ಇವರ ಕಲ್ಪನೆಯ ದೇವರು ಬೇರೆ ಬೇರೆ. ಹಾಗೆಂದರೆ, ಇವರದೆಲ್ಲ ಮೌಢ್ಯವೇ?

ಬಿ.ಎಸ್. ಜಯಪ್ರಕಾಶ ನಾರಾಯಣ, ಅಗ್ರಹಾರ ಬೆಳಗುಲಿ

ಹತ್ಯೆ ಸಮರ್ಥನೆ: ಪ್ರಚೋದನೆಗೆ ಪ್ರೇರಣೆ

ದಲಿತ ಸಮುದಾಯದ ವ್ಯಕ್ತಿಯನ್ನು ಮದುವೆಯಾದಳೆಂದು ತಂದೆಯೇ ಗರ್ಭಿಣಿ ಪುತ್ರಿಯನ್ನು ಕೊಂದ ಕೃತ್ಯ ಹೇಯವಾದುದು. ಈ ಮರ್ಯಾದೆಗೇಡು ಹತ್ಯೆಯನ್ನು ಜಾತಿಗ್ರಸ್ತ ಮನಸ್ಸುಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸಮರ್ಥಿಸಿಕೊಳ್ಳುತ್ತಿರುವುದು ಕಳವಳಕಾರಿ. ಮರ್ಯಾದೆಗೇಡು ಹತ್ಯೆ ಅಥವಾ ಇನ್ನಾವುದೇ ಬಗೆಯ ಹತ್ಯೆಯನ್ನು ಸಮರ್ಥಿಸುವುದು ಕೊಲ್ಲುವ ಮನಃಸ್ಥಿತಿಯುಳ್ಳವರನ್ನು ಪ್ರಚೋದಿಸುತ್ತದೆ. ಸಾಮಾಜಿಕ ಸ್ವಾಸ್ಥ್ಯ ಹಾಳು ಮಾಡುವ ಇಂಥವರ ವಿರುದ್ಧ ಸರ್ಕಾರ ಕಠಿಣ ಕಾನೂನು ಕ್ರಮವನ್ನು ಜರುಗಿಸಬೇಕಿದೆ.

ಸಿ.ಎಚ್. ಮಧುಕುಮಾರ, ಮದ್ದೂರು

ಸ್ವಾರ್ಥ ತ್ಯಜಿಸಿದರಷ್ಟೆ ಪರಿಸರಕ್ಕೆ ಉಳಿಗಾಲ

‘**ಪರಿಸರ:** ಸರ್ಕಾರಕ್ಕೆ ಸದರ!’ ಲೇಖನ (ಲೇ: ಜ್ಯೋತಿ, ಪ್ರ.ವಾ., ಡಿ. 24) ಓದಿ ನೋವಾಯಿತು. ಪರಿಸರದ ಮೇಲೆ ನಿತ್ಯವೂ ದೌರ್ಜನ್ಯ ನಡೆಯುತ್ತಿದೆ. ಅಕ್ರಮ ಗಣಿಗಾರಿಕೆ, ಅರಣ್ಯನಾಶ, ಲೆಕ್ಕವಿಲ್ಲದಷ್ಟು ರಾಸಾಯನಿಕ– ಪ್ಲಾಸ್ಟಿಕ್ ಬಳಕೆ ಆಗುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕಿದೆ. ಮನುಷ್ಯ ಸ್ವಾರ್ಥ, ದುರಾಸೆ ಬಿಟ್ಟಾಗಲಷ್ಟೆ ಪರಿಸರವು ಸ್ವಲ್ಪಮಟ್ಟಿಗೆ ಸುಧಾರಿಸಬಹುದು. ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ವ್ಯಕ್ತಿಯಿಂದ ವ್ಯಕ್ತಿಗೆ, ಮನೆಯಿಂದ ಮನೆಗೆ, ಹೃದಯದಿಂದ ಹೃದಯಕ್ಕೆ ಮುಟ್ಟಿಸುವ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಿದೆ.

ಕುಂದೂರು ಮಂಜಪ್ಪ, ಹೊಳೆಸಿರಿಗೆರೆ

ಸ್ವತಂತ್ರ ತುರ್ತು ನಿರ್ಗಮನ ವ್ಯವಸ್ಥೆ ರೂಪಿಸಿ

ಹಿರಿಯೂರು ಬಳಿ ನಡೆದ ಸೀಬರ್ಡ್ ಸ್ಲೀಪರ್ ಬಸ್ ದುರಂತ ಪ್ರಕರಣವು ಆಘಾತ ತಂದಿದೆ. ಅಪಘಾತದ ನಂತರ ಬಸ್‌ನ ಮುಖ್ಯ ಮತ್ತು ತುರ್ತು ನಿರ್ಗಮನದ ಬಾಗಿಲುಗಳು ತಕ್ಷಣಕ್ಕೆ ತೆರೆದುಕೊಂಡಿಲ್ಲ. ಇದರಿಂದ ಪ್ರಯಾಣಿಕರು ಹೊರಬರಲು ಸಾಧ್ಯವಾಗದೆ ಸಾವನ್ನಪ್ಪಿದ್ದಾರೆ. ಬಸ್‌ನಲ್ಲಿದ್ದ ವಿದ್ಯುತ್ ಮತ್ತು ವಾಯು ಒತ್ತಡ ಆಧಾರಿತ ಬಾಗಿಲುಗಳು ಅಪಘಾತದಿಂದ ಸ್ಥಗಿತಗೊಂಡಿದ್ದೇ ಈ ಸಾವಿಗೆ ಕಾರಣವಾಗಿರಬಹುದು. ಪ್ರಯಾಣಿಕರ ಜೀವದ ಮೌಲ್ಯವನ್ನು ಮನಗಂಡು ಸಾರಿಗೆ ಇಲಾಖೆ ಹಾಗೂ ಸರ್ಕಾರ ತಕ್ಷಣವೇ ಇಂತಹ ನಿರ್ಲಕ್ಷ್ಯವನ್ನು ಗಂಭೀರವಾಗಿ ಪರಿಗಣಿಸಬೇಕು. ಸಂಪೂರ್ಣವಾಗಿ ಕಾರ್ಯ ನಿರ್ವಹಿಸುವ ಸ್ವತಂತ್ರ ತುರ್ತು ನಿರ್ಗಮನ ವ್ಯವಸ್ಥೆಯನ್ನು ಸ್ಲೀಪರ್ ಬಸ್‌ಗಳಲ್ಲಿ ಕಡ್ಡಾಯಗೊಳಿಸಬೇಕಿದೆ.

ನಾಗರಾಜ್ ಕೆ. ಕಲ್ಲಹಳ್ಳಿ, ತುಮಕೂರು

ಸಮಾಧಾನ

ಐಸ್ಲೆಂಡಿನಲ್ಲೂ
ಸೊಳ್ಳೆ:
ಇದೊಳ್ಳೆ ವಿದ್ಯಮಾನ;
ಭಾರತೀಯರಿಗೆ
ಎಲ್ಲಿಲ್ಲದ ಸಮಾಧಾನ!

ಸಿಪಿಕೆ, ಮೈಸೂರು

ಸಿನಿಮಾ ಟಿಕೆಟ್: ಏಕರೂಪ ದರ ಏಕಿಲ್ಲ?

ಸ್ಟಾರ್ ನಟರು ತಮ್ಮ ಸಿನಿಮಾ ಬಿಡುಗಡೆಯಾದಾಗ ಪೈರಸಿ ಬಗ್ಗೆ ಸಿನಿಮಾ ಶೈಲಿಯಲ್ಲಿಯೇ ಮಾತನಾಡುತ್ತಾರೆ. ಇದು ಪ್ರಚಾರ ಪಡೆಯುವ ತಂತ್ರಗಾರಿಕೆಯೂ ಹೌದು. ಆದರೆ, ಥಿಯೇಟರ್‌ಗಳಲ್ಲಿ ಮೊದಲ ವಾರ ಟಿಕೆಟ್ ದರ ಮಾಮೂಲಿಗಿಂತ ನೂರು ರೂಪಾಯಿ ಏರಿಕೆಯಾಗುತ್ತದೆ. ಕಡಿಮೆ ದರವಿದ್ದರೆ ಸಿನಿಮಾ ಹೆಚ್ಚು ಪ್ರೇಕ್ಷಕರನ್ನು ತಲಪುತ್ತದೆ. ಹಣ ಸಂಗ್ರಹವೂ ಆಗುತ್ತದೆ. ನಿಜವಾದ ಸಿನಿಮಾ ಉದ್ದೇಶವೇ ಇದು. ಟಿಕೆಟ್ ದರ ದುಬಾರಿಯಾದರೆ ಪ್ರೇಕ್ಷಕರು ಪೈರಸಿಯ ಮೊರೆ ಹೋಗುತ್ತಾರೆ; ಇಲ್ಲವೆ ಟಿ.ವಿ.ಗಳಲ್ಲಿ ಪ್ರಸಾರ ಆಗುವ ತನಕ ಕಾಯುತ್ತಾರೆ. ಟಿಕೆಟ್ ದರ ಸದಾಕಾಲವೂ ಒಂದೇ ತೆರನಾಗಿ ಇರುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರದ್ದೋ ಅಥವಾ ನಟರದ್ದೋ?

ಮಲ್ಲಿಕಾರ್ಜುನ, ಸುರಧೇನುಪುರ

ಜಾಲಡಾಟ

ಅಭಿಮಾನದ ವ್ಯಾಖ್ಯಾನ



ಸಿನಿಮಾ ಪ್ರಾಡಕ್ಟು, ಪ್ರೇಕ್ಷಕ ಗ್ರಾಹಕ, ಗ್ರಾಹಕನೇ ದೇವರು. ಪ್ರಾಡಕ್ಟ್‌ಗೆ ಅಥವಾ ಪ್ರಾಡಕ್ಟ್ ಕೊಡುವವರಿಗೆ ಗ್ರಾಹಕರು ಅಭಿಮಾನಿಗಳಾಗಬೇಕಿಲ್ಲ. ಪ್ರಾಡಕ್ಟ್ ಕೊಡುವವರು ಗ್ರಾಹಕನಿಗೆ ಅಭಿಮಾನಿಗಳಾಗಿರಬೇಕು, ಗ್ರಾಹಕನಿಗೆ ಗೌರವ ಕೊಡಬೇಕು.

ವೀರೇಂದ್ರ ಮಲ್ಲಣ್ಣ, ಸಿನಿಮಾ ಬರಹಗಾರ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಬಿಜೆಪಿ ನಾಯಕರು ರಾಜ್ಯ ಸರ್ಕಾರದ ವಿರುದ್ಧವಷ್ಟೇ ಮಾತನಾಡುತ್ತಾರೆ. ಆದರೆ, ರೈಲು ಪ್ರಯಾಣ ದರ ಏರಿಕೆಯಿಂದ ಜನಸಾಮಾನ್ಯರ ಮೇಲೆ ಆಗುತ್ತಿರುವ ತೊಂದರೆ ಬಗ್ಗೆ ತುಟಿ ಬಿಚ್ಚುತ್ತಿಲ್ಲ ಏಕೆ?

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 27-12-2000

● **‘ಬಿ.ಟಿ ಹತ್ತಿ ಉತ್ಪಾದನೆಗೆ ಮುಂದಿನ ವರ್ಷ ಅನುಮತಿ’**

ಬೆಂಗಳೂರು, ಡಿ. 26– ಬಿ.ಟಿ ತಂತ್ರಜ್ಞಾನ ಹತ್ತಿ ತಳಿಯ ವಾಣಿಜ್ಯ ಉತ್ಪಾದನೆಯನ್ನು ಮುಂದಿನ ವರ್ಷ ಆರಂಭಿಸಲು ಅನುಮತಿ ನೀಡಲಾಗುತ್ತದೆ ಎಂದು ಕೃಷಿ ಸಚಿವ ಟಿ.ಬಿ. ಜಯಚಂದ್ರ ಇಂದು ತಿಳಿಸಿದರು.

ಕರ್ನಾಟಕ ಕೃಷಿ ಆಯೋಗದ ವರದಿ ಸ್ವೀಕರಿಸಿದ ನಂತರ ಅವರು ಪತ್ರಕರ್ತರ ಜೊತೆ ಮಾತನಾಡುತ್ತಾ, ಈ ವರ್ಷ ಪರೀಕ್ಷಾರ್ಥ ಬೆಳೆ ಬೆಳೆಯಲು ಅನುಮತಿ ನೀಡಲಾಗಿದೆ. ಈ ಕಾರ್ಯಕ್ರಮದ ನಿಗಾವಹಿಸಿರುವ ವಿಶ್ವವಿದ್ಯಾಲಯದ ವರದಿಯನ್ನು ಆಧರಿಸಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲಾಗುತ್ತದೆ ಎಂದರು.

● **ಪೊಲೀಸ್ ಕಾರ್ಯಾಚರಣೆಯಲ್ಲಿ ಉಗ್ರನ ಹತ್ಯೆ, ಒಬ್ಬನ ಬಂಧನ**

ನವದೆಹಲಿ, ಡಿ. 26 (ಪಿಟಿಐ, ಯುಎನ್‌ಐ)– ಕೆಂಪುಕೋಟೆಯಲ್ಲಿ ಐದು ದಿನಗಳ ಹಿಂದೆ ನಡೆದ ಉಗ್ರಗಾಮಿಗಳ ಗುಂಡಿನ ದಾಳಿ ಘಟನೆಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಇಂದು ಬೆಳಗಿನ ಜಾವ ದಕ್ಷಿಣ ದೆಹಲಿಯಲ್ಲಿ ಕಾರ್ಯಾಚರಣೆ ನಡೆಸಿ ಪಾಕಿಸ್ತಾನ ರಾಷ್ಟ್ರೀಯತೆ ಹೊಂದಿರುವ ಒಬ್ಬ ಉಗ್ರನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಕಾರ್ಯಾಚರಣೆಯಲ್ಲಿ ಉಗ್ರಗಾಮಿಯೊಬ್ಬ ಗುಂಡಿಗೆ ಆಹುತಿಯಾಗಿದ್ದಾನೆ.

75 ವರ್ಷಗಳ ಹಿಂದೆ

ಬುಧವಾರ, 27-12-1950

● **ಭಾರತ ಕಮ್ಯುನಿಸ್ಟ್ ಪಕ್ಷದ ನೀತಿ ವಿಮರ್ಶಿಸಲು ಪ್ರಯತ್ನ**

ಮುಂಬಯಿ, ಡಿ. 26– ‘ರಾಜಕೀಯ ಹಾಗೂ ಸಂಸ್ಥೆಗೆ ಸಂಬಂಧಪಟ್ಟ ವಿಷಯಗಳ ಬಗ್ಗೆ ನಿರ್ದಿಷ್ಟ ನಿರ್ಧಾರಗಳನ್ನು ಕೈಗೊಳ್ಳಲು’ ಭಾರತದ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನವನ್ನು ‘ಅದಷ್ಟು ಜಾಗ್ರತೆ’ಯಾಗಿ ನಡೆಸಲು ತೀರ್ಮಾನಿಸಿರುವುದಾಗಿ, ಕೇಂದ್ರ ಸಮಿತಿಯು ಇತ್ತ ಹೇಳಿಕೆಯಲ್ಲಿ ತಿಳಿಸಿದೆ.

ಡಿಸೆಂಬರ್ ತಿಂಗಳಲ್ಲಿ ಸೇರಿದ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಸಭೆಯಲ್ಲಿ ಮೇಲ್ಕಂಡ ನಿರ್ಧಾರ ತೆಗೆದುಕೊಳ್ಳಲಾಯಿತು.

ಕಾರಣಾಂತರಗಳಿಂದ 1950ರ ಮೇ ತಿಂಗಳಲ್ಲಿ ನಡೆದ ಸಮಿತಿಯ ಸಭೆಗೆ ಭಾಗವಹಿಸಲಾಗದಿದ್ದ ಅನೇಕ ಹಳೆಯ ಕೇಂದ್ರ ಸಮಿತಿಯ ಸದಸ್ಯರು ಡಿಸೆಂಬರ್‌ನಲ್ಲಿ ನಡೆದ ಸಭೆಯಲ್ಲಿ ಹಾಜರಿದ್ದರು.

ಭಾಗವಹಿಸಿದ್ದವರ ಹೆಸರುಗಳನ್ನಾಗಲೀ, ಯಾವ ಕಾರಣಗಳಿಂದ ಮುಂಚಿನ ಸಭೆಯಲ್ಲಿ ಭಾಗವಹಿಸಲಿಲ್ಲ ಎಂಬುದನ್ನಾಗಲೀ ಕಮ್ಯುನಿಸ್ಟ್ ಪಕ್ಷವು ಹೇಳಿಕೆಯಲ್ಲಿ ತಿಳಿಸಿಲ್ಲ.

ಚುರುಮುರಿ

ಬಿಡದ ಸಂಕಲ್ಪಗಳು!



● ತುರುವೇಕೆರೆ ಪ್ರಸಾದ್

‘**ಮೋದಿಮಾಮ** ಹೊಸ ವರ್ಷಕ್ಕೆ ಮುಂಚೇನೆ ಗಾಂಧಿ ಬಿಟ್ಟವ್ರೆ, ನೀವೇನ್ ಬಿಟ್ಟೀರಿ?’ ಕೆದಕಿದ ಗುದ್ಲಿಂಗ.

‘ಬಿಡಕ್ಕೆ ಏನು ಬಾಕಿ ಅದೆ? ಹೆಂಡತಿ ಚಟ ಎಲ್ಲಾ ಬಿಡ್ಸವ್ಳೆ. ಬಾಸು ಹಟ ಬಿಡ್ಸವ್ನೆ. ಬೈಯೋದನ್ನ ಸರ್ಕಾರನೇ ಬಿಡ್ಸೈತೆ’ ಎಂದ ಮಾಲಿಂಗ.

‘ನಮ್ಮ ರಾಜಕೀಯದೋರು ಪ್ರತಿ ಪಿತೃಪಕ್ಷಕ್ಕೆ ಮಾತೃಪಕ್ಷಕ್ಕೇ ಎಳ್ಳು–ನೀರು ಬಿಡ್ತಾರೆ. ನಾವು ಏನ್ ಬಿಡಕ್ಕಾಗುತ್ತೆ?’

‘ನಾನು ಎಣ್ಣೆ ಬಿಡ್ಬೇಕು ಅಂದ್ಕೊಂಡೆ. ಆದ್ರೆ ಎಣ್ಣೆ ಮೇಲೆ ಸಮಸ್ತ ಗ್ಯಾರಂಟಿ ನಿಂತಿದೆ. ಹಂಗಾಗಿ ನಾನು ಎಣ್ಣೆ ಬಿಟ್ರೆ ಜನಕ್ಕೆ ದ್ರೋಹ ಮಾಡಿದಂಗಾಗುತ್ತೆ ಅಂತ ಸುಮ್ಕಾದೆ’.

‘ನಾನೂ ಅಷ್ಟೇ! ಗುಟ್ಕಾ ಬಿಟ್ರೆ ನಮ್ಮ ರೈತರಿಗೆ ಶಾನೆ ಅನ್ಯಾಯ ಮಾಡಿದಂಗಾಗುತ್ತೆ ಅಂತ ನನ್ ಸಂಕಲ್ಪಾನ ಒಳಗೇ ನುಂಗ್ಕೊಂಡಿದೀನಿ’ ಎಂದು ಕಾಳಜಿಯ ಧ್ವನಿಯಲ್ಲಿ ಹೇಳುತ್ತಾ ಪಿಚಕ್ಕನೆ ಉಗಿದ ಭದ್ರ.

‘ಹೌದೌದು, ಭಾರೀ ರಗಳೆ ಮಾರಾಯ. ಸಾಲ ಮಾಡೋದು ಬಿಟ್ರೆ ದೇಶದ ಆರ್ಥಿಕತೇನೆ ಹಾಳಾಗುತ್ತೆ. ಅದ್ಕೇ ಎಲ್ಲಾ ಸೊಸೈಟೀಲು ಸುಸ್ತಿ ಆಗಿವ್ನಿ’.

‘ಲೇಯ್, ಈಗ ಬಿಡೋ ಕಾಲ ಅಲ್ರಲೇ, ಬಿಡ್ದೇ ಇರೋ ಟ್ರೆಂಡ್! ಸಿಎಂ ತಲೆ ಮೇಲೆ ತಲೆ ಬಿದ್ರೂ ಕುರ್ಚಿ ಬಿಡಲ್ಲ ಅಂತ ಸಂಕಲ್ಪ ಮಾಡವ್ರೆ. ಡಿಸಿಎಂ ಎಷ್ಟೇ ಊಟದ ಆಟ ಆಡುದ್ರೂ ಇಟ್ಟ ಗೂಟ ತೆಗೆಯಲ್ಲ ಅಂತ ಶಪಥ ಮಾಡವ್ರೆ’ ಎಂದ ಕಲ್ಲೇಶಿ.

‘ಊ ಕಣ್ಲಾ, ಕೈಕಮಾಂಡೂ ಅಷ್ಟೇ! ಯಾರು ಎಷ್ಟಾರಾ ಬಾಯ್ ಬಡ್ಕಳ್ಲಿ, ನಾವು ಮಧ್ಯೆ ತಲೆ ಆಕಕಿಲ್ಲ ಅಂತ ಸಂಕಲ್ಪ ಮಾಡವ್ರೆ’.

‘ಕೆಲವ್ರುದ್ದು ಮಾತ್ರ ಬಿಡಂಗಿಲ್ಲ, ಕಟ್ಕೋಂಗಿಲ್ಲ ಅನ್ನೋ ಧರ್ಮಸಂಕಟ! ಬಗೆಹರೀಲಿಲ್ಲ ಕುರ್ಚಿ ಕಗ್ಗಂಟು, ಆಗಲಿಲ್ಲ ಸುಸೂತ್ರ ಹೆರ್ಗೆ, ಆಟಕ್ಕಿಲ್ಲ ತಾವು ಲೆಕ್ಕಕ್ಕುಂಟು ಅಂತ ಕೈ ಚೆಲ್ಲವ್ರೆ ಖರ್ಗೆ’ ಎಂದ ಪರ್ಮೇಶಿ’.

ಎಲ್ಲಾ ಗೊಳ್ಳನೆ ನಕ್ಕರು.

ಸಂಗತ

ನದಿಗಳ ಹೆಗಲ ಮೇಲೆ ಸರ್ಕಾರದ ಸವಾರಿ

ನದಿಗಳ ನೀರು ಸಮುದ್ರ ಸೇರುವುದನ್ನು ‘ವ್ಯರ್ಥ’ ಎಂದು ಭಾವಿಸುವವರಿಗೆ ಪರಿಸರದ ಸೂಕ್ಷ್ಮಗಳ ಅರಿವಿಲ್ಲ. ಲಾಭ–ನಷ್ಟದ ಲೆಕ್ಕಾಚಾರ ಪರಿಸರಕ್ಕೆ ಹಾನಿಕರ.

● ಕೆ.ಎಚ್. ಓಬಳೇಶ್

ಅತಿ ಪ್ರಾಚೀನ ಹಾಗೂ ಅಭಿವೃದ್ಧಿ ಹೊಂದಿರುವ ಮಹಾನಗರಗಳೆಲ್ಲ ನದಿಗಳ ತಟದಲ್ಲಿವೆ ಎನ್ನುವುದು ಕಾಕತಾಳೀಯವಲ್ಲ; ಲಂಡನ್, ರೋಮ್, ಪ್ಯಾರೀಸ್, ಕೈರೊ ಮತ್ತು ದೆಹಲಿ – ಇವುಗಳ ಮೂಲಕ ಹರಿಯುವ ಜೀವಜಲವೇ ಆ ನಗರಗಳ ಉಚ್ಛ್ರಾಯ ಸ್ಥಿತಿಗೆ ಕಾರಣ. ನಾಗರಿಕತೆ ಬೆಳೆದಂತೆ ಮನುಷ್ಯ ಹರಿಯುವ ನದಿಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸಿದ್ದಾನೆ. ಹಾಗಾಗಿಯೇ, ಇಂದು ಜಗತ್ತಿನ ಯಾವುದೇ ನದಿಯು ಸ್ವತಂತ್ರವಾಗಿ ಹರಿಯುತ್ತಿಲ್ಲ. ಪ್ರಸ್ತುತ ಆಳುವ ವರ್ಗವು ಅಭಿವೃದ್ಧಿಯ ಹಣೆಪಟ್ಟಿ ಅಂಟಿಸಿಕೊಂಡಿದ್ದು, ಅದರ ಹೆಸರಿನಲ್ಲಿ ಎಲ್ಲವನ್ನೂ ಧ್ವಂಸ ಮಾಡುತ್ತಿದೆ. ಇದಕ್ಕೆ ನದಿಗಳ ಜೋಡಣೆಯೂ ಸೇರ್ಪಡೆಯಾಗಿದೆ.

ರಾಷ್ಟ್ರ ಮಟ್ಟದಲ್ಲಿ ಈಗ ನದಿ ಜೋಡಣೆಯದ್ದೇ ಚರ್ಚೆ. ಈ ವಿಚಾರವಾಗಿ ‘ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆ’ಯನ್ನೂ ರಚಿಸಲಾಗಿದೆ. ಇದರಡಿ ಎಲ್ಲಾ ರಾಜ್ಯಗಳಿಗೂ ಸದಸ್ಯತ್ವವಿದೆ. ಇತ್ತೀಚೆಗೆ ನಡೆದ ಸಭೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದಂತೆ ಗೋದಾವರಿ-ಕಾವೇರಿ ಹಾಗೂ ಬೇಡ್ತಿ-ವರದಾ ನದಿಗಳ ಜೋಡಣೆ ಕುರಿತು ಚರ್ಚಿಸಲಾಗಿದೆ. ‘ಬೇಡ್ತಿ-ವರದಾ ಜೋಡಣೆಯಿಂದ ರಾಜ್ಯದ ಜನರಿಗೆ ಉಪಯೋಗವಾಗಲಿದೆ. ಕೇಂದ್ರವೇ ಯೋಜನೆಯ ಬಹುಪಾಲು ವೆಚ್ಚ ಭರಿಸಲಿದೆ. ಸಮುದ್ರಕ್ಕೆ ವ್ಯರ್ಥವಾಗಿ ಹರಿಯುವ ನೀರನ್ನು ಜನರ ಅನುಕೂಲಕ್ಕೆ ಬಳಸುವುದರಲ್ಲಿ ತಪ್ಪೇನು’ ಎಂಬುದು ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಪ್ರಶ್ನೆ.

ನದಿಗಳೆಂದರೆ ಬರೀ ನೀರು, ಮರಳು, ಕಲ್ಲುಬಂಡೆಗಳಲ್ಲ. ಇಂದಿಗೂ ನಾವು ಅವುಗಳನ್ನು ಮೂರ್ತ ಸ್ವರೂಪದಲ್ಲಿ ನೋಡುತ್ತಿರುವುದೇ ಇಂತಹ ಪ್ರಶ್ನೆಗಳ ಹುಟ್ಟಿಗೆ ಕಾರಣ. ದೇಶದಲ್ಲಿ ನದಿಗಳಿಗೆ ಧಾರ್ಮಿಕವಾಗಿ ಪೂಜನೀಯ ಸ್ಥಾನ ನೀಡಿದರೂ ಅವುಗಳ ದಯನೀಯ ಸ್ಥಿತಿ ಕುರಿತು ನಮಗೆ ಎಳ್ಳಷ್ಟೂ ಲಕ್ಷ್ಯವಿಲ್ಲ. ವೇದಿಕೆಗಳಲ್ಲಿ ಧಾರ್ಮಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಅವುಗಳ ಬಗ್ಗೆ ಮಾತನಾಡಿದರೂ ಅಂತಿಮವಾಗಿ ಎಲ್ಲವೂ ವ್ಯಾವಹಾರಿಕವಾಗಿ ಪರ್ಯಾವಸಾನ ಹೊಂದುತ್ತವೆ. ನದಿಗಳ ನೈಜ ಸಮಸ್ಯೆ ಏನು, ಅವುಗಳೇಕೆ ಸೊರಗುತ್ತಿವೆ ಎಂದು ಯೋಚಿಸುವುದಿಲ್ಲ. ಜನಪ್ರಿಯ ಕಾರ್ಯಕ್ರಮಗಳಲ್ಲಿ ತೇಲುತ್ತಿರುವ ಸರ್ಕಾರಗಳಿಗೆ ಅವುಗಳ ಆರ್ತನಾದ ಕೇಳಿಸುತ್ತದೆಯೆ? ಸಮುದ್ರಕ್ಕೆ ವ್ಯರ್ಥವಾಗಿ ಹರಿಯುವ ನದಿಗಳ ನೀರು ತಡೆಯಲು ಕ್ರಮ ತೆಗೆದುಕೊಳ್ಳುವಂತೆ ಪುಕ್ಕಟೆ ಸಲಹೆ ನೀಡುವವರೇ ಹೆಚ್ಚಿದ್ದಾರೆ. ಆದರೆ, ನದಿಗಳು ಸಮುದ್ರದ ಒಡಲು ಸೇರದಿದ್ದರೆ ಅವುಗಳ ಸೂಕ್ಷ್ಮ ಜೀವಪರಿಸರದಲ್ಲಾಗುವ ಪಲ್ಲಟದ ಅರಿವು ಎಷ್ಟು ಮಂದಿಗಿದೆ?



ಸಮುದ್ರಕ್ಕೆ ಹರಿಯುವ ನದಿಗಳ ನೀರನ್ನು ಟಿಎಂಸಿ ಅಡಿಯಲ್ಲಷ್ಟೇ ನಾವು ಲೆಕ್ಕ ಹಾಕುತ್ತೇವೆ. ಆದರೆ, ಆ ನೀರು ತನ್ನ ಹಾದಿಯುದ್ದಕ್ಕೂ ಸೃಷ್ಟಿಸಿರುವ ಜೀವಪರಿಸರದ ಅರಿವು ನಮಗಿಲ್ಲ. ಜಲಸಸ್ಯ, ಮೀನು, ಸಸ್ತನಿ, ಸರೀಸೃಪ, ಮೃದ್ವಂಗಿ, ಸೀಗಡಿ, ಏಡಿ, ಕಪ್ಪೆ, ಜೇಡ ಇತ್ಯಾದಿ ಜೀವಿಗಳ ವಿಕಸನ ಹಾಗೂ ಅವುಗಳೊಂದಿಗೆ ಪರಾವಲಂಬಿ ಜೀವಿಗಳು ಬೆಸೆದುಕೊಂಡಿರುವ ಸರಪಳಿ ವಿಶಿಷ್ಟವಾದುದು. ನದಿ ತನ್ನ ಪಯಣದುದ್ದಕ್ಕೂ ಅಗಾಧ ಪ್ರಮಾಣದಲ್ಲಿ ಮರಳಿನ ರಾಶಿಯನ್ನು ಸೃಷ್ಟಿಸುತ್ತದೆ. ಆದರೆ, ಜತನದಿಂದ ಮರಳು ಗಣಿಗಾರಿಕೆ ಮಾಡಿ ಜೇಬು ತುಂಬಿಸಿಕೊಳ್ಳುವ ಬಗ್ಗೆಯಷ್ಟೆ ಕೆಲವರಿಗೆ ಚಿಂತೆ. ಜೀವಪರಿಸರದಲ್ಲಿ ಈ ಮರಳಿಗೂ ವಿಶಿಷ್ಟ ಸ್ಥಾನವಿದೆ. ನದಿಗಳ ಸಮೀಪದ ಭೂಪ್ರದೇಶಗಳಲ್ಲಿ ತೇವಾಂಶ ಹೆಚ್ಚಿಸುವಲ್ಲಿ ಇದರ ಪಾತ್ರ ಹಿರಿದು. ಆದರೆ, ನದಿಗಳ ಆಯಕಟ್ಟಿನ ಈ ಪ್ರದೇಶವು ಗುಣಮಟ್ಟ ಕಳೆದುಕೊಳ್ಳುತ್ತಿದೆ.

ಔದ್ಯೋಗಿಕ ಚಟುವಟಿಕೆಗಳಿಗೆ ಅತಿಹೆಚ್ಚಾಗಿ ನದಿಗಳ ನೀರು ಬಳಕೆ ಆಗುತ್ತದೆ. ಇದರಿಂದ ಸಮುದ್ರಕ್ಕೆ ಹರಿಯುವ ಸಿಹಿನೀರಿನ ಪ್ರಮಾಣ ಗಣನೀಯವಾಗಿ ತಗ್ಗಿದೆ. ಸಿಹಿನೀರು ಮತ್ತು ಉಪ್ಪುನೀರು ಸಮ್ಮಿಲನಗೊಳ್ಳುವ ಸಮುದ್ರತೀರ ಅಪೂರ್ವ ಜೀವವೈವಿಧ್ಯದ ತಾಣ. ಈ ಉಪ್ಪುನೀರು ವಿಶಿಷ್ಟವಾದ ಮ್ಯಾಂಗ್ರೋವ್ ಕಾಡುಗಳಿಗೆ ನೆಲೆ. ಅಲ್ಲಿನ ಸಸ್ಯ ಸಂಕುಲದ ಬೇರುಗಳು, ಕೆಸರು ನೀರು ವಿವಿಧ ಪ್ರಭೇದದ ಸೀಗಡಿ, ಏಡಿ, ಚಿಪ್ಪುಮೀನು, ಹಾವುಮೀನುಗಳಿಗೆ ಆವಾಸ. ಬಿಳಿಹೊಟ್ಟೆಯ ಮೀನುಗಿಡುಗ, ಕಪ್ಪುತಲೆಯ ಮಿಂಚುಳ್ಳಿ, ಕಡಲಗೊರವ, ಕಡಲಕ್ಕಿಗಳು ಈ ಕೆಸರು ನೀರಿನಲ್ಲಿಯೇ ಆಹಾರ ಹೆಕ್ಕುತ್ತವೆ; ಮ್ಯಾಂಗ್ರೋವ್ ನೆಲೆಯಲ್ಲಿ ಸಂತಾನೋತ್ಪತ್ತಿ ಮಾಡುತ್ತವೆ.

ನದಿಗಳ ಜೋಡಣೆಯಿಂದ ಮೀನುಗಳಿಗೇನು ತೊಂದರೆ ಎಂಬ ಪ್ರಶ್ನೆ ಸಹಜ. ಸ್ಥಳೀಯ ಮೀನುಗಳ ಜೀವಪರಿಸರ ಅಷ್ಟೊಂದು ಸರಳವಾಗಿಲ್ಲ. ಇದನ್ನು ಅರಿಯಬೇಕಾದರೆ ಹಾವುಮೀನುಗಳ ಜೀವನಚಕ್ರವನ್ನು ಅರ್ಥೈಸಿಕೊಳ್ಳಬೇಕು. ನದಿಗಳಲ್ಲಿ ವಾಸಿಸುವ ಹಾವುಮೀನುಗಳು ಸಂತಾನೋತ್ಪತ್ತಿಗೆ ಸಮುದ್ರತೀರಕ್ಕೆ ಹೋಗುತ್ತವೆ. ಅಲ್ಲಿ ಮೊಟ್ಟೆಯಿಟ್ಟು ನದಿಗಳಿಗೆ ಹಿಂದಿರುಗುವಾಗ ಜಲಪಾತಗಳನ್ನು ಹಾರುತ್ತವೆ, ಬಂಡೆಗಳ ಮೇಲೆ ತೆವಳುತ್ತವೆ, ಒದ್ದೆಯಾದ ಹುಲ್ಲುಗಾವಲುಗಳನ್ನು ದಾಟುತ್ತವೆ; ತೇವಗೊಂಡಿರುವ ಮರಳನ್ನೂ ಅಗೆಯುತ್ತವೆ. ಅವುಗಳ ಹುಟ್ಟು-ಸಾವು ನಡುವಿನ ಅಂತರದಲ್ಲಿರುವ ಈ ವಲಸೆ ಸಂಕೀರ್ಣವಾದುದು. ಜಲಾಶಯ ನಿರ್ಮಾಣ, ನದಿಗಳ ಜೋಡಣೆಯಿಂದ ಲಕ್ಷಾಂತರ ವರ್ಷಗಳಿಂದ ವಿಕಸಿತಗೊಂಡಿರುವ ಅವುಗಳ ಈ ಪಯಣ ಅಸ್ತವ್ಯಸ್ತಗೊಳ್ಳುತ್ತದೆ.

ನದಿಗಳು ಸಮುದ್ರ ಸೇರುವ ಉದ್ದಕ್ಕೂ ಮೀನುಗಾರಿಕೆ ನಡೆಯುತ್ತದೆ. ಮೀನು ಸಂತತಿ ನಾಶವಾದರೆ ಈ ವೃತ್ತಿ ನಂಬಿದ ಲಕ್ಷಾಂತರ ಬೆಸ್ತರ ಕುಟುಂಬಗಳ ಬದುಕು ಹಳಿ ತಪ್ಪುತ್ತದೆ. ಸರ್ಕಾರ ಅವರಿಗೆ ಪರ್ಯಾಯ ಉದ್ಯೋಗ ಕಲ್ಪಿಸಲು ಸಾಧ್ಯವೇ? ಆಳುವ ವರ್ಗದ ಚಿಂತನೆಗಳಲ್ಲಿ ಪ್ರಾಮಾಣಿಕತೆ ಮತ್ತು ಬದ್ಧತೆ ಇಲ್ಲದಿದ್ದರೆ ನದಿ ಜೋಡಣೆಯಂತಹ ಅವೈಜ್ಞಾನಿಕ ಯೋಜನೆಗಳು ಜೀವ ತಳೆಯುತ್ತವೆ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಲಾಭ-ನಷ್ಟವನ್ನು ಬದಿಗಿರಿಸಿ ಭವಿಷ್ಯದ ದಿನಗಳ ಬಗ್ಗೆ ಚಿಂತಿಸುವುದು ಯಾವಾಗ?

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಜಯ, ವಿದಾಯ, ವಿಪತ್ತು, ವಿಷಾದ...

• ಗಿರೀಶ ದೊಡ್ಡಮನಿ

ಭಾರತದ ಕ್ರಿಕೆಟ್ ರಂಗವು ಈ ವರ್ಷ ವಿಜಯ, ವಿದಾಯ, ವಿಪತ್ತು ಮತ್ತು ವಿಷಾದಗಳನ್ನು ಏಕಕಾಲಕ್ಕೇ ಅನುಭವಿಸಿದೆ. ಅತ್ಯಮೋಘ ವಿಜಯಗಳ ಸಂಭ್ರಮದ ಕ್ಷಣಗಳು ಅಭಿಮಾನಿಗಳನ್ನು ರಂಜಿಸಿದವು. ಅದರ ಬೆನ್ನ ಹಿಂದೆಯೇ ದಿಗ್ಗಜರ ವಿದಾಯದ ಬೇಸರ. ಅಭಿಮಾನಿಗಳನ್ನೇ ಬಲಿ ತೆಗೆದುಕೊಂಡ ವಿಪತ್ತು ಕೂಡ ಈ ವರ್ಷ ಮೈನಡುಗಿಸಿತ್ತು.

ಜನವರಿಯಲ್ಲಿ ತವರಿನಲ್ಲಿ ಇಂಗ್ಲೆಂಡ್ ವಿರುದ್ಧ ಟಿ20 ಮತ್ತು ಏಕದಿನ ಕ್ರಿಕೆಟ್ ಸರಣಿಗಳನ್ನು ಗೆಲ್ಲುವುದರೊಂದಿಗೆ ಭಾರತ ತಂಡ ಶುಭಾರಂಭ ಮಾಡಿತ್ತು. ಫೆಬ್ರುವರಿಯಲ್ಲಿ ರೋಹಿತ್ ಶರ್ಮಾ ನಾಯಕತ್ವದ ತಂಡವು ಚಾಂಪಿಯನ್ಸ್ ಟ್ರೋಫಿ ಜಯಿಸಿತು. 2013ರ ನಂತರ ಭಾರತ ತಂಡ ಈ ಸಾಧನೆ ಮಾಡಿತು. ಪಾಕಿಸ್ತಾನ ಈ ಟೂರ್ನಿಯ ಆತಿಥ್ಯ ವಹಿಸಿತ್ತು. ಆದರೆ ಭಾರತವು ಪಾಕ್ ನೆಲದಲ್ಲಿ ಪಂದ್ಯಗಳನ್ನು ಆಡಲು ನಿರಾಕರಿಸಿದ್ದರಿಂದ ಯುಎಇನಲ್ಲಿ ಪಂದ್ಯಗಳನ್ನು ಆಡಿಸಲಾಯಿತು. ಟೂರ್ನಿಯ ಲೀಗ್ ಹಂತದಲ್ಲಿ ಪಾಕ್ ತಂಡವನ್ನು ಸೋಲಿಸಿದ ಭಾರತ ಫೈನಲ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಗೆದ್ದಿತು.

ಮಾರ್ಚ್‌ನಲ್ಲಿ ಈ ಕಾಲಘಟ್ಟದ ಕ್ರಿಕೆಟ್ ದಂತಕತೆಯೇ ಆಗಿರುವ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಇಬ್ಬರೂ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. ಇಬ್ಬರೂ ಆಟಗಾರರೊಂದಿಗೆ ಕೋಚ್ ಗೌತಮ್ ಗಂಭೀರ್ ಭಿನ್ನಾಭಿಪ್ರಾಯ ಹೊಂದಿದ್ದ ಕಾರಣಕ್ಕೆ ಅವರು ನಿವೃತ್ತಿಯಾಗಬೇಕಾಯಿತು ಎಂಬ ಮಾತುಗಳು ಕೇಳಿಬಂದವು. 2024ರಲ್ಲಿ ಟಿ20 ಕ್ರಿಕೆಟ್‌ಗೆ ಇಬ್ಬರೂ ವಿದಾಯ ಹೇಳಿದ್ದು, ಕೇವಲ ಏಕದಿನ ಕ್ರಿಕೆಟ್‌ಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿದ್ದಾರೆ. ಇದಾದ ಮೇಲೆ ಅವರಿಬ್ಬರೂ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾದಲ್ಲಿ ನಡೆದ ಏಕದಿನ ಸರಣಿಯಲ್ಲಿ ಆಡಿದರು. ನಂತರ ದಕ್ಷಿಣ ಆಫ್ರಿಕಾ ಎದುರು ಸರಣಿಯಲ್ಲಿಯೂ ಮಿಂಚಿದರು.



ಚಾಂಪಿಯನ್ಸ್ ಟ್ರೋಫಿಯೊಂದಿಗೆ ಭಾರತ ತಂಡ

ಸಂಭ್ರಮ–ದುರಂತ

ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ 18 ವರ್ಷಗಳ ನಂತರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮೊದಲ ಬಾರಿ ಚಾಂಪಿಯನ್ ಆಯಿತು. ಅಪಾರ ಸಂಖ್ಯೆಯ ಅಭಿಮಾನಿಗಳ ಕನಸು ಕೈಗೂಡಿತು. ರಜತ್ ಪಾಟೀದಾರ್ ನಾಯಕತ್ವ ವಹಿಸಿಕೊಂಡ ಮೊದಲ ಟೂರ್ನಿಯಲ್ಲಿಯೇ ತಂಡವು ಸಾಧನೆ ಮಾಡಿತು. ಆದರೆ ಜೂನ್ 4ರಂದು ಆರ್‌ಸಿಬಿ ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದಲ್ಲಿ 11 ಅಭಿಮಾನಿಗಳು ದುರ್ಮರಣಕ್ಕೀಡಾದರು.

ಯುವ ಆಟಗಾರ ಶುಭಮನ್ ಗಿಲ್ ಅವರಿಗೆ ಟೆಸ್ಟ್ ಮತ್ತು ಏಕದಿನ ತಂಡಗಳ ನಾಯಕತ್ವ ನೀಡಲಾಯಿತು. ಇಂಗ್ಲೆಂಡ್ ಎದುರಿನ ಟೆಸ್ಟ್ ಸರಣಿಯಲ್ಲಿ ಭಾರತವು ಸಮಬಲ ಸಾಧಿಸಿತು. ಆದರೆ, ತವರಿಗೆ ಮರಳಿದ ನಂತರ ವೆಸ್ಟ್ ಇಂಡೀಸ್ ಎದುರಿನ ಸರಣಿ ಗೆದ್ದ ಭಾರತ ದಕ್ಷಿಣ ಆಫ್ರಿಕಾ ಎದುರು ಮುಗ್ಗರಿಸಿತು. ಇದೇ ವರ್ಷ ವಿಶ್ವ ಟೆಸ್ಟ್ ಚಾಂಪಿಯನ್ ಆಗಿರುವ ದಕ್ಷಿಣ ಆಫ್ರಿಕಾ, ಭಾರತದಲ್ಲಿ ಎರಡು ದಶಕಗಳ ನಂತರ ಟೆಸ್ಟ್ ಸರಣಿ ಜಯಿಸಿತು.

ಏಷ್ಯಾ ಕಪ್ ವಿವಾದ

ಪಹಲ್ಗಾಮ್ ಭಯೋತ್ಪಾದನಾ ದಾಳಿಯನ್ನು ಖಂಡಿಸಿದ ಭಾರತ ಕ್ರಿಕೆಟ್ ತಂಡವು ಪಾಕಿಸ್ತಾನದಲ್ಲಿ ಏಷ್ಯಾ ಕಪ್ ಆಡಲು ನಿರಾಕರಿಸಿತು. ಅದರಿಂದಾಗಿ ದುಬೈನಲ್ಲಿ ಪಂದ್ಯಗಳನ್ನು ಆಯೋಜಿಸಲಾಯಿತು. ಈ ಟೂರ್ನಿಯಲ್ಲಿ ಭಾರತ ತಂಡವು ಪಾಕಿಸ್ತಾನ ಎದುರಿನ ಪಂದ್ಯಗಳನ್ನು ಬಹಿಷ್ಕರಿಸಬೇಕು ಎಂಬ ಒತ್ತಾಯಗಳು ಕೇಳಿಬಂದವು. ಆದರೆ ಸೂರ್ಯಕುಮಾರ್ ಯಾದವ್ ನಾಯಕತ್ವದ ತಂಡವು ಆಡಿತು. ಫೈನಲ್ ಸೇರಿದಂತೆ ಮೂರು ಪಂದ್ಯಗಳಲ್ಲಿ ಪಾಕ್ ವಿರುದ್ಧ ಗೆದ್ದಿತು. ಈ ಪಂದ್ಯಗಳಲ್ಲಿ ಪಾಕ್ ಆಟಗಾರರಿಗೆ ಹಸ್ತಲಾಘವ ಮಾಡಲು ಭಾರತದ ಆಟಗಾರರು ತಿರಸ್ಕರಿಸಿದರು. ಫೈನಲ್‌ನಲ್ಲಿ ಗೆದ್ದ ಭಾರತವು ಏಷ್ಯಾ ಕ್ರಿಕೆಟ್ ಕೌನ್ಸಿಲ್ ಅಧ್ಯಕ್ಷರೂ ಆಗಿರುವ ಪಾಕಿಸ್ತಾನದ ಸಚಿವ ಮೊಹ್ಸಿನ್ ನಕ್ವಿಯಿಂದ ಟ್ರೋಫಿ ಸ್ವೀಕರಿಸಲು ಭಾರತ ತಂಡ ನಿರಾಕರಿಸಿತು. ಟ್ರೋಫಿಯನ್ನು ಎಸಿಸಿ ಕಚೇರಿಯಲ್ಲಿಟ್ಟಿದ್ದು ಇದುವರೆಗೂ ಭಾರತಕ್ಕೆ ಹಸ್ತಾಂತರಿಸಿಲ್ಲ.

ದೇಶಿ ಕ್ರಿಕೆಟ್‌ನಲ್ಲಿ 2024-25ರ ಸಾಲಿನ ರಣಜಿ ಟ್ರೋಫಿಯನ್ನು ವಿದರ್ಭ ಗೆದ್ದುಕೊಂಡಿತು. ಸೈಯದ್ ಮುಷ್ತಾಕ್ ಟಿ20 ಟ್ರೋಫಿಯನ್ನು ಇಶಾನ್ ಕಿಶನ್ ನಾಯಕತ್ವದ ಜಾರ್ಖಂಡ್ ಜಯಿಸಿತು.



ಮಹಿಳೆಯರ ಏಕದಿನ ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಮತ್ತು ಉಪನಾಯಕಿ ಸ್ಮೃತಿ ಮಂದಾನ

ಮಹಿಳಾ ಸಾಧನೆ ಉತ್ತುಂಗಕ್ಕೆ

- ಭಾರತ ಮಹಿಳಾ ಕ್ರಿಕೆಟ್ ತಂಡವು ಇದೇ ಮೊದಲ ಸಲ ಏಕದಿನ ವಿಶ್ವಕಪ್ ಜಯಿಸಿತು. ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ತಂಡವು ನವೀ ಮುಂಬೈನಲ್ಲಿ ನಡೆದ ಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಜಯಗಳಿಸಿತು
- ಬೆಂಗಳೂರಿನ ನಿಕಿ ಪ್ರಸಾದ್ ನಾಯಕಿಯಾಗಿದ್ದ 19 ವರ್ಷದೊಳಗಿನವರ ಮಹಿಳಾ ಕ್ರಿಕೆಟ್ ತಂಡವೂ ಫೆಬ್ರುವರಿಯಲ್ಲಿ ಮಲೇಷ್ಯಾದಲ್ಲಿ ಟಿ20 ವಿಶ್ವಕಪ್ ಜಯಿಸಿತು
- ದೀಪಿಕಾ ಟಿ.ಸಿ ನಾಯಕತ್ವದ ಭಾರತ ಅಂಧ ಮಹಿಳಾ ತಂಡವು ಅಂಧರ ಕ್ರಿಕೆಟ್ ವಿಶ್ವಕಪ್ ಜಯಿಸಿತು

ಸುಪ್ರೀಂ ಕೋರ್ಟ್: ದೇಶದ ಗಮನ ಸೆಳೆದ ತೀರ್ಪುಗಳು

• ಬಿ.ವಿ.ಶ್ರೀನಾಥ್



2025ರಲ್ಲಿ ಸುಪ್ರೀಂ ಕೋರ್ಟ್ ಸಿವಿಲ್, ಸೇವಾ ವಲಯ ಮತ್ತು ಆಡಳಿತಕ್ಕೆ ಸಂಬಂಧಿಸಿದಂತೆ ಹಲವು ಪ್ರಮುಖ ತೀರ್ಪುಗಳನ್ನು ನೀಡಿದೆ. ರಾಜ್ಯಗಳ ಮಸೂದೆಗಳನ್ನು ರಾಜ್ಯಪಾಲರು ಅಂಗೀಕರಿಸುವುದು, ವಕ್ಫ್ ಕಾಯ್ದೆ ತಿದ್ದುಪಡಿ, ಬೀದಿ ನಾಯಿಗಳಿಗೆ ಸಂಬಂಧಿಸಿದ ಆದೇಶಗಳು ಈ ಪೈಕಿ ಸೇರಿವೆ.

ರಾಜ್ಯಗಳ ವಿಧಾನಸಭೆಗಳು ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕುವುದಕ್ಕೆ ರಾಜ್ಯಪಾಲರು ಹಾಗೂ ರಾಷ್ಟ್ರಪತಿ ಅವರಿಗೆ ಕಾಲಮಿತಿ ನಿಗದಿ ಮಾಡುವಂತಿಲ್ಲ ಎಂದು ತಮಿಳುನಾಡು ಸರ್ಕಾರ ಮತ್ತು ತಮಿಳುನಾಡು ರಾಜ್ಯಪಾಲ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2025ರ ನ.20ರಂದು ಮಹತ್ವದ ತೀರ್ಪು ನೀಡಿದೆ. ಆದರೆ, ಸಂವಿಧಾನದ 200ನೇ ವಿಧಿಯಡಿ ನೀಡಲಾಗಿರುವ ಅಧಿಕಾರ ಮೀರಿ ರಾಜ್ಯಪಾಲರು ಮಸೂದೆಗಳಿಗೆ ಅಂಕಿತ ಹಾಕದೆಯೂ ಇರುವಂತಿಲ್ಲ ಎಂದು ಆಗಿನ ಸಿಜೆಐ ಬಿ.ಆರ್. ಗವಾಯಿ ನೇತೃತ್ವದ ಐವರು ಸದಸ್ಯರ ಪೀಠವು ಸರ್ವಾನುಮತದ ತೀರ್ಪು ನೀಡಿದೆ.

ಮತ್ತೊಂದು ಮುಖ್ಯ ಆದೇಶ ವಕ್ಫ್ ಕಾಯ್ದೆಗೆ ಸಂಬಂಧಿಸಿದ್ದು. ಇಸ್ಲಾಂ ಧರ್ಮವನ್ನು ಕನಿಷ್ಠ ಐದು ವರ್ಷ ಅನುಸರಿಸಿದ ವ್ಯಕ್ತಿ ಮಾತ್ರ ಆಸ್ತಿಯನ್ನು ವಕ್ಫ್‌ಗೆ ದಾನ ನೀಡಬಹುದು ಎಂಬ ಷರತ್ತು ಸೇರಿದಂತೆ ವಕ್ಫ್ (ತಿದ್ದುಪಡಿ) ಕಾಯ್ದೆ–2025ರ ಕೆಲವು ಪ್ರಮುಖ ಅಂಶಗಳಿಗೆ ಸುಪ್ರೀಂ ಕೋರ್ಟ್ (ಸೆ. 15) ತಡೆ ನೀಡಿ ಮಧ್ಯಂತರ ಆದೇಶ ಪ್ರಕಟಿಸಿತ್ತು. ಆದರೆ, ಇಡೀ ಕಾಯ್ದೆಗೆ ತಡೆಯಾಜ್ಞೆ ನೀಡಲು ನಿರಾಕರಿಸಿತು.

ಶಾಸಕರ ಉಚ್ಚಾಟನೆಗೆ ಸಂಬಂಧಿಸಿದ ತೀರ್ಪೊಂದು ಈ ವರ್ಷ ಹೊರಬಿದ್ದಿದೆ. ಬಿಹಾರ ವಿಧಾನ ಪರಿಷತ್‌ನಲ್ಲಿ ಆರ್‌ಜೆಡಿ ಸದಸ್ಯ ಸುನಿಲ್‌ಕುಮಾರ್ ಸಿಂಗ್ ಅವರು ಮುಖ್ಯಮಂತ್ರಿ ನಿತೀಶ್ ಕುಮಾರ್ ವಿರುದ್ಧ ಘೋಷಣೆ ಕೂಗಿದ್ದ ನಡವಳಿಕೆಯನ್ನು ‘ಒಪ್ಪಲಾಗದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ (ಫೆಬ್ರುವರಿ 25). ಆದರೆ ಅಶಿಸ್ತಿನ ಕಾರಣ ನೀಡಿ ಅವರನ್ನು ಸದನದಿಂದ ಉಚ್ಚಾಟಿಸಿದ್ದ ಕ್ರಮವನ್ನು ‘ಕಠಿಣ ಮತ್ತು ವಿಪರೀತ’ ಎಂದು ಹೇಳಿ, ಉಚ್ಚಾಟನೆಯನ್ನು ರದ್ದುಗೊಳಿಸಿತ್ತು.

ಅಖಿಲ ಭಾರತೀಯ ನ್ಯಾಯಾಧೀಶರ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಮಹತ್ವದ ತೀರ್ಪು ಪ್ರಕಟಿಸಿತು. ‘ಕಾನೂನು ಪದವೀಧರರು ನ್ಯಾಯಾಧೀಶರಾಗಬೇಕು ಎಂದಾದರೆ, ಕಡ್ಡಾಯವಾಗಿ ಕನಿಷ್ಠ ಮೂರು ವರ್ಷ ವಕೀಲರಾಗಿ ಕೆಲಸ ಮಾಡಿರಬೇಕು’ ಎಂದು ಸುಪ್ರೀಂ ಕೋರ್ಟ್ ಮೇ 20ರಂದು ತೀರ್ಪು ನೀಡಿದೆ.

ಬೀದಿ ನಾಯಿ ನಿಯಂತ್ರಣ

ಬೀದಿ ನಾಯಿಗಳ ನಿಯಂತ್ರಣಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ನಾಲ್ಕು ತಿಂಗಳ ಅವಧಿಯಲ್ಲಿ ಮೂರು ಬಗೆಯ ಆದೇಶಗಳನ್ನು ನೀಡಿದೆ. ಮೊದಲು, ಬೀದಿ ನಾಯಿಗಳನ್ನು ಸಾರ್ವಜನಿಕ ಸ್ಥಳಗಳಿಂದ ತೊಲಗಿಸಿ, ಆಶ್ರಯ ಕೇಂದ್ರಗಳಿಗೆ ಸಾಗಿಸಬೇಕು ಎಂದು ಆದೇಶಿಸಿತು (ಆಗಸ್ಟ್ 11). ನಂತರ, ಶಸ್ತ್ರಚಿಕಿತ್ಸೆ, ಲಸಿಕೆ ನೀಡಿ ಸ್ವಸ್ಥಾನದಲ್ಲೇ ತಂದುಬಿಡಬೇಕು. ಆಕ್ರಮಣಕಾರಿಯಂತೆ ತೋರುವ ನಾಯಿಗಳನ್ನು ಮಾತ್ರ ಆಶ್ರಯ ತಾಣಗಳಲ್ಲಿ ಇಡಬೇಕು ಎಂದಿತು (ಆಗಸ್ಟ್ 22). ಮತ್ತೊಮ್ಮೆ ಆದೇಶ ಬದಲಿಸಿದ ಸುಪ್ರೀಂ ಕೋರ್ಟ್, ಶಾಲೆ, ಕಾಲೇಜು, ಆಸ್ಪತ್ರೆ, ಮೈದಾನ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣಗಳಿಂದ ಬೀದಿ ನಾಯಿಗಳನ್ನು ತೊಲಗಿಸಬೇಕು ಎಂದು ನವೆಂಬರ್ 11ರಂದು ಹೇಳಿತು.

ಇತರ ಮುಖ್ಯ ತೀರ್ಪುಗಳು


- **ದೆಹಲಿ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಲೋಧಿ ಪ್ರಾಪರ್ಟಿ ಕಂ.ಲಿ. ಪ್ರಕರಣ;** ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ನಿರ್ದೇಶನಗಳನ್ನು ನೀಡುವ ಅಧಿಕಾರ ಹೊಂದಿರುವಂತೆಯೇ ಹಾನಿಗೆ ಪರಿಹಾರವನ್ನು ವಿಧಿಸುವ ಅಧಿಕಾರವನ್ನೂ ಹೊಂದಿವೆ (2025 ಆ.4)
- **ಊರ್ಮಿಳಾ ದೀಕ್ಷಿತ್ ಮತ್ತು ಸುನಿಲ್ ಶರಣ್ ದೀಕ್ಷಿತ್ ಪ್ರಕರಣ:** ಹಿರಿಯ ನಾಗರಿಕರಿಂದ ಆಸ್ತಿ ಪಡೆದ ಮಕ್ಕಳು ಅವರ ಆರೈಕೆ ಮಾಡದಿದ್ದರೆ, ಆಸ್ತಿ ವರ್ಗಾವಣೆ ರದ್ದುಗೊಳಿಸಲು ಹಿರಿಯ ನಾಗರಿಕರ ನಿರ್ವಹಣೆ ಮತ್ತು ಕಲ್ಯಾಣ ಕಾಯ್ದೆಯು (2007) ನ್ಯಾಯಾಲಯಗಳಿಗೆ ಅಧಿಕಾರ ನೀಡುತ್ತದೆ (2025 ಜ.2)

ಬದಲಾದ ಮುಖ್ಯ ನ್ಯಾಯಮೂರ್ತಿಗಳು

ಸುಪ್ರೀಂ ಕೋರ್ಟ್ ಈ ವರ್ಷ ಇಬ್ಬರು ಮುಖ್ಯ ನ್ಯಾಯಮೂರ್ತಿಗಳನ್ನು (ಸಿಜೆಐ) ಕಂಡಿತು. ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರು ಸುಪ್ರೀಂ ಕೋರ್ಟ್‌ನ 52ನೇ ಸಿಜೆಐ ಆಗಿ ಮೇ 14ರಂದು ಪ್ರಮಾಣ ವಚನ ಸ್ವೀಕರಿಸಿದ್ದರು. ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರ ವಯೋನಿವೃತ್ತಿಯಿಂದಾಗಿ ತೆರವಾಗಿದ್ದ ಸ್ಥಾನವನ್ನು ನ್ಯಾ.ಗವಾಯಿ ಅಲಂಕರಿಸಿದ್ದರು. ಅವರು ದೇಶದ ಎರಡನೇ ದಲಿತ ಹಾಗೂ ಮೊದಲ ಬೌದ್ಧ ಸಿಜೆಐ ಆಗಿದ್ದರು. ಅವರು ಇದೇ ನ.23ರಂದು ನಿವೃತ್ತಿ ಹೊಂದಿದರು.

ಈ ನಡುವೆ, ಅಕ್ಟೋಬರ್ 6ರಂದು ರಾಕೇಶ್ ಕಿಶೋರ್ ಎನ್ನುವ ವಕೀಲ ಸಿಜೆಐ ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ್ದ ಘಟನೆ ನಡೆದಿತ್ತು. ವಿಷ್ಣುವಿನ ಮೂರ್ತಿ ಮರುಸ್ಥಾಪಿಸುವ ಕುರಿತ ಅರ್ಜಿಯ ವಿಚಾರಣೆ ವೇಳೆ ಸಿಜೆಐ ಗವಾಯಿ ಅವರು ಸನಾತನ ಧರ್ಮಕ್ಕೆ ಅವಮಾನವಾಗುವಂತಹ ಮಾತುಗಳನ್ನು ಆಡಿದ್ದರು ಎಂದು ಅಸಮಾಧಾನದಿಂದ ಹಾಗೆ ಮಾಡಿದ್ದಾಗಿ ರಾಕೇಶ್ ಕಿಶೋರ್ ಹೇಳಿದ್ದರು.

ಗವಾಯಿ ನಂತರ ಸೂರ್ಯಕಾಂತ್ ಅವರು ಸಿಜೆಐ ಆದರು.



ಬಿ.ಆರ್.ಗವಾಯಿ

ನ್ಯಾ.ಯಶವಂತ ವರ್ಮಾ ಪ್ರಕರಣ



ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಯಾಗಿದ್ದ ಯಶವಂತ ವರ್ಮಾ ಅವರ ಮನೆಯಲ್ಲಿ ಆಕಸ್ಮಿಕ ಬೆಂಕಿ ಅವಘಡ ನಡೆದು (ಮಾರ್ಚ್ 14), ಬೆಂಕಿ ನಂದಿಸುವ ವೇಳೆ ಅಗ್ನಿಶಾಮಕ ಸಿಬ್ಬಂದಿಗೆ ಕಂತೆ ಕಂತೆ ನೋಟುಗಳು ಸಿಕ್ಕಿದ್ದವು. ಅವರನ್ನು ಅಲಹಾಬಾದ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಯಿತು. ಈ ಬಗ್ಗೆ ಮೂವರು ನ್ಯಾಯಮೂರ್ತಿಗಳ ಸಮಿತಿಯು ವಿಚಾರಣೆ ನಡೆಸಿ, ನ್ಯಾ ವರ್ಮಾ ಅವರು ತಪ್ಪಿತಸ್ಥ ಎಂದು ವರದಿಯನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದೆ. ಜುಲೈ 21ರಂದು ಲೋಕಸಭೆಯಲ್ಲಿ 100ಕ್ಕೂ ಹೆಚ್ಚು ಸಂಸದರು ನ್ಯಾ.ವರ್ಮಾ ಅವರ ವಿರುದ್ಧ ವಾಗ್ದಂಡನೆ ಗೊತ್ತುವಳಿಗೆ ಸಹಿ ಹಾಕಿದ್ದು, ಪ್ರಕ್ರಿಯೆ ನಡೆಯುತ್ತಿದೆ. ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ನ್ಯಾ. ವರ್ಮಾ ಅವರ ವಿರುದ್ಧದ ಆರೋಪಗಳ ವಿಚಾರಣೆಗೆ ಮೂವರು ಸದಸ್ಯರ ಸಮಿತಿ ನೇಮಿಸಿದ್ದಾರೆ.

ಫುಟ್‌ಬಾಲ್: ಐಎಸ್‌ಎಲ್‌ಗೆ ಗ್ರಹಣ

• ಪ್ರದೀಶ್ ಎಚ್. ಮರೋಡಿ

ಭಾರತದ ಫುಟ್‌ಬಾಲ್ ಕ್ಷೇತ್ರಕ್ಕೆ ಈ ವರ್ಷ ಅತ್ಯಂತ ನಿರಾಶಾದಾಯಕ. ಪುರುಷರ ತಂಡವು ಸತತ ಸೋಲುಗಳ ಬಳಿಕ ಫಿಫಾ ರ‍್ಯಾಂಕಿಂಗ್‌ನಲ್ಲಿ 142ನೇ ಸ್ಥಾನಕ್ಕೆ ಕುಸಿತ ಕಂಡಿದ್ದು ಒಂದೆಡೆ ಆದರೆ, ಮತ್ತೊಂದೆಡೆ 2025–26ರ ಸಾಲಿನ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಮೇಲೆ ಆವರಿಸಿದ್ದ ಕರಿನೆರಳು ಸರಿಯಲೇ ಇಲ್ಲ.

- ಈ ನಿರಾಸೆಗಳ ಮಧ್ಯೆ ಪುರುಷರ ತಂಡ ಸಿಎಎಫ್‌ಎ ನೇಷನ್ಸ್ ಕಪ್ ಟೂರ್ನಿಯಲ್ಲಿ ಕಂಚಿನ ಪದಕ ಗೆದ್ದಿತು. 19 ವರ್ಷದೊಳಗಿನ ಪುರುಷರ ತಂಡವು ಸ್ಯಾಫ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಸೀನಿಯರ್ ಮಹಿಳೆಯರ ತಂಡವು 2026ರ ಎಫ್‌ಎಸಿ ಏಷ್ಯನ್ ಕಪ್ ಟೂರ್ನಿಗೆ ಮೊದಲ ಬಾರಿ ನೇರ ಅರ್ಹತೆ ಪಡೆಯಿತು
- 2024–25ನೇ ಸಾಲಿನ ಐಎಸ್‌ಎಲ್ ಕಿರೀಟವನ್ನು ಏಪ್ರಿಲ್‌ನಲ್ಲಿ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವು ಗೆದ್ದುಕೊಂಡಿತು. ಫೈನಲ್‌ನಲ್ಲಿ ಬೆಂಗಳೂರು ಎಫ್‌ಸಿ ತಂಡವನ್ನು 2–1ರಿಂದ ಮಣಿಸಿತು

ಹಾಕಿ

- ಹರ್ಮನ್‌ಪ್ರೀತ್ ಸಿಂಗ್ ನಾಯಕತ್ವದ ಭಾರತದ ಪುರುಷರ ತಂಡವು ಏಷ್ಯಾ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದು, 2026ರ ವಿಶ್ವಕಪ್ ಟೂರ್ನಿಗೆ ಅರ್ಹತೆ ಪಡೆಯಿತು
- ಭಾರತದ ಆತಿಥ್ಯದಲ್ಲಿ ನಡೆದ ಎಫ್‌ಐಎಚ್ ಜೂನಿಯರ್ ಪುರುಷರ ವಿಶ್ವಕಪ್‌ನಲ್ಲಿ ಭಾರತ ತಂಡವು ಕಂಚಿನ ಪದಕ ಗೆದ್ದುಕೊಂಡಿತು
- ಭಾರತ ತಂಡದ ಆಟಗಾರ ಲಲಿತ್ ಕುಮಾರ್ ಉಪಾಧ್ಯಾಯ (ಜೂನ್), ಆಟಗಾರ್ತಿ ವಂದನಾ ಕಟಾರಿಯಾ (ಏಪ್ರಿಲ್) ಅವರು ಅಂತರರಾಷ್ಟ್ರೀಯ ಹಾಕಿಗೆ ನಿವೃತ್ತಿ ಘೋಷಿಸಿದರು

ಟೆನಿಸ್

- ಟೆನಿಸ್ ದಿಗ್ಗಜ, ಕನ್ನಡಿಗ ರೋಹನ್ ಬೋಪಣ್ಣ ನವೆಂಬರ್‌ನಲ್ಲಿ ತಮ್ಮ 22 ವರ್ಷಗಳ ವೃತ್ತಿಪರ ಟೆನಿಸ್ ವೃತ್ತಿಜೀವನಕ್ಕೆ ವಿದಾಯ ಹೇಳಿದರು



ರೋಹನ್ ಬೋಪಣ್ಣ

- ಭಾರತದ ಟೆನಿಸ್ ದಿಗ್ಗಜರಾದ ವಿಜಯ್ ಅಮೃತರಾಜ್ ಮತ್ತು ಲಿಯಾಂಡರ್ ಪೇಸ್ ಅವರಿಗೆ ಅಂತರರಾಷ್ಟ್ರೀಯ ಟೆನಿಸ್ ಹಾಲ್ ಆಫ್ ಫೇಮ್ ಗೌರವ ದೊರೆಯಿತು
- ಇಟಲಿಯ ಯಾನಿಕ್ ಸಿನ್ನರ್ ಮತ್ತು ಸ್ಪೇನ್ ಕಾರ್ಲೋಸ್ ಅಲ್ಕರಾಜ್ ಅವರು ಪುರುಷರ ಟೆನಿಸ್‌ನ ಪ್ರಮುಖ ಶಕ್ತಿಕೇಂದ್ರಗಳಾಗಿ ಬೆಳೆದರು. ಇವರಿಬ್ಬರು 2025ರಲ್ಲಿ ತಲಾ ಎರಡು ಗ್ರ್ಯಾನ್‌ಸ್ಲಾಮ್‌ಗಳನ್ನು ಗೆದ್ದುಕೊಂಡರು

ಬ್ಯಾಡ್ಮಿಂಟನ್

- ಭಾರತದ ಲಕ್ಷ್ಯ ಸೇನ್ ಅವರು ಆಸ್ಟ್ರೇಲಿಯಾ ಓಪನ್ ಬಿಡಬ್ಲ್ಯುಎಫ್ ಸೂಪರ್ 500 ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದರು
- ಕರ್ನಾಟಕದ ಆಯುಷ್ ಶೆಟ್ಟಿ ಅವರು ಅಮೆರಿಕ ಓಪನ್ ಸೂಪರ್ 300 ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಮುಡಿಗೇರಿಸಿಕೊಂಡರು
- ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ ಡಬಲ್ಸ್‌ನಲ್ಲಿ ಕಂಚು ಗೆದ್ದುಕೊಂಡಿತು

ಕುಸ್ತಿ

- ಕುಸ್ತಿಪಟು ವಿನೇಶ್ ಫೋಗಟ್ ಅವರು ನಿವೃತ್ತಿ ನಿರ್ಧಾರದಿಂದ ಹೊರಬರುವುದಾಗಿ ಘೋಷಿಸಿದರು

ಚೆಸ್: ಗಮನಸೆಳೆದ ದಿವ್ಯಾ ಸಾಧನೆ

• ನಾಗೇಶ ಶೆಣೈ

ಚೆಸ್‌ನಲ್ಲಿ ಭಾರತ ಈ ವರ್ಷ ಮಿಶ್ರಫಲ ಉಂಡಿತು. ಜುಲೈ 28ರಂದು ದಿವ್ಯಾ ದೇಶಮುಖ್ ಅವರು ಮಹಿಳಾ ವಿಶ್ವಕಪ್ ಗೆದ್ದಿರುವುದು ಭಾರತ ಕಂಡ ಪ್ರಮುಖ ಯಶಸ್ಸು. ದಿವ್ಯಾ ಫೈನಲ್‌ನಲ್ಲಿ ಸ್ವದೇಶದ ಕೋನೇರು ಹಂಪಿ ಅವರನ್ನು ಟೈಬ್ರೇಕರಿನಲ್ಲಿ ಮಣಿಸಿದರು.

- ದಿವ್ಯಾ ದೇಶದ 88ನೇ ಗ್ರ್ಯಾಂಡ್‌ಮಾಸ್ಟರ್ ಆದರು. ದಿವ್ಯಾ, ಹಂಪಿ ಜೊತೆಗೆ ವೈಶಾಲಿ ರಮೇಶಬಾಬು ಅವರು ಸೈಪ್ರಸ್‌ನಲ್ಲಿ (2026 ಮಾರ್ಚ್–ಏಪ್ರಿಲ್) ನಡೆಯಲಿರುವ ಮಹಿಳಾ ಕ್ಯಾಂಡಿಡೇಟ್ಸ್ ಟೂರ್ನಿಗೆ ಅರ್ಹತೆ ಪಡೆದರು. ಸಮರಖಂಡದಲ್ಲಿ ನಡೆದ ಮಹಿಳಾ ಫಿಡೆ ಗ್ರ್ಯಾಂಡ್ ಸ್ವಿಸ್ ಟೂರ್ನಿಯನ್ನು ಸತತ ಎರಡನೇ ಬಾರಿ ಗೆದ್ದು ವೈಶಾಲಿ ಅರ್ಹತೆ ಸಂಪಾದಿಸಿದರು
- ಆರ್.ಪ್ರಜ್ಞಾನಂದ ಅವರು ಈ ವರ್ಷ ಫಿಡೆ ಸರ್ಕೀಟ್ ಟೂರ್ನಿಗಳಲ್ಲಿ ಉತ್ತಮ ಸಾಧನೆ ತೋರಿ, ಮುಂದಿನ ವರ್ಷದ ಕ್ಯಾಂಡಿಡೇಟ್ಸ್ (ಓಪನ್ ವಿಭಾಗ) ಟೂರ್ನಿಗೆ ಅರ್ಹತೆ ಪಡೆದರು. ಅವರು 2026ರ ಕ್ಯಾಂಡಿಡೇಟ್ಸ್‌ಗೆ ಅರ್ಹತೆ ಪಡೆದ ಭಾರತದ ಏಕಮಾತ್ರ ಆಟಗಾರ. ಟಾಟಾ ಸ್ಟೀಲ್ ಮಾಸ್ಟರ್ಸ್, ಸೂಪರ್‌ಬೆಟ್, ಉಝ್ ಚೆಸ್ ಕಪ್, ಲಂಡನ್ ಕ್ಲಾಸಿಕ್ ಟೂರ್ನಿಯಲ್ಲಿ ವಿಜೇತರಾದರು. ವಿಶ್ವ ಚಾಂಪಿಯನ್ ಗುಕೇಶ್ ಈ ವರ್ಷ ಗಮನಸೆಳೆಯಲಿಲ್ಲ
- ಪಣಜಿಯಲ್ಲಿ ನವೆಂಬರ್‌ನಲ್ಲಿ ನಡೆದ ಓಪನ್ ವಿಶ್ವಕಪ್ ಟೂರ್ನಿಯಲ್ಲಿ ಭಾರತ ನಿರಾಸೆ ಅನುಭವಿಸಿತು. ಭಾರತದ ಸವಾಲು ಕ್ವಾರ್ಟರ್‌ಫೈನಲ್‌ನಲ್ಲೇ ಅಂತ್ಯಗೊಂಡಿತು
- ಮಧ್ಯಪ್ರದೇಶದ ಸರ್ವಜ್ಞ ಸಿಂಗ್ ಕುಶ್ವಾಹ ಅವರು ಮೂರು ವರ್ಷ, ಏಳು ತಿಂಗಳಿದ್ದಾಗಲೇ ಫಿಡೆ ರೇಟಿಂಗ್ ಪಡೆದರು. ರೇಟಿಂಗ್ ಪಡೆದ ವಿಶ್ವದ ಅತಿ ಕಿರಿಯ ಆಟಗಾರ ಎನಿಸಿದರು
- ದಕ್ಷಿಣ ಕನ್ನಡ ಜಿಲ್ಲೆಯ ಇಶಾ ಶರ್ಮಾ ಈ ವರ್ಷದ ನವೆಂಬರ್‌ನಲ್ಲಿ ಕರ್ನಾಟಕದ ಮೊದಲ ಮಹಿಳಾ ಗ್ರ್ಯಾಂಡ್‌ಮಾಸ್ಟರ್ (WGM) ಎಂಬ ಗೌರವಕ್ಕೆ ಪಾತ್ರರಾದರು



ದಿವ್ಯಾ ದೇಶಮುಖ್

• ಬಾಲರಾಜ್ ಎಸ್.



ನೀರಜ್ ‘ಏಳು–ಬೀಳು’

ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಮೇ 16ರಂದು ನಡೆದ ದೋಹಾ ಡೈಮಂಡ್ ಲೀಗ್‌ನಲ್ಲಿ 90ಮೀ. ಮೈಲಿಗಲ್ಲು (90.23 ಮೀಟರ್) ದಾಟಿದರು. ಆದರೆ, ಸತತ ಎರಡನೇ ಬಾರಿ ವಿಶ್ವ ಚಾಂಪಿಯನ್ ಕಿರೀಟ ಧರಿಸುವ ಅವರ ಕನಸು ಭಗ್ನವಾಯಿತು. ಟೋಕಿಯೊದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎಂಟನೇ ಸ್ಥಾನ ಪಡೆದರು. ಭಾರತದವರೇ ಆದ ಯುವ ಅಥ್ಲೀಟ್ ಸಚಿನ್ ಯಾದವ್ ನಾಲ್ಕನೇ ಸ್ಥಾನ ಪಡೆದು ಸ್ವಲ್ಪದರಲ್ಲೇ ಕಂಚಿನ ಪದಕ ತಪ್ಪಿಸಿಕೊಂಡರು.

ಅನಿಮೇಶ್ ದಾಖಲೆ

ಜಾರ್ಖಂಡ್‌ನ ಅಥ್ಲೀಟ್ ಅನಿಮೇಶ್ ಕುಜೂರ್ ಅವರು 100 ಮೀ. ಓಟದಲ್ಲಿ ದಾಖಲೆ (10.18 ಸೆಕೆಂಡ್) ಬರೆದರು. ಆ ಮೂಲಕ ದೇಶದ ಅಗ್ರಮಾನ್ಯ ಓಟಗಾರನಾಗಿ ಹೊರಹೊಮ್ಮಿದರು. 200 ಮೀ. ಓಟದಲ್ಲಿಯೂ ರಾಷ್ಟ್ರೀಯ ದಾಖಲೆಯನ್ನು (20.40 ಸೆಕೆಂಡ್) ತಮ್ಮದಾಗಿಸಿಕೊಂಡರು.



ಅನಿಮೇಶ್ ಕುಜೂರ್

- **ಮರಳಿದ ಮೀರಾಬಾಯಿ:** ಒಂದು ವರ್ಷದ ನಂತರ ಸ್ಪರ್ಧಾಕಣಕ್ಕೆ ಮರಳಿದ ಮೀರಾಬಾಯಿ ಚಾನು ಅವರು ಅಹಮದಾಬಾದ್‌ನಲ್ಲಿ ಆಗಸ್ಟ್‌ನಲ್ಲಿ ನಡೆದ ಕಾಮನ್‌ವೆಲ್ತ್ ವೇಟ್ ಲಿಫ್ಟಿಂಗ್‌ನಲ್ಲಿ ಚಿನ್ನದ ಪದಕ ಜಯಿಸಿದರು. ಅವರು ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದುಕೊಂಡರು
- **ಕೊಕ್ಕೊದಲ್ಲಿ ಮೇಲುಗೈ:** ಭಾರತ ಪುರುಷರ ಮತ್ತು ಮಹಿಳಾ ತಂಡಗಳು ದೆಹಲಿಯಲ್ಲಿ ನಡೆದ ಚೊಚ್ಚಲ ಕೊಕ್ಕೊ ವಿಶ್ವಕಪ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಪಾರಮ್ಯ ಮೆರೆದವು
- **ಕಬಡ್ಡಿ ವಿಶ್ವಕಪ್ ಉಳಿಸಿಕೊಂಡ ವನಿತೆಯರು:** ಭಾರತ ವನಿತೆಯರ ಕಬಡ್ಡಿ ತಂಡವು ನವೆಂಬರ್‌ನಲ್ಲಿ ತೈವಾನ್ ತಂಡವನ್ನು ಮಣಿಸಿ ಸತತ ಎರಡನೇ ಬಾರಿಗೆ ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿತು. ಭಾರತ ತಂಡದಲ್ಲಿ ಕರ್ನಾಟಕದ ಧನಲಕ್ಷ್ಮಿ ಪೂಜಾರಿ ಇದ್ದರು
- **ನೂತನ ಕ್ರೀಡಾ ನೀತಿ:** ಭಾರತ ಸರ್ಕಾರವು ಬಹುನಿರೀಕ್ಷಿತ ನೂತನ ಕ್ರೀಡಾ ಕಾಯಿದೆ ಜಾರಿಗೆ ಸಿದ್ಧಗೊಂಡಿದೆ. ಇದರಿಂದಾಗಿ ಕ್ರೀಡಾ ಫೆಡರೇಷನ್‌ಗಳ ಕಾರ್ಯನಿರ್ವಹಣೆಯ ವೈಖರಿ ಬದಲಾಗುವ ನಿರೀಕ್ಷೆ ಮೂಡಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೂ ಸೇರಿದಂತೆ ಬಹುತೇಕ ಎಲ್ಲ ಫೆಡರೇಷನ್‌ಗಳು ಈ ಕಾಯಿದೆಗೆ ಒಳಪಡಲಿವೆ

ಶೀತಲ್ ದೇವಿ ಹೆಗ್ಗಳಿಕೆ

ವಿಶ್ವ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಕೈಗಳ ಸಹಾಯವಿಲ್ಲದೇ ಚಿನ್ನ ಗೆದ್ದ ವಿಶ್ವದ ಮೊದಲ ಮಹಿಳಾ ಸ್ಪರ್ಧಿ ಎಂಬ ಹೆಗ್ಗಳಿಕೆಗೆ ಜಮ್ಮುವಿನ ಶೀತಲ್ ದೇವಿ ಪಾತ್ರರಾದರು. ಅವರು ದಕ್ಷಿಣ ಕೊರಿಯಾದ ಗ್ವಾಂಗ್‌ಜುನಲ್ಲಿ ಸೆಪ್ಟೆಂಬರ್‌ನಲ್ಲಿ ನಡೆದ ವಿಶ್ವ ಪ್ಯಾರಾ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಈ ಸಾಧನೆ ಮಾಡಿದರು



ಶೀತಲ್ ದೇವಿ

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

27 ಡಿಸೆಂಬರ್ 2025 ಶನಿವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಶುಕ್ಲ ಸಪ್ತಮಿ ಗಂ 13-10 ನಕ್ಷತ್ರ: ಪೂರ್ವಾಭಾದ್ರ ಗಂ 9-10 ಯೋಗ: ವ್ಯತೀಪಾತ ಗಂ. 12-22 ಕರಣ: ವಣಿಜ ಗಂ. 13-10 ಧನು ಮಾಸದ 12 ನೇ ದಿನ. ಮಳೆ ನಕ್ಷತ್ರ : ಮೂಲ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 09-00 - 10-30 , ಸೂರ್ಯೋದಯ : 06-55 ಸೂರ್ಯಾಸ್ತ : 06-08, ಮುಸ್ಲಿಂ ದಿನಾಂಕ : 06 ರಜಬ್, ಅದೃಷ್ಟ ಸಂಖ್ಯೆ : 7, 12

ಮೇಷ: ದಂತವೈದ್ಯರಿಗೆ ಮತ್ತು ಶಸ್ತ್ರ ಚಿಕಿತ್ಸಕರಿಗೆ ವೃತ್ತಿಯಲ್ಲಿ ಅತೀವ ಗಮನ-ವಿರಬೇಕಾಗುತ್ತದೆ. ಕುಟುಂಬದ ಹಿರಿಯರು ಮಾಡಿದ ಪುಣ್ಯದ ಫಲಗಳು ಸಿಗಲಿವೆ. ಕುಟುಂಬದಲ್ಲಿ ಉಂಟಾಗಿದ್ದ ಕಲಹ ದೂರಾಗಲಿದೆ.

ವೃಷಭ: ಸದ್ಯದ ಪರಿಸ್ಥಿತಿಯಲ್ಲಿ ಹಣಕಾಸಿನ ಸ್ಥಿತಿಗತಿಗಳನ್ನು ನೋಡಿಕೊಂಡು ನಿವೇಶನ ಖರೀದಿಸುವ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಸರ್ಕಾರಿ ಉದ್ಯೋಗಸ್ಥರು ಬಡ್ತಿ ಹೊಂದಲು ಬೇಕಾದ ತಯಾರಿ ಮಾಡಿ.

ಮಿಥುನ: ರಾಜಕೀಯಕ್ಕೆ ಸಂಬಂಧಿಸಿದ ವ್ಯಕ್ತಿಗಳು ಕೆಲಸಗಳಲ್ಲಿ ಯಶಸ್ವಿ ಆಗುತ್ತೀರಿ. ದಾಂಪತ್ಯದಲ್ಲಿ ತಗ್ಗಿ-ಬಗ್ಗಿ ನಡೆಯುವುದನ್ನು ಕಲಿಯಿರಿ. ಇಲ್ಲವಾದಲ್ಲಿ ವಿರಸಕ್ಕೆ ಕಾರಣ. ಕೆಲಸದ ಹೊರೆ ಬೆಟ್ಟದಂತೆ ಇರುವುದು.

ಕರ್ಕಾಟಕ: ಔಷಧ ಕಂಪನಿಗಳಿಗೆ ಮತ್ತು ಔಷಧ ಮಾರಾಟ ಪ್ರತಿನಿಧಿಗಳಿಗೆ ಮಾರಾಟದಲ್ಲಿ ಹೆಚ್ಚಳ. ಬಾಲ್ಯದಲ್ಲಿ ಕಲಿತ ಕೆಲ ವಿಷಯಗಳು ಉಪಯೋಗಕ್ಕೆ ಬರಲಿವೆ. ನೂತನ ಉದ್ಯೋಗ ದೊರೆತು ಸಮಾಧಾನವಾಗುವುದು.

ಸಿಂಹ: ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚೆ ನಡೆಸಿ ಮುಂದಿನ ಹಂತವನ್ನು ಮುಟ್ಟುವಿರಿ. ಹಣಕಾಸಿನ ತಾಪತ್ರಯಗಳು ಶೀಘ್ರ ಪರಿಹಾರವಾಗುವುದು.

ಕನ್ಯಾ: ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದ ಸಂಸ್ಥೆಯಲ್ಲಿ ಜವಾಬ್ದಾರಿ ಹುದ್ದೆ ಸಿಗಲಿದೆ. ನಿಮ್ಮ ಸರ್ವತೋಮುಖ ಅಭಿವೃದ್ಧಿಗೆ ಸೋದರ ವರ್ಗದವರ ಬೆಂಬಲ ಸಿಗಲಿದೆ. ಹಿರಿಯರ ಶುಶ್ರೂಷೆಯ ಬಗ್ಗೆ ಗಮನಹರಿಸಿ.

ತುಲಾ: ಮರಮಟ್ಟು, ಕೃಷಿ, ಹೈನುಗಾರಿಕೆ ವೃತ್ತಿಗಳಲ್ಲಿರುವವರಿಗೆ ನಿರೀಕ್ಷಿತ ವರಮಾನ ದೊರೆಯಲಿದೆ. ಮನೆ ಕಟ್ಟುವ ಕೆಲಸ ದೇವರ ಕೃಪೆಯಿಂದ ನಿರ್ವಿಘ್ನವಾಗಿ ಮುಂದುವರಿಯಲಿದೆ. ಪ್ರತಿಭೆಗೆ ತಕ್ಕ ಪ್ರತಿಫಲ ಸಿಗುವುದು.

ವೃಶ್ಚಿಕ: ಸೇವಿಸುವಂಥ ಆಹಾರದಿಂದ ಆರೋಗ್ಯ ಹದಗೆಡುವಂತಾಗಬಹುದು. ಕಾಗದಪತ್ರ ಬರೆಯುವವರಿಗೆಗೆ ಮತ್ತು ಕಂಪ್ಯೂಟರ್ ಕೆಲಸಗಾರರಿಗೆ ತೃಪ್ತಿಕರ ದಿನ. ವಾಣಿಜ್ಯ ಬೆಳೆಗಾರರಿಗೆ ಉತ್ತಮ ಬೆಲೆ ದೊರಕಲಿದೆ.

ಧನು: ಶಿಕ್ಷಣ ವೃತ್ತಿಯಲ್ಲಿರುವವರಿಗೆ ಒತ್ತಡ ವೃದ್ಧಿಯಾಗುತ್ತದೆ. ಶೈಕ್ಷಣಿಕ ರಂಗದಲ್ಲಿನ ಚಟುವಟಿಕೆಗಳಿಂದ ಉತ್ತಮ ಹೆಸರನ್ನು ಸಂಪಾದಿಸುವಿರಿ. ಶುಭ ಕಾರ್ಯಗಳಿಗೆ ರಾಹುಕಾಲದ ನಂತರ ಪ್ರಯಾಣ ಬೆಳೆಸಿ.

ಮಕರ: ತಂದೆ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಕಡೆ ಗಮನವನ್ನು ನೀಡಬೇಕಾಗಬಹುದು. ಈ ದಿನದ ನಿರಾಸೆಯ ಜೀವನ ಶೈಲಿ ಹಂತ ಹಂತ ಮುಕ್ತಾಯವಾಗುವುದು. ಹಳೆಯ ಯೋಜನೆಗಳಿಗೆ ಮರುಜೀವ ಸಿಗಲಿದೆ.

ಕುಂಭ: ಸುಗಂಧ ದ್ರವ್ಯದ ಬಗ್ಗೆ ಕೆಲಸ ಮಾಡುತ್ತಿರುವವರಿಗೆ ಬಯಸಿದ ಫಲಿತಾಂಶ ದೊರೆಯಲಿದೆ. ಕೌಟುಂಬಿಕ ವಿಷಯಗಳತ್ತ ಗಮನಹರಿಸಬೇಕಾಗುವುದು. ಜನರೊಂದಿಗೆ ಬೆರೆಯುವ ಅಭ್ಯಾಸವನ್ನು ಮಾಡಿಕೊಳ್ಳಿ.

ಮೀನ: ಆಸ್ತಿ ವ್ಯವಹಾರಗಳನ್ನು ನೋಡಿಕೊಳ್ಳಲು ಸಹೋದರರ ಉತ್ತಮ ಸಹಕಾರ ದೊರೆಯುವುದು. ಹಠ ಸ್ವಭಾವವನ್ನು ಕಡಿಮೆ ಮಾಡುವುದರಿಂದ ಏಳಿಗೆ ಇರುವುದು. ಪ್ರೇಮಿಗಳ ಪಾಲಿಗೆ ಈ ದಿನ ಅತ್ಯುತ್ತಮ.

ಪದಬಂಧ 6266


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಹೆಬ್ಬೆರಳ ಪಕ್ಕದ ಬೆರಳು (5)
3. ಮುಂದೆ ಬರಲಿರುವ ಕಾಲ (3)
5. ತಲೆ ಎತ್ತಿದಾಗ ಕಾಣಿಸಿದ ಶೀರ್ಷಿಕೆ (5)
7. ಒಳ್ಳೆಯ ಹಾದಿ (3)
9. ಚರ್ಚೆಯಲ್ಲಿ ಕೊನೆಗೊಂಡಿರುವ ಮಾತುಕತೆ (3)
11. ಲಗ್ನಕ್ಕೊಂದು ಪರ್ಯಾಯ ಪದ (3)
13. ಲೋಹದ ಹಕ್ಕಿಯಲ್ಲಿ ಕೈಗೊಳ್ಳುವ ಪಯಣ (5)
15. ಅವಳಿಗಾಗಿ ಖರೀದಿಸಿದ ಬಟ್ಟೆ! (3)
16. ಈತ ವರದಿಯನ್ನು ಸಿದ್ಧಪಡಿಸುವವನು (5)

ಮೇಲಿಂದ ಕೆಳಕ್ಕೆ

1. ಹೀಗೆ ವ್ಯಕ್ತಗೊಳಿಸು (4)
2. ಕೊನೆಗೆ ಹಿತವಿದ್ದರೂ ಇಲ್ಲದುದು! (3)
4. ವಿಶೇಷವಾದ ದ್ರೋಹ (3)
6. ಪಂಡಿತ ಇಲ್ಲಿದ್ದಾನೆ (3)
8. ಒಡೆದ ಕಾಳು (2)
9. ಸಾವಧಾನವಾಗಿ ಮಾಡಿಕೊಂಡಿರುವ ರಾಜಿ (3)
10. ಚನ್ನಾಗಿ ಮಾತನಾಡುವವನು ತಿರುಗಿದ್ದಾನಲ್ಲಾ! (2)
12. ಒಬ್ಬರ ಕೈಯಿಂದ ಇನ್ನೊಬ್ಬರ ಕೈಗೆ ಬದಲಾಯಿಸುವಿಕೆ (4)
13. ಆಂದೋಳನ ಹೀಗೆ ಬಂದಿದೆ (3)
14. ನರನು ಪ್ರವೇಶಿದ ಷಹರು (3)



6265ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಾಕು 4.ಪ್ರಾಥಮಿಕಶಿಕ್ಷಣ 6.ಕರ 8.ವಲ್ಲಭಬಾಯಿಪಟೇಲ್ 10.ಕೂಡಲಸಂಗಮದೇವ 13.ರಥ 15.ವರ್ತಮಾನಪತ್ರಿಕೆ 17.ಕೊಂಕು

ಮೇಲಿಂದ ಕೆಳಕ್ಕೆ:
1.ಬಾಲಕ 2.ಭೂಮಿ 3.ಕ್ಷಣ 5.ಕಡಾಯಿ 7.ರವ 9.ಬಾಸಿಂಗ 11.ಸಂಧಾನ 12.ವರ 14.ಥಳುಕು 15.ವಟ 16.ಪಣ

ಸುಡೊಕು 6650

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		4			1			3
	7					6		
5			8		9		4	7
		5	4			3		
	6			9			7	
3					8	5		9
4	1			8			3	
		2	7		4	9		1
7		9		3			2	

6649 ಸುಡೊಕು

2	4	8	3	7	1	5	6	9
9	5	6	4	8	2	3	7	1
7	3	1	9	5	6	2	8	4
6	9	4	1	3	8	7	5	2
5	7	2	6	4	9	1	3	8
8	1	3	7	2	5	9	4	6
3	6	7	2	1	4	8	9	5
4	2	5	8	9	3	6	1	7
1	8	9	5	6	7	4	2	3

ಎಚ್‌–1ಬಿ ವೀಸಾ ಸಂದರ್ಶನ ರದ್ದು: ಭಾರತ ಕಳವಳ

ನವದೆಹಲಿ (ಪಿಟಿಐ): ಎಚ್‌–1ಬಿ ವೀಸಾಕ್ಕೆ ಸಂಬಂಧಿಸಿದಂತೆ ಪೂರ್ವ ನಿಗದಿತ ಸಂದರ್ಶನಗಳನ್ನು ಅಮೆರಿಕ ರದ್ದುಪಡಿಸಿರುವ ಬಗ್ಗೆ ಭಾರತ ತೀವ್ರ ಕಳವಳ ವ್ಯಕ್ತಪಡಿಸಿದೆ.



ಡಿಸೆಂಬರ್ 15ರಿಂದ ಎಚ್‌–1ಬಿ ವೀಸಾ ಅರ್ಜಿದಾರರ ಸಂದರ್ಶನ ನಿಗದಿಯಾಗಿತ್ತು. ಆದರೆ, ಸಂದರ್ಶನ ರದ್ದುಪಡಿಸಿರುವುದಾಗಿ ಅಮೆರಿಕದ ವಲಸೆ ಅಧಿಕಾರಿಗಳು, ಅಭ್ಯರ್ಥಿಗಳಿಗೆ ಇಮೇಲ್ ಮೂಲಕ ತಿಳಿಸಿದ್ದಾರೆ. ಸಂದರ್ಶನ ರದ್ದಾಗಿರುವುದು ಭಾರಿ ಸಂಖ್ಯೆಯ ಭಾರತೀಯ ಅರ್ಜಿದಾರರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಸಂದರ್ಶನವನ್ನು ಮುಂದಿನ ವರ್ಷದ ಮೇ ತಿಂಗಳಿಗೆ ಮುಂದೂಡಲಾಗಿದೆ ಎಂಬ ಇಮೇಲ್ ಸಂದೇಶ ಕೆಲವು ಅರ್ಜಿದಾರರಿಗೆ ಬಂದಿವೆ. 'ಭಾರತೀಯ ಅಭ್ಯರ್ಥಿಗಳಿಗೆ ಆಗಿರುವ ಸಮಸ್ಯೆಯನ್ನು ಇತ್ಯರ್ಥಪಡಿಸಲು ಅಮೆರಿಕದೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿದ್ದೇವೆ' ಎಂದು ವಿದೇಶಾಂಗ ವ್ಯವಹಾರಗಳ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

'ರಫ್ತು ಮೌಲ್ಯ ₹76 ಲಕ್ಷ ಕೋಟಿ ನಿರೀಕ್ಷೆ'

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ಮೌಲ್ಯವು ₹76 ಲಕ್ಷ ಕೋಟಿ ದಾಟಲಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಶಿಯೇಟಿವ್ (ಜಿಟಿಆರ್‌ಐ) ಅಂದಾಜಿಸಿದೆ. ಕಳೆದ ಆರ್ಥಿಕ ವರ್ಷದಲ್ಲಿ ರಫ್ತು ಮೌಲ್ಯವು ₹74 ಲಕ್ಷ ಕೋಟಿಯಷ್ಟಾಗಿತ್ತು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕಾಯ್ದೆ ಜಾರಿಗೆ ಬಂದು ಈ ತಿಂಗಳ ಅಂತ್ಯಕ್ಕೆ 25 ವರ್ಷಗಳು ಪೂರ್ಣಗೊಳ್ಳುತ್ತವೆ. 1997ರಲ್ಲಿ ಕರ್ನಾಟಕ ಸೌಹಾರ್ದ ಸಹಕಾರಿ ಮಸೂದೆಯನ್ನು ವಿಧಾನಮಂಡಲ ಅಂಗೀಕರಿಸಿತ್ತು. ರಾಷ್ಟ್ರಪತಿ ಅವರು 2000ದ ಮಾರ್ಚ್ 28ರಂದು ಇದಕ್ಕೆ ಅನುಮತಿ ನೀಡಿದ್ದರು. ಸರ್ಕಾರವು ಈ 2021ರಲ್ಲಿ ಮತ್ತು ಈ ವರ್ಷ ಈ ಕಾಯ್ದೆಗೆ ತಿದ್ದುಪಡಿ ತಂದಿದೆ. ತಿದ್ದುಪಡಿಯಲ್ಲಿನ ಕೆಲವು ಅಂಶಗಳಿಗೆ ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿ ತೊಡಗಿಕೊಂಡಿರುವವರು ಆಕ್ಷೇಪವನ್ನೂ ವ್ಯಕ್ತಪಡಿಸಿದ್ದಾರೆ. ಕಾಯ್ದೆಯ ಬೆಳ್ಳಿ ಹಬ್ಬದ ಆಚರಣೆ ಕೊನೆಗೊಳ್ಳುವ ಹೊತ್ತಿನಲ್ಲಿ ಸೌಹಾರ್ದ ಸಹಕಾರಿ ಚಳವಳಿಗೆ ಸಂಬಂಧಿಸಿದ ವಿಶೇಷ ಲೇಖನ ಇಲ್ಲಿದೆ

ಸರ್ಕಾರ ಮಾರ್ಗದರ್ಶಕನಾಗಲಿ, ನಿಯಂತ್ರಕನಲ್ಲ

ಜನರ ಚಳವಳಿಯಾಗಿ ಬೆಳೆದ ಸೌಹಾರ್ದ ಸಹಕಾರಿ ಕಾಯ್ದೆಗೆ 25 ವರ್ಷದ ಸಂಭ್ರಮ

● ಮನೋಹರ ಮಸ್ಕಿ

ದೇಶದಲ್ಲಿ ಸಹಕಾರಿ ಕ್ಷೇತ್ರ ನಿರೀಕ್ಷಿಸಿದಷ್ಟು ಪ್ರಗತಿ ಸಾಧಿಸುವಲ್ಲಿ ವಿಫಲವಾಗಿದೆ ಎಂದು ಯೋಜನಾ ಆಯೋಗದ (ಈಗಿನ ನೀತಿ ಆಯೋಗ) ವರದಿಗಳು ಹೇಳಿದ್ದವು. ಆಯೋಗ ನೀಡಿದ ಮಾದರಿ ಸಹಕಾರಿ ಕಾಯ್ದೆಯಿಂದ ರೂಪುಗೊಂಡಿದ್ದೇ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ. ಇದು ಈ ವರ್ಷಾಂತ್ಯಕ್ಕೆ 25 ವರ್ಷಗಳನ್ನು ಪೂರೈಸುತ್ತಿದೆ.

ಸಹಕಾರ ಕ್ಷೇತ್ರವನ್ನು 'ಸರ್ಕಾರದ ವಿಸ್ತರಣೆ'ಯಾಗಿ ಅಲ್ಲದೆ, 'ಜನರ ಸ್ವಂತ ಸಂಸ್ಥೆ'ಯಾಗಿ ನೋಡುವ ದೃಷ್ಟಿಕೋನದಿಂದಾಗಿ ಸೌಹಾರ್ದ ಕಾಯ್ದೆಯು ಒಂದು ಪರ್ಯಾಯ ದಾರಿಯಾಗಿ ಹೊರಹೊಮ್ಮಿತು. ಬದಲಾವಣೆಯ ಹರಿಕಾರನಾಗಿದ್ದ ಈ ಸೌಹಾರ್ದ ಕಾಯ್ದೆಯನ್ನು ಮತ್ತೆ 25 ವರ್ಷಗಳಷ್ಟು ಹಿಂದಕ್ಕೆ ಒಯ್ಯುವ ಪ್ರಯತ್ನಗಳು ನಡೆಯುತ್ತಿರುವ ಹೊತ್ತಿನಲ್ಲಿ ಸೌಹಾರ್ದ ಸಹಕಾರಿಗಳ ಕಾಲು ಶತಮಾನದ ಪ್ರಗತಿಯ ಹೆಜ್ಜೆಗಳತ್ತ ನಾವು ದೃಷ್ಟಿ ಹಾಯಿಸಬೇಕಿದೆ.

ಸದಸ್ಯರ ಸ್ವಾಯತ್ತೆ, ಸ್ವನಿಯಂತ್ರಣ, ಸ್ವಶಾಸನ ಎಂಬ ಮೂಲತತ್ವಗಳನ್ನು ಆಧಾರವಾಗಿಟ್ಟುಕೊಂಡು ರಾಜ್ಯದೆಲ್ಲೆಡೆ ಇರುವ 5,800ಕ್ಕೂ ಅಧಿಕ ಸೌಹಾರ್ದ ಸಹಕಾರಿಗಳು, ಸುಮಾರು 50 ಲಕ್ಷಕ್ಕೂ ಹೆಚ್ಚು ಸದಸ್ಯರ ಜೀವನದಲ್ಲಿ ಆರ್ಥಿಕ–ಸಾಮಾಜಿಕ ಬದಲಾವಣೆ ತಂದಿವೆ. ವಾರ್ಷಿಕ ವ್ಯವಹಾರವು ₹51 ಸಾವಿರ ಕೋಟಿಯನ್ನು ದಾಟಿರುವುದು ಈ ಚಳವಳಿಯ ಶಕ್ತಿ ಮತ್ತು ಅದರ ಮೇಲೆ ಜನರಿಗಿರುವ ನಂಬಿಕೆಯನ್ನು ಪ್ರತಿಬಿಂಬಿಸುತ್ತದೆ. ಇಂತಹ ಸಂದರ್ಭದಲ್ಲೇ ಸೌಹಾರ್ದ ಚಳವಳಿ ಬೆಳ್ಳಿ ಹಬ್ಬ ಆಚರಿಸಿರುವುದು ಹೆಮ್ಮೆಯ ಸಂಗತಿ, ಜೊತೆಗೆ ಇದು ಗಂಭೀರ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ಕ್ಷಣವೂ ಹೌದು.

ಡಿಜಿಟಲೀಕರಣದ ಕ್ಷೇತ್ರದಲ್ಲಿ ಸೌಹಾರ್ದ ಬ್ಯಾಂಕುಗಳು ಎಟಿಎಂ, ಇಂಟರ್‌ನೆಟ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್, ಕಾರ್ಡ್ ಸೇವೆಗಳು ಇತ್ಯಾದಿ ಸೇವೆಗಳನ್ನು ಗ್ರಾಮ–ನಗರಗಳಲ್ಲಿ ವಿಸ್ತರಿಸಿ, ಗ್ರಾಹಕಸ್ನೇಹಿ, ಪಾರದರ್ಶಕ ವ್ಯವಹಾರ ಮಾದರಿಯನ್ನು ನಿರ್ಮಿಸುತ್ತಿವೆ. ಇದರಿಂದ ಸದಸ್ಯತ್ವ, ಠೇವಣಿಗಳು, ಸಾಲ ಮತ್ತು ಲಾಭ ಎಲ್ಲವೂ ಶಾಶ್ವತ ಏರಿಕೆಯನ್ನು ಕಂಡಿವೆ. ಗ್ರಾಮೀಣ–ನಗರ ಆರ್ಥಿಕ ಚಟುವಟಿಕೆಗಳಿಗೆ ಈ ಚಳವಳಿ ದೊಡ್ಡ ಕೊಡುಗೆ ನೀಡಿದೆ ಎಂಬುದು ಸ್ಪಷ್ಟ.

ಸೌಹಾರ್ದ ಕಾಯ್ದೆಯ ಅಡಿಯಲ್ಲಿ ನೋಂದಣಿಯಾದ ಪ್ರಥಮ ಸಹಕಾರಿ ಸಂಸ್ಥೆಯೆಂದರೆ ಸುಕೋ ಬ್ಯಾಂಕ್. ಇದು ಹಳೆಯ ಸಹಕಾರ ಕಾಯ್ದೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಂಸ್ಥೆಯಾಗಿದ್ದು, ಸ್ವಯಂಪ್ರೇರಿತವಾಗಿ ಸೌಹಾರ್ದ ಕಾಯ್ದೆಗೆ ಪರಿವರ್ತನೆಯಾಯಿತು. ಈ ಪರಿವರ್ತನೆಯು ಕೇವಲ ಒಂದು ಸಹಕಾರಿ ಬ್ಯಾಂಕಿನ ನಿರ್ಧಾರವಲ್ಲ; ಇಡೀ ರಾಜ್ಯದ ಸಹಕಾರ ಕ್ಷೇತ್ರಕ್ಕೆ ದಾರಿ ತೋರಿಸಿದ ಒಂದು ಐತಿಹಾಸಿಕ ಹೆಜ್ಜೆಯಾಯಿತು. ಇದರ ಬಳಿಕ 50ಕ್ಕಿಂತ ಹೆಚ್ಚು ಸಹಕಾರ ಸಂಸ್ಥೆಗಳು ಸೌಹಾರ್ದ ಕಾಯ್ದೆಯನ್ನು ಅಳವಡಿಸಿಕೊಳ್ಳಲೂ ಸುಕೋ ಬ್ಯಾಂಕ್ ಕೆಲಸ ಮಾಡಿತು. ಇದರ ಫಲವಾಗಿ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಎಂಬ ರಾಜ್ಯಮಟ್ಟದ ಫೆಡರಲ್ ಸಂಸ್ಥೆ ಹುಟ್ಟಿಕೊಂಡಿತು. ಇದು ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಸ್ಥೆಯಲ್ಲ; ಸೌಹಾರ್ದ ಸಹಕಾರಗಳೇ ಸೇರಿ ನಿರ್ಮಿಸಿದ ಸ್ವಯಂ-ಆಡಳಿತ ಸಂಸ್ಥೆ. ಇದರ ಉದ್ದೇಶ ನಿಯಂತ್ರಣವಲ್ಲ, ಮಾರ್ಗದರ್ಶನ; ಆದೇಶವಲ್ಲ, ಸಂಯೋಜನೆ.

25 ವರ್ಷದ ಸಾಧನೆಗಳು

25 ವರ್ಷಗಳಲ್ಲಿ ಸೌಹಾರ್ದ ಸಹಕಾರಿಗಳು ಸರ್ಕಾರದ ಅನುದಾನಗಳಿಲ್ಲದೆ, ರಾಜಕೀಯ ಆದೇಶಗಳಿಲ್ಲದೆ, ಸ್ಥಳೀಯ ಜನರ ಹಣವನ್ನು ಸ್ಥಳೀಯ ಜನರಿಗೇ ಸಾಲವಾಗಿ ನೀಡಿ ಒಂದು ಮೌನ ಕ್ರಾಂತಿಯನ್ನು ನಡೆಸಿವೆ. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸಣ್ಣ ವ್ಯಾಪಾರಿಗಳು, ಕೃಷಿಕರು, ಸೌಹಾರ್ದ ಸಹಕಾರಿಗಳ ಮೂಲಕ ಆರ್ಥಿಕ ಭದ್ರತೆ ಪಡೆದಿದ್ದಾರೆ. ಸಹಕಾರ ಸಂಸ್ಥೆಗಳು ಸರ್ಕಾರದ ಯೋಜನೆಗಳಾಗಿ ಅಲ್ಲ, ಜನರ ನಂಬಿಕೆಯ ಸಂಸ್ಥೆಗಳಾಗಿ ಬೆಳೆದಿವೆ. ಕೆಲವು ಸೌಹಾರ್ದ ಸಂಸ್ಥೆಗಳು ಜನರ ನಂಬಿಕೆಯನ್ನು ಹಾಳು ಮಾಡಿದ ಉದಾಹರಣೆಗಳೂ ಇವೆ.



ಮಾಡಬೇಕಿರುವುದು	ಸರ್ಕಾರ ಮಾಡುತ್ತಿರುವುದು
● ಸ್ವತಂತ್ರ ಸಹಕಾರಿ ಓಂಬುಡ್ಸ್‌ಮನ್ ವ್ಯವಸ್ಥೆ	● ಇಲಾಖಾ ಅಧಿಕಾರಿಗಳಿಗೆ ಹೆಚ್ಚಿನ ಅಧಿಕಾರ
● ಆಂತರಿಕ ಅಪಾಯ ಆಧಾರಿತ ಲೆಕ್ಕ ಪರಿಶೋಧನೆ ಮತ್ತು ಅದರ ಅನುಷ್ಠಾನದ ಬಗ್ಗೆ ಸೂಕ್ತ ನಿಯಮ	● ಪ್ರತಿ 3 ವರ್ಷಕ್ಕೊಮ್ಮೆ ಇಲಾಖಾ ಅಧಿಕಾರಿಗಳಿಂದ ಲೆಕ್ಕ ಪರಿಶೋಧನೆ
● ಸಹಕಾರಿ ಆಧಾರಿತ ಠೇವಣಿ ಭದ್ರತಾ ವ್ಯವಸ್ಥೆ	● ನಿರ್ದೇಶಕರ ಆಸ್ತಿ ಮತ್ತು ಹೊಣೆಗಾರಿಕೆಗಳ ಪಟ್ಟಿ ಸಲ್ಲಿಕೆ



ಆದರೆ, ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ಮಾಡಿದ ಕೆಲವು ಕಾನೂನು ತಿದ್ದುಪಡಿಗಳು ಸೌಹಾರ್ದ ಕಾಯ್ದೆಯ ಮೂಲ ಸ್ವಭಾವವನ್ನೇ ಪ್ರಶ್ನಿಸುತ್ತಿವೆ. ರಿಜಿಸ್ಟ್ರಾರ್ ಅಧಿಕಾರ ವಿಸ್ತರಣೆ, ಠೇವಣಿಗಳ ಮೇಲೆ ಹೆಚ್ಚುವರಿ ಕಡ್ಡಾಯ ರಿಸರ್ವ್ ನಿಯಮಗಳು, ನಿಧಿ ಹೂಡಿಕೆಗಳ ಮೇಲಿನ ಕಠಿಣ ನಿಯಂತ್ರಣಗಳು ಸೌಹಾರ್ದ ಸಂಸ್ಥೆಗಳ ಸ್ವಾಯತ್ತ ನಿರ್ಧಾರ ಶಕ್ತಿಯನ್ನು ಕುಗ್ಗಿಸುವ ದಿಕ್ಕಿನಲ್ಲಿ ಸಾಗುತ್ತಿರುವುದು ಸ್ಪಷ್ಟವಾಗಿದೆ. ಇವುಗಳು ಸೌಹಾರ್ದ ಕಾಯ್ದೆಯ ಆತ್ಮಕ್ಕೆ ವಿರುದ್ಧವಾಗಿವೆ ಎಂಬ ಅಭಿಪ್ರಾಯವಿದೆ.

ಫೆಡರಲ್ ಕೋ–ಆಪರೇಟಿವ್ ದುರ್ಬಲವಾದರೆ, ಸೌಹಾರ್ದ ಸಹಕಾರಿಗಳು ಸರ್ಕಾರದ ಮುಂದೆ ಏಕಾಂಗಿಗಳಾಗುತ್ತವೆ. ಸದಸ್ಯರ ಹಿತರಕ್ಷಣೆಗೆ ಇರುವ ಒಟ್ಟುಗೂಡಿದ ವೇದಿಕೆ ನಾಶವಾಗುತ್ತದೆ. ಸ್ವಯಂ ನಿಯಂತ್ರಣದ ಬದಲು ಸರ್ಕಾರಿ ನಿಯಂತ್ರಣ ಬಲಗೊಳ್ಳುತ್ತದೆ. ಇದು ಸಹಕಾರ ಕ್ಷೇತ್ರವನ್ನು ಮತ್ತೆ 1959ರ ಯುಗದ ಹಿಂದಕ್ಕೆ ಕರೆದೊಯ್ಯುತ್ತದೆ.

ಸಮಸ್ಯೆ ಎಲ್ಲಿ? ಪರಿಹಾರ ಏನು?

ಸೌಹಾರ್ದ ಸಹಕಾರಿಗಳ ಸಮಸ್ಯೆ ಸ್ವಾಯತ್ತೆಯಲ್ಲ. ಆದರೆ, ಸ್ವಾಯತ್ತೆಯನ್ನು ಬೆಂಬಲಿಸುವ ಸೂಕ್ತ, ಸ್ಪಷ್ಟ ಮತ್ತು ಜವಾಬ್ದಾರಿಯುತ ಆಡಳಿತ ವ್ಯವಸ್ಥೆಗಳ ಕೊರತೆಯಲ್ಲಿ ಸಮಸ್ಯೆ ಇದೆ. ಸ್ವಾಯತ್ತೆ ಎಂದರೆ ನಿಯಂತ್ರಣವಿಲ್ಲದ ಸ್ವೇಚ್ಛೆ ಅಲ್ಲ; ಅದು ಹೊಣೆಗಾರಿಕೆಯೊಂದಿಗೆ ಕಾರ್ಯನಿರ್ವಹಿಸುವ ಸದಸ್ಯರ ಸ್ವಾತಂತ್ರ್ಯ. ಈ ಸೂಕ್ಷ್ಮ ಅಂತರವನ್ನು ಅರಿಯದೆ, ಸ್ವಾಯತ್ತೆಯನ್ನೇ ಸಮಸ್ಯೆಯಾಗಿ ಚಿತ್ರಿಸುವುದು ಸರಿಯಲ್ಲ.

ನಿಯಂತ್ರಣ ಅನಿವಾರ್ಯ ಎನ್ನುವುದು ನಿಜ. ಯಾವುದೇ ಹಣಕಾಸು ಸಂಸ್ಥೆಯಲ್ಲಿ ಠೇವಣಿದಾರರ ಹಣದ ರಕ್ಷಣೆ ಆದ್ಯತೆಯಾಗಬೇಕು. ಆದರೆ ಈ ನಿಯಂತ್ರಣ ಮೇಲಿನಿಂದ ಹೇರಲಾದ ಅಥವಾ ನೇರ ಸರ್ಕಾರಿ ಹಸ್ತಕ್ಷೇಪ ಆಗಬಾರದು. ಅಂಥ ಕ್ರಮಗಳು ಸೌಹಾರ್ದ ಸಹಕಾರಿಗಳ ಆತ್ಮವನ್ನೇ ಕುಗ್ಗಿಸುತ್ತವೆ. ಇದರ ಬದಲಾಗಿ ನಿಯಂತ್ರಣವು ಸಂಸ್ಥೆಯ ಒಳಗಿನಿಂದಲೇ ಬಲಪಡಿಸುವ ರೀತಿಯಲ್ಲಿ ರೂಪುಗೊಳ್ಳಬೇಕು. ಸರ್ಕಾರವು ಇಲ್ಲಿ ಮಾರ್ಗದರ್ಶಕನ ಮಾತ್ರ ನಿರ್ವಹಿಸಬೇಕೇ ವಿನಾ ನಿರ್ವಾಹಕನಾಗಬಾರದು.

ಇಲ್ಲಿ ಅಪಾಯ ಆಧಾರಿತ ನಿಯಂತ್ರಣ ಮಹತ್ವ ಪಡೆದುಕೊಳ್ಳುತ್ತದೆ. ಎಲ್ಲ ಸೌಹಾರ್ದ ಸಹಕಾರಗಳನ್ನೂ ಒಂದೇ ತಟ್ಟೆಯಲ್ಲಿ ತೂಗುವುದರಿಂದ ಸಮಸ್ಯೆ ಪರಿಹಾರವಾಗದು. ಹಣಕಾಸು ಸ್ಥಿತಿ, ಆಡಳಿತ ಗುಣಮಟ್ಟ ಮತ್ತು ಅಪಾಯ ಮಟ್ಟವನ್ನು ಆಧರಿಸಿ, ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಸೌಹಾರ್ದಗಳಿಗೆ ಹೆಚ್ಚಿನ ಸ್ವಾತಂತ್ರ್ಯ ನೀಡಬೇಕು; ದುರ್ಬಲ ಸಂಸ್ಥೆಗಳ ಮೇಲೆ ಮಾತ್ರ ಹೆಚ್ಚುವರಿ ಮೇಲ್ವಿಚಾರಣೆ ಇರಬೇಕು. ಇದು ನಿಯಂತ್ರಣ ಮತ್ತು ಸ್ವಾಯತ್ತೆಯ ನಡುವಿನ ಸಮತೋಲನಕ್ಕೆ ಸೂಕ್ತ ಮಾರ್ಗ.

ಉದಾಹರಣೆಗೆ, ಸ್ವತಂತ್ರ ಸಹಕಾರಿ ಓಂಬುಡ್ಸ್‌ಮನ್ ವ್ಯವಸ್ಥೆ ತರುವ ಅಗತ್ಯವಿತ್ತು. ರಿಜಿಸ್ಟ್ರಾರ್‌ಗೆ ಅತಿಯಾದ ಅಧಿಕಾರ ಒಪ್ಪಿಸುವ ಬದಲು, ಠೇವಣಿದಾರರು ಮತ್ತು ಸದಸ್ಯರ ದೂರುಗಳಿಗೆ ವೇಗವಾಗಿ ಸ್ಪಂದಿಸುವ ಸ್ವತಂತ್ರ ವ್ಯವಸ್ಥೆ ರೂಪಿಸಬೇಕು. ಇದರಿಂದ ಆಡಳಿತದ ಮೇಲಿನ ವಿಶ್ವಾಸ ಹೆಚ್ಚುತ್ತದೆ ಮತ್ತು ಸರ್ಕಾರದ ನೇರ ಹಸ್ತಕ್ಷೇಪದ ಅಗತ್ಯ ಕಡಿಮೆಯಾಗುತ್ತದೆ.

ಸ್ವಾಯತ್ತೆ ಹೆಚ್ಚಿಸಬೇಕು

ಠೇವಣಿದಾರರ ರಕ್ಷಣೆಗೆ ಸರ್ಕಾರ ತಾನೇ ಅಧಿಕಾರ ಸ್ವಾಧೀನಪಡಿಸಿಕೊಳ್ಳುವ ಮಾರ್ಗವನ್ನು ಆಯ್ಕೆಮಾಡುವ ಬದಲು, ಸಹಕಾರಿ ಆಧಾರಿತ ಠೇವಣಿ ಭದ್ರತಾ ವ್ಯವಸ್ಥೆ ರೂಪಿಸುವುದು ಹೆಚ್ಚು ಸೂಕ್ತ. ಸಹಕಾರಿಗಳೇ ಸೇರಿ ನಿರ್ಮಿಸುವ ಠೇವಣಿ ಭದ್ರತಾ ನಿಧಿ ಅಥವಾ ವಿಮಾ ವ್ಯವಸ್ಥೆ, ಅಪಾಯ ಎದುರಾದಾಗ ಠೇವಣಿದಾರರಿಗೆ ರಕ್ಷಣೆ ನೀಡಬಹುದು. ಇದು ಸಹಕಾರದ ತತ್ವಕ್ಕೂ ಹೊಂದಿಕೆಯಾಗುತ್ತದೆ ಮತ್ತು ಸ್ವಾಯತ್ತೆಯನ್ನೂ ಉಳಿಸುತ್ತದೆ.


ಸೌಹಾರ್ದ ಸಹಕಾರಗಳಿಗೆ ಬೇಕಾಗಿರುವುದು ಸ್ವಾಯತ್ತೆಯ ಕಡಿತವಲ್ಲ; ಅದನ್ನು ಜವಾಬ್ದಾರಿಯುತವಾಗಿ ನಡೆಸುವ ಪ್ರಬಲ ವ್ಯವಸ್ಥೆಗಳು. ನಿಯಂತ್ರಣ ಮತ್ತು ಸ್ವಾತಂತ್ರ್ಯ ಪರಸ್ಪರ ವಿರೋಧಿಗಳಲ್ಲ; ಇವೆರಡರ ನಡುವೆ ಸಮತೋಲನ ಸಾಧಿಸುವುದೇ ಸೌಹಾರ್ದ ಸಹಕಾರ ಚಳವಳಿಯ ಮುಂದಿನ ಹಂತದ ಯಶಸ್ಸಿನ ಕೀಲಿಕೈ. ಈ ಬಗ್ಗೆ ರಾಜ್ಯ ಮತ್ತು ಸರ್ಕಾರದ ಮಟ್ಟದಲ್ಲಿ ಸೂಕ್ತವಾದ ಚರ್ಚೆ ನಡೆಯದಿರುವುದು ದುರದೃಷ್ಟಕರ. ಸೌಹಾರ್ದ ಸಹಕಾರ ಚಳವಳಿ ಒಂದು ಕಾನೂನು ಸಮಸ್ಯೆಯಲ್ಲ; ಅದು ಒಂದು ವಿಚಾರ ಚಳವಳಿ. 25 ವರ್ಷಗಳ ನಂತರವೂ ಇದು ಚರ್ಚೆಯಲ್ಲಿದೆ ಎಂದರೆ, ಅದು ವೈಫಲ್ಯವಲ್ಲ— ಅದರ ಪ್ರಸ್ತುತತೆಯ ಸಾಕ್ಷಿ. ಸ್ವಾಯತ್ತೆಯನ್ನು ಕುಗ್ಗಿಸಿ ಸಹಕಾರವನ್ನು ಉಳಿಸಲಾಗದು. ಸ್ವಾಯತ್ತೆಯನ್ನು ಬಲಪಡಿಸಿದರೆ ಮಾತ್ರ ಸಹಕಾರ ಚಳವಳಿ ಜೀವಂತವಾಗಿರುತ್ತದೆ.

ಲೇಖಕ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತದ ಸಂಸ್ಥಾಪಕ ಅಧ್ಯಕ್ಷ ಮತ್ತು ಮಾಜಿ ಶಾಸಕ

ಅಡಿಕೆ ಧಾರಣೆ

ಕುಮಟಾ		ಸರಕು	54859-85059	ಕೆಂಪುಗೋಟು	27899-35989
ಚಾಲಿ	43389-47109	**ಸಿದ್ದಾಪುರ**		ರಾಶಿ	51699-59099
ಚಿಪ್ಪು	26029-34909	ಬಿಳಿಗೋಟು	26809-36209	**ಯಲ್ಲಾಪುರ**	
ಕೋಕ	12869-30009	ಚಾಲಿ	41899-47699	ಅಪಿ	64399-72421
ಫ್ಯಾಕ್ಟರಿ	6809-24829	ಕೋಕ	20699-33199	ಬಿಳಿಗೋಟು	14900-35020
ಹೊಸಚಾಲಿ	34089-39799	ಹೊಸಚಾಲಿ	32089-37399	ಕೋಕ	11099-30899
ಪುತ್ತೂರು		ಕೆಂಪುಗೋಟು	31319-34689	ಹಳೆಚಾಲಿ	35809-48099
ಕೋಕ	20000-35000	ರಾಶಿ	47699-55619	ಹೊಸಚಾಲಿ	35699-38329
ಹೊಸತು	26000-41500	ತಟ್ಟಿಬೆಟ್ಟೆ	34000-49599	ಕೆಂಪುಗೋಟು	13600-36715
ಶಿವಮೊಗ್ಗ		**ಶಿರಸಿ**		ರಾಶಿ	50921-63900
ಬೆಟ್ಟೆ	54729-64239	ಬೆಟ್ಟೆ	40299-49899	ತಟ್ಟಿಬೆಟ್ಟೆ	37309-51821
ಗೊರಬಲು	19009-40501	ಬಿಳಿಗೋಟು	22799-38099		
ರಾಶಿ	47009-57519	ಚಾಲಿ	43280-49099		

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 26,142
ಇಂದಿನ ಅಂತ್ಯ: 26,042
ದಿನದ ಕನಿಷ್ಠ: 26,008
99

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹705
12 ಕ್ಕೆ ₹96
ಮೈಸೂರು: 100 ಕ್ಕೆ ₹706

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್‌-4 ₹179.50
ಆರ್‌ಎಸ್‌ಎಸ್‌-5 ₹174.50
ಗುಡ್ ಲಾಟ್ ₹162.50

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹455-761
ದ್ವಿತಳಿ (ಬಿ.ವಿ) ₹165-905

ಮುದ್ರೆಮನೆ ಕಾಫಿ
ಎಪಿ ₹26500
ಎಸಿ ₹14560
ಆರ್‌ಪಿ ₹16250
ಆರ್‌ಸಿ ₹9350

ಮನೆ ಮಾರಾಟ ಶೇ 14ರಷ್ಟು ಇಳಿಕೆ

ಮನೆಗಳ ಬೆಲೆ ಏರಿಕೆ, ಆರ್ಥಿಕ ಅನಿಶ್ಚಿತತೆ ಇಳಿಕೆಗೆ ಕಾರಣ: ಅನರಾಕ್ ವರದಿ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಇದುವರೆಗೆ ದೇಶದ ಏಳು ಪ್ರಮುಖ ನಗರಗಳಲ್ಲಿ ಮನೆಗಳ ಮಾರಾಟದಲ್ಲಿ ಶೇ 14ರಷ್ಟು ಇಳಿಕೆ ಆಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಸಿದ್ಧಪಡಿಸಿರುವ ವರದಿ ಶುಕ್ರವಾರ ಹೇಳಿದೆ.

2024ರಲ್ಲಿ ದೇಶದಲ್ಲಿ 4,59,645 ಮನೆಗಳು ಮಾರಾಟವಾಗಿದ್ದವು. ಈ ವರ್ಷ 3,95,625 ಮನೆಗಳು ಮಾರಾಟವಾಗಿದ್ದು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಇಳಿಕೆಯಾಗಿದೆ.



ಕಳೆದ ವರ್ಷ ಮಾರಾಟವಾದ ಮನೆಗಳು ಹಣಕಾಸಿನ ಮೌಲ್ಯದಲ್ಲಿ ₹5.68 ಲಕ್ಷ ಕೋಟಿಯಷ್ಟಾಗಿತ್ತು. ಈ ಬಾರಿ ಶೇ 6ರಷ್ಟು ಹೆಚ್ಚಳವಾಗಿ, ₹6 ಲಕ್ಷ ಕೋಟಿಯಾಗಿದೆ. ದೇಶದ ಏಳು ಪ್ರಮುಖ ನಗರಗಳನ್ನು ಒಟ್ಟಾರೆಯಾಗಿ ಪರಿಗಣಿಸಿದಾಗ ವಸತಿ ಆಸ್ತಿಗಳ ಬೆಲೆಯು ಶೇ 8ರಷ್ಟು ಹೆಚ್ಚಳ ಕಂಡಿದೆ.

> 2026ರಲ್ಲಿ ಮನೆಗಳ ಮಾರಾಟವು ರೆಪೊ ದರ ಇಳಿಕೆ ಮತ್ತು ಮನೆಗಳ ಬೆಲೆಯನ್ನು ಅವಲಂಬಿಸಿ ಇರಲಿದೆ
> **ಅನುಜ್ ಪುರಿ,** ಅಧ್ಯಕ್ಷ, ಅನರಾಕ್

'ವಸತಿ ಆಸ್ತಿಗಳ ಬೆಲೆಯಲ್ಲಿ ಏರಿಕೆ, ಮಾಹಿತಿ ತಂತ್ರಜ್ಞಾನದ ವಲಯದ ಕಂಪನಿಗಳು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿರುವುದು, ಅಮೆರಿಕದ ಹೆಚ್ಚುವರಿ ಸುಂಕವು, ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ಮತ್ತು ಇತರೆ ಆರ್ಥಿಕ ಅನಿಶ್ಚಿತತೆಯು ಮನೆಗಳ ಮಾರಾಟದ ಇಳಿಕೆಗೆ ಕಾರಣ ಆಗಿದೆ' ಎಂದು ಅನರಾಕ್‌ನ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ.

ಮುಖ್ಯಾಂಶಗಳು
- ಬೆಂಗಳೂರಿನಲ್ಲಿ 62,205 ಮನೆಗಳ ಮಾರಾಟ
- ಚೆನ್ನೈನಲ್ಲಿ ಮನೆಗಳ ಮಾರಾಟದಲ್ಲಿ ಶೇ 15ರಷ್ಟು ಏರಿಕೆ
- ಪ್ರತಿ ಚದರ ಅಡಿ ಬೆಲೆ ಶೇ 8ರಷ್ಟು ಹೆಚ್ಚಳ

ಮುಂಬೈ ಮಹಾನಗರ ಪ್ರದೇಶ (ಎಂಎಂಆರ್), ದೆಹಲಿ–ಎನ್‌ಸಿಆರ್, ಬೆಂಗಳೂರು, ಪುಣೆ, ಕೋಲ್ಕತ್ತ ಮತ್ತು ಹೈದರಾಬಾದ್‌ನಲ್ಲಿ ಮನೆಗಳ ಮಾರಾಟದಲ್ಲಿ ಕಡಿಮೆ ಆಗಿದೆ. ಆದರೆ, ಚೆನ್ನೈನಲ್ಲಿ ಮಾತ್ರ ಮನೆಗಳಿಗೆ ಬೇಡಿಕೆ ಹೆಚ್ಚಳವಾಗಿದೆ.

ಹೈದರಾಬಾದ್‌ನಲ್ಲಿ ಮನೆಗಳ ಮಾರಾಟದಲ್ಲಿ ಶೇ 23ರಷ್ಟು ಇಳಿಕೆಯಾಗಿದ್ದು, 44,885 ಮನೆಗಳು ಮಾರಾಟವಾಗಿವೆ. ಕಳೆದ ವರ್ಷ 58,540 ಮನೆಗಳು ಮಾರಾಟವಾಗಿದ್ದವು. ಪುಣೆಯಲ್ಲಿ ಶೇ 20ರಷ್ಟು (65,135), ಮುಂಬೈ ಮಹಾನಗರ ಪ್ರದೇಶದಲ್ಲಿ ಶೇ 18ರಷ್ಟು (1,27,875), ಕೋಲ್ಕತ್ತ ಶೇ 12ರಷ್ಟು (16,125) ದೆಹಲಿ–ಎನ್‌ಸಿಆರ್ ಶೇ 8ರಷ್ಟು (57,220) ಮನೆಗಳ ಮಾರಾಟದಲ್ಲಿ ಕಡಿಮೆ ಆಗಿದ್ದರೆ, ಬೆಂಗಳೂರಿನಲ್ಲಿ ಮನೆಗಳ ಮಾರಾಟದಲ್ಲಿ ಶೇ 5ರಷ್ಟು ಇಳಿಕೆಯಾಗಿದೆ. ಕಳೆದ ವರ್ಷ 65,225 ಮನೆಗಳು ಮಾರಾಟವಾಗಿದ್ದವು. ಈ ಬಾರಿ 62,205 ಮನೆಗಳು ಮಾರಾಟವಾಗಿವೆ.

ಆದರೆ, ಚೆನ್ನೈನಲ್ಲಿ ಮನೆಗಳ ಮಾರಾಟದಲ್ಲಿ ಶೇ 15ರಷ್ಟು ಏರಿಕೆಯಾಗಿ, 22,180 ಮನೆಗಳು ಮಾರಾಟವಾಗಿವೆ. ವಸತಿ ಆಸ್ತಿಗಳ ಸರಾಸರಿ ಬೆಲೆಯು ಕಳೆದ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಪ್ರತಿ ಚದರ ಅಡಿಗೆ ₹8,590 ಇತ್ತು. ಅದು ಈ ಬಾರಿ ಶೇ 8ರಷ್ಟು ಹೆಚ್ಚಳವಾಗಿ, ₹9,260ಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈಂಡ್)	₹1570 (1570)
ಸೋಯಾ (ರಿಫೈಂಡ್)	₹1290 (1280)
ಸೂರ್ಯಕಾಂತಿ (ರಿಫೈಂಡ್)	₹1495 (1490)
ಪಾಮೋಲಿನ್	₹1250 (1250)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಬೆಂಗಳೂರು	₹29000-33000
ಹೊಸದುರ್ಗ	₹24500-25500
ಪುತ್ತೂರು	₹5000-22500

ಮುಂಬೈ ಧಾರಣೆ (ಶೇಂಗಾ) 26-12-2025

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7700-7800
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1580 (1580)
ಒಂದು ವಾರದ ಡೆಲಿವರಿ	1575 (1575)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1425)
ಚಿನ್ನ–ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,37,700 (1,36,500)
ಬೆಳ್ಳಿ ಕೆ.ಜಿಗೆ	2,28,000 (2,21,300)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

10 ಗ್ರಾಂ ಚಿನ್ನ ದರ ₹1.42 ಲಕ್ಷ, ಕೆ.ಜಿ ಬೆಳ್ಳಿ ₹2.36 ಲಕ್ಷ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆ ಆಗಿವೆ.



ಬೆಳ್ಳಿ ಧಾರಣೆಯು ಕೆ.ಜಿಗೆ ₹9,350 ಹೆಚ್ಚಳವಾಗಿ, ₹2,36,350ರಂತೆ ಮಾರಾಟವಾಗಿದೆ. ಡಿಸೆಂಬರ್ 19ರಿಂದ ನಾಲ್ಕು ದಿನದ ವಹಿವಾಟಿನಲ್ಲಿ ಬೆಳ್ಳಿ ದರವು ₹32,250 (ಶೇ 15.8ರಷ್ಟು) ಏರಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,500 ಹೆಚ್ಚಳವಾಗಿ, ₹1,42,300ಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ. ಕಳೆದ ವರ್ಷದ ಡಿಸೆಂಬರ್ 31ರಿಂದ ಇಲ್ಲಿವರೆಗೆ ಬೆಳ್ಳಿ ದರದಲ್ಲಿ ₹1,46,650 (ಶೇ 163ರಷ್ಟು) ಮತ್ತು ಚಿನ್ನದ ಬೆಲೆಯಲ್ಲಿ ₹63,350 (ಶೇ 80ರಷ್ಟು) ಜಿಗಿತವಾಗಿದೆ.

ಅಮೆರಿಕದ ಫೆಡರಲ್ ರಿಸರ್ವ್ ಬಡ್ಡಿ ದರ ಕಡಿತಗೊಳಿಸುವ ನಿರೀಕ್ಷೆಯಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನ ಮತ್ತು ಬೆಳ್ಳಿಯಲ್ಲಿ ಹೂಡಿಕೆ ಮಾಡಲು ಮುಂದಾದರು. ಇದೇ ಬೆಲೆ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ಬೆಳ್ಳಿ ದಾಸ್ತಾನು ಸೀಮಿತವಾಗಿರುವುದರಿಂದ ಪೂರೈಕೆಯಲ್ಲಿ ಕೊರತೆ ಉಂಟಾಗಿದೆ. ಜೊತೆಗೆ ಕೈಗಾರಿಕೆಗಳಲ್ಲಿ ಬೆಳ್ಳಿಗೆ ಹೆಚ್ಚಿದ ಬೇಡಿಕೆ ಸಹ ಬೆಲೆ ಏರಿಕೆಗೆ ಕಾರಣವಾಗಿದೆ ಎಂದು ಹೇಳಿದ್ದಾರೆ.

'ಬಾಂಗ್ಲಾ ಪ್ರವಾಸಿಗರಿಗೆ ವಸತಿ ಸೌಕರ್ಯ ಬಂದ್'

ಕೋಲ್ಕತ್ತ (ಪಿಟಿಐ): ನೆರೆಯ ಬಾಂಗ್ಲಾದೇಶದಲ್ಲಿ ರಾಜಕೀಯ ಪ್ರಕ್ಷುಬ್ಧತೆ ತಲೆದೋರಿರುವುದರಿಂದ ಸಿಲಿಗುರಿ ಸುತ್ತಮುತ್ತ ಬಾಂಗ್ಲಾ ಪ್ರಜೆಗಳಿಗೆ ವಸತಿ ಸೌಕರ್ಯವನ್ನು ತಾತ್ಕಾಲಿಕವಾಗಿ ನಿಲ್ಲಿಸಲು ಪಶ್ಚಿಮ ಬಂಗಾಳದ ಹೋಟೆಲ್ ಉದ್ಯಮಿಗಳ ಸಂಘ ನಿರ್ಧರಿಸಿದೆ.

'ಭಾರತ–ಬಾಂಗ್ಲಾದೇಶದ ಸಂಬಂಧ ಹದಗೆಡಿಸುವಂತಹ ಘಟನೆಗಳು ಇತ್ತೀಚೆಗೆ ಸಂಭವಿಸಿವೆ. ಬಾಂಗ್ಲಾದೇಶದಲ್ಲಿ ಭಾರತದ ಧ್ವಜಕ್ಕೆ ಅಗೌರವ ತೋರಲಾಗಿದೆ. ಕೆಲವರು ಪ್ರಚೋದನಕಾರಿ ಹೇಳಿಕೆಗಳನ್ನು ನೀಡಿದ್ದಾರೆ. ಇಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿ ಪ್ರವಾಸಿಗರು ಮತ್ತು ಹೋಟೆಲ್ ಸಿಬ್ಬಂದಿಯ ಸುರಕ್ಷತೆ, ಯೋಗಕ್ಷೇಮವನ್ನು ಖಚಿತಪಡಿಸಿ ಕೊಳ್ಳುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಗ್ರೇಟರ್ ಸಿಲಿಗುರಿ ಹೋಟೆಲ್ ಮಾಲೀಕರ ಕಲ್ಯಾಣ ಸಂಘ ತಿಳಿಸಿದೆ.

'ಮುಂದಿನ ಆದೇಶ ಬರುವವರೆಗೂ ಸಂಘದ ಸದಸ್ಯರು ಬಾಂಗ್ಲಾ ಪ್ರಜೆಗಳಿಗೆ ಚೆಕ್–ಇನ್ ಮಾಡಲು ಅವಕಾಶ ನೀಡುವುದಿಲ್ಲ. ಸಿಲಿಗುರಿ ಮತ್ತು ಸುತ್ತಮುತ್ತ 180ಕ್ಕೂ ಹೆಚ್ಚಿನ ಹೋಟೆಲ್‌ಗಳು ಸಂಘದ ಸದಸ್ಯತ್ವ ಹೊಂದಿವೆ. ಸಂಘದ ಸದಸ್ಯರಲ್ಲದ 50 ಹೋಟೆಲ್‌ಗಳು ಸ್ವಯಂಪ್ರೇರಣೆಯಿಂದ ಈ ನಿರ್ಬಂಧವನ್ನು ಪಾಲಿಸಲು ಮುಂದಾಗಿವೆ' ಎಂದು ಸಂಘದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಉತ್ತರ ಬಂಗಾಳದ ಅಂತರ-ರಾಷ್ಟ್ರೀಯ ಗಡಿ ಮತ್ತು ಭಾರತದ ಮುಖ್ಯ ಭೂಭಾಗವನ್ನು ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕಿಸುವ ಸಿಲಿಗುರಿ ಕಾರಿಡಾರ್, ಪ್ರವಾಸಿ, ವೈದ್ಯಕೀಯ ಮತ್ತು ವಿದ್ಯಾರ್ಥಿ ವೀಸಾದಡಿ ಭಾರತಕ್ಕೆ ಬರುವ ಬಾಂಗ್ಲಾ ಪ್ರಜೆಗಳಿಗೆ ಪ್ರಮುಖ ಪ್ರವೇಶ ಸ್ಥಳವಾಗಿದೆ.



'ಬಾಂಗ್ಲಾದೇಶದ ಪ್ರಜೆಗಳಿಗೆ ವಾಸ್ತವ್ಯ ಹೂಡಲು ಅವಕಾಶವಿಲ್ಲ' ಎಂಬ ಬರಹವನ್ನು ಪಶ್ಚಿಮ ಬಂಗಾಳದ ಸಿಲಿಗುರಿಯ ಹೋಟೆಲ್‌ವೊಂದರಲ್ಲಿ ಅಂಟಿಸಲಾಗಿತ್ತು –ಪಿಟಿಐ ಚಿತ್ರ

ಹಿಂದೂ ಹತ್ಯೆ: ಕಳವಳ

ಒಂದನೇ ಪುಟದಿಂದ...

'ಬಾಂಗ್ಲಾದೇಶದ ಮೈಮೆನ್ಸಿಂಗ್‌ನಲ್ಲಿ ಇತ್ತೀಚೆಗೆ ನಡೆದ ಹಿಂದೂ ಯುವಕ ದೀಪು ಚಂದ್ರದಾಸ್ ಅವರ ಭೀಕರ ಹತ್ಯೆಯನ್ನು ಖಂಡಿಸಿರುವ ಜೈಸ್ವಾಲ್, 'ಈ ಕೃತ್ಯದಲ್ಲಿ ಭಾಗಿಯಾಗಿರುವ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು' ಎಂದು ಒತ್ತಾಯಿಸಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ಈಗಾಗಲೇ 12 ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಬಾಂಗ್ಲಾದೇಶ ಹೇಳಿದೆ.

ಶೇಖ್ ಹಸೀನಾ ನೇತೃತ್ವದ ಅವಾಮಿ ಲೀಗ್ ಸರ್ಕಾರದ ವಿರುದ್ಧ ನಡೆದ ಹೋರಾಟದಲ್ಲಿ ಶರೀಫ್ ಉಸ್ಮಾನ್ ಹಾದಿ (32) ಹತ್ಯೆಯಾದ ಬೆನ್ನಲ್ಲೇ, ಬಾಂಗ್ಲಾದಲ್ಲಿ ಹೊಸ ರಾಜಕೀಯ ಸಂಚಲನ ಸೃಷ್ಟಿಯಾಗಿದೆ. ಶರೀಫ್ ಹತ್ಯೆಗೆ ಸಂಬಂಧಿಸಿದಂತೆ ಭಾರತಕ್ಕೆ ಸಂಬಂಧ ಕಲ್ಪಿಸುವುದನ್ನು ವಿದೇಶಾಂಗ ಸಚಿವಾಲಯ ತಳ್ಳಿಹಾಕಿದೆ. ಬಾಂಗ್ಲಾ ವಿಷಯದಲ್ಲಿ ಭಾರತದ ಬಗೆಗಿನ ಸುಳ್ಳು ನಿರೂಪಣೆಗಳನ್ನು ನಿರಾಕರಿಸುವುದಾಗಿ ಜೈಸ್ವಾಲ್ ಹೇಳಿದ್ದಾರೆ.

'ಉಸ್ಮಾನ್ ಹಾದಿ ಸಾವಿಗೆ ನ್ಯಾಯ ಕಲ್ಪಿಸಿ'

ಢಾಕಾ/ನವದೆಹಲಿ (ಪಿಟಿಐ): 'ಇನ್‌ಕ್ವಿಲಾಬ್ ಮಂಚ್' ಸಂಘಟನೆಯ ನಾಯಕ ಶರೀಫ್ ಉಸ್ಮಾನ್ ಹಾದಿ ಅವರ ಸಾವಿಗೆ ನ್ಯಾಯ ಒದಗಿಸಬೇಕು. ಕೊಲೆಗೆ ಕಾರಣರಾದವರಿಗೆ ಕಠಿಣ ಶಿಕ್ಷೆ ವಿಧಿಸಬೇಕು' ಎಂದು ಒತ್ತಾಯಿಸಿ ಸಂಘಟನೆಯ ಕಾರ್ಯಕರ್ತರು ಢಾಕಾದ ಅತ್ಯಂತ ಜನನಿಬಿಡ ಪ್ರದೇಶದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

'ಇನ್‌ಕ್ವಿಲಾಬ್ ಮಂಚ್' ಮತ್ತು 'ಜುಲೈ ಮಂಚ್'ನ ನಾಯಕರು, ಬೆಂಬಲಿಗರು, ವಿದ್ಯಾರ್ಥಿಗಳು ಶುಕ್ರವಾರದ ಪ್ರಾರ್ಥನೆಯ ನಂತರ, ಢಾಕಾ ವಿಶ್ವವಿದ್ಯಾಲಯದ ಕೇಂದ್ರ ಮಸೀದಿಯಿಂದ ಪ್ರತಿಭಟನಾ ಮೆರವಣಿಗೆ ನಡೆಸಿದರು. ಶಹಬಾಗ್ ಜಂಕ್ಷನ್‌ನಲ್ಲಿ ರಸ್ತೆತಡೆ ನಡೆಸಿ ಪ್ರತಿಭಟನೆ ನಡೆಸಿದರು.

'ಹಾದಿ ಹತ್ಯೆಗೆ ನ್ಯಾಯ ಸಿಗುವವರೆಗೂ ಹೋರಾಟ ಹಾಗೂ ಮುತ್ತಿಗೆ ಹಾಕುವುದನ್ನು ಮುಂದುವರಿಸುತ್ತೇವೆ. ಇಂದಿನಿಂದ, ನಾವು ಈ ಶಹಬಾಗ್ ಅನ್ನು 'ಶಹೀದ್ ಉಸ್ಮಾನ್ ಹಾದಿ ಛತ್ತರ್' ಎಂದು ಘೋಷಿಸುತ್ತೇವೆ. ಹಾದಿ ಹತ್ಯೆಗೆ ನ್ಯಾಯ ಸಿಗುವವರೆಗೂ ಚಳವಳಿಯನ್ನು ನಿಲ್ಲಿಸುವುದಿಲ್ಲ' ಎಂದು 'ಇನ್‌ಕ್ವಿಲಾಬ್ ಮಂಚ್'ನ ಸದಸ್ಯ ಕಾರ್ಯದರ್ಶಿ ಅಬ್ದುಲ್ಲಾ ಅಲ್ ಜಾಬರ್ ತಿಳಿಸಿದರು.

ಅಗರಬತ್ತಿಗೆ ಬಿಐಎಸ್ ಮಾನದಂಡ

ನವದೆಹಲಿ (ಪಿಟಿಐ): ಅಗರಬತ್ತಿ ತಯಾರಿಕೆ ಮತ್ತು ರಫ್ತಿನಲ್ಲಿ ಭಾರತವು ವಿಶ್ವದಲ್ಲೇ ಮುಂಚೂಣಿಯಲ್ಲಿದ್ದು, ಭಾರತೀಯ ಮಾಪನ ಸಂಸ್ಥೆಯು (ಬಿಐಎಸ್), ಅಗರಬತ್ತಿ ಉದ್ಯಮಕ್ಕೆ ಹೊಸ ಮಾನದಂಡಗಳನ್ನು ನಿಗದಿಪಡಿಸಿದೆ.

ಅಂತರರಾಷ್ಟ್ರೀಯ ಗುಣಮಟ್ಟ ಕಾಯ್ದುಕೊಳ್ಳುವುದು, ಗ್ರಾಹಕರ ಸುರಕ್ಷತೆ ಖಾತರಿಪಡಿಸುವುದು ಮತ್ತು ಅಗರಬತ್ತಿ ತಯಾರಿಕೆಯಲ್ಲಿ ಕೆಲವು ರಾಸಾಯನಿಕಗಳ ಬಳಕೆಯನ್ನು ನಿಷೇಧಿಸಿ ಹೊಸ ಮಾನದಂಡ 'ಐಎಸ್ 19412:2025' ರೂಪಿಸಲಾಗಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯವು ತಿಳಿಸಿದೆ.

ಹೊಸ ಮಾನದಂಡವು, ಗ್ರಾಹಕರಿಗೆ ಗುಣಮಟ್ಟದ ಅಗರಬತ್ತಿ ಆಯ್ಕೆಗೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಮಾರುಕಟ್ಟೆ ವಿಸ್ತರಣೆಗೆ ನೆರವು ನೀಡಲಿದೆ ಎಂದು ಸಚಿವಾಲಯ ಹೇಳಿದೆ.



'ಬಿಐಎಸ್' ಅಗರಬತ್ತಿಗಳು ಅಥವಾ ಧೂಪದ್ರವ್ಯ ತಯಾರಿಕೆಯಲ್ಲಿ ಬಳಸಲು ನಿಷೇಧಿಸಲಾದ ವಸ್ತುಗಳನ್ನು ಪಟ್ಟಿ ಮಾಡಿದೆ. ಇದರಲ್ಲಿ ಅಲೆಥ್ರಿನ್, ಪರ್ಮೆಥ್ರಿನ್, ಸೈಪರ್ಮೆಥ್ರಿನ್, ಡೆಲ್ಟಾಮೆಥ್ರಿನ್ ಮತ್ತು ಫಿಪ್ರೊನಿಲ್ ನಂತಹ ಕೆಲವು ಕೀಟನಾಶಕ ರಾಸಾಯನಿಕಗಳು ಹಾಗೂ ಬೆಂಜೈಲ್ ಸೈನೈಡ್, ಈಥೈಲ್ ಅಕ್ರಿಲೇಟ್ ಮತ್ತು ಡೈಫೆನಿಲಮೈನ್ ಸಹ ಸೇರಿವೆ.

ಮಾನವನ ಆರೋಗ್ಯ, ವಾಯುವಿನ ಗುಣಮಟ್ಟ ಮತ್ತು ಪರಿಸರ ಸುರಕ್ಷತೆಯ ಮೇಲೆ ಇವು ಪರಿಣಾಮ ಬೀರುವುದರಿಂದ ಇವುಗಳಲ್ಲಿ ಹಲವು ವಸ್ತುಗಳನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ನಿರ್ಬಂಧಿಸಲಾಗಿದೆ ಎಂದು ತಿಳಿಸಿದೆ.

ಈ ಕ್ರಮವು ಗ್ರಾಹಕರಲ್ಲಿ ವಿಶ್ವಾಸವನ್ನು ಹೆಚ್ಚಿಸುವುದಲ್ಲದೆ, ತಯಾರಿಕ ಘಟಕಗಳು ನೈತಿಕ ಮತ್ತು ಸುಸ್ಥಿರ ತಯಾರಿಕಾ ಚಟುವಟಿಕೆ ಅನುಸರಿಸುವಂತೆ ಮಾಡಲಿವೆ ಎಂದು ತಿಳಿಸಿದೆ.

150 ದೇಶಕ್ಕೆ ರಫ್ತು

ಭಾರತದ ಅಗರಬತ್ತಿ ಉದ್ಯಮದ ವಾರ್ಷಿಕ ವಹಿವಾಟು ₹8 ಸಾವಿರ ಕೋಟಿಯಷ್ಟಿದೆ. ಈ ಪೈಕಿ ₹1,200 ಕೋಟಿ ಮೌಲ್ಯದಷ್ಟು ಅಗರಬತ್ತಿಗಳನ್ನು 150ಕ್ಕೂ ಹೆಚ್ಚು ದೇಶಗಳಿಗೆ ಭಾರತ ರಫ್ತು ಮಾಡಲಾಗುತ್ತದೆ. ಅಮೆರಿಕ, ಮಲೇಷ್ಯಾ, ನೈಜೀರಿಯಾ, ಬ್ರೆಜಿಲ್ ಮತ್ತು ಮೆಕ್ಸಿಕೊ ಭಾರತದ ಅಗರಬತ್ತಿಯ ಪ್ರಮುಖ ಮಾರುಕಟ್ಟೆಗಳಾಗಿವೆ.

8 ಗಂಟೆ ಕಾದರೂ ಸಿಗದ ಚಿಕಿತ್ಸೆ: ಭಾರತೀಯ ಸಾವು

ಟೊರೊಂಟೊ (ಪಿಟಿಐ): ತೀವ್ರ ಎದೆನೋವಿನಿಂದ ಆಸ್ಪತ್ರೆಗೆ ದಾಖಲಾಗಿದ್ದ ಭಾರತೀಯ ಸಂಜಾತ ಪ್ರಶಾಂತ್ ಶ್ರೀಕುಮಾರ್ (44) ಎಂಬವರು ಎಂಟು ಗಂಟೆ ಕಾದರೂ ಚಿಕಿತ್ಸೆ ದೊರೆಯದೆ ಹೃದಯ ಸ್ತಂಭನದಿಂದ ಮೃತಪಟ್ಟಿದ್ದಾರೆ.

ಡಿ.22ರಂದು ಕೆಲಸ ನಿರ್ವಹಿಸುತ್ತಿದ್ದಾಗ ಎದೆನೋವು ಕಾಣಿಸಿಕೊಂಡಿದ್ದು, ಅವರನ್ನು ಕೆನಡಾದ ಆಗ್ನೇಯ ಎಡ್ಮಂಟನ್‌ನಲ್ಲಿರುವ ಗ್ರೇ ನನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು ಎಂದು 'ಗ್ಲೋಬಲ್ ನ್ಯೂಸ್' ಬುಧವಾರ ವರದಿ ಮಾಡಿದೆ.

ಭಾರತೀಯ ವಿದ್ಯಾರ್ಥಿಯ ಗುಂಡಿಕ್ಕಿ ಹತ್ಯೆ


ಟೊರೊಂಟೊ (ಪಿಟಿಐ): ಕೆನಡಾದ ಟೊರೊಂಟೊ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಭಾರತೀಯ ಮೂಲದ 20 ವರ್ಷದ ವೈದ್ಯ ವಿದ್ಯಾರ್ಥಿಯನ್ನು ಮಂಗಳವಾರ ಗುಂಡಿಕ್ಕಿ ಹತ್ಯೆ ಮಾಡಲಾಗಿದೆ.

'ಸಂತ್ರಸ್ತ ವ್ಯಕ್ತಿಯನ್ನು ಶಿವಾಂಕ್ ಅವಸ್ಥಿ ಎಂದು ಗುರುತಿಸಲಾಗಿದೆ. ಘಟನೆ ಸಂಬಂಧ ಕೊಲೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸುತ್ತಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದರು.

'ಮಂಗಳವಾರ ಮಧ್ಯಾಹ್ನ 3.30ರ ಸುಮಾರಿಗೆ ಗುಂಡಿನ ದಾಳಿ ನಡೆದಿದೆ. ಪೊಲೀಸರು ಸ್ಥಳಕ್ಕೆ ಧಾವಿಸುವ ವೇಳೆಗಾಗಲೇ ತೀವ್ರ ಗಾಯಗೊಂಡಿದ್ದ ಸಂತ್ರಸ್ತ ಮೃತಪಟ್ಟಿದ್ದರು' ಎಂದು ಇನ್‌ಸ್ಪೆಕ್ಟರ್ ಜೆಫ್ ಅಲ್ಲಿಂಗ್ಟನ್ ತಿಳಿಸಿದ್ದಾರೆ.

'ಪೊಲೀಸರು ಸ್ಥಳಕ್ಕೆ ಧಾವಿಸುವ ಮೊದಲೇ ಶಂಕಿತ ಪರಾರಿಯಾಗಿದ್ದ. ಸ್ಥಳದಲ್ಲಿದ್ದ ಸಾಕ್ಷ್ಯಗಳನ್ನು ಕಲೆಹಾಕಲಾಗಿದೆ' ಎಂದು ಜೆಫ್ ತಿಳಿಸಿದ್ದಾರೆ.

ಭಾರತ ಕಳವಳ: ವಿದ್ಯಾರ್ಥಿಗಳನ್ನು ಗುರಿಯಾಗಿಸಿ ಕೊಲೆಗೈಯುತ್ತಿರುವ ಪ್ರಕರಣಗಳ ಬಗ್ಗೆ ಟೊರೊಂಟೊದ ಭಾರತೀಯ ಕಾನ್ಸುಲೇಟ್ ಕಚೇರಿ ಕಳವಳ ವ್ಯಕ್ತಪಡಿಸಿದೆ. 'ಭಾರತೀಯ ವೈದ್ಯ ವಿದ್ಯಾರ್ಥಿ ಶಿವಾಂಕ್ ಅವಸ್ಥಿ ಸಾವು ತೀವ್ರ ನೋವು ತಂದಿದೆ. ಇಂಥ ಸಂದಿಗ್ಧ ಸಂದರ್ಭದಲ್ಲಿ ಮೃತರ ಕುಟುಂಬಸ್ಥರೊಂದಿಗೆ ಕಾನ್ಸುಲೇಟ್ ಕಚೇರಿಯು ಸಂಪರ್ಕದಲ್ಲಿದೆ ಮತ್ತು ಅಗತ್ಯ ನೆರವು ನೀಡುತ್ತಿದೆ' ಎಂದು 'ಎಕ್ಸ್'ನಲ್ಲಿ ತಿಳಿಸಿದೆ.


ದೇವರಾಜ್

‘ಚಂದ್ರಗಿರಿ’ಯಲ್ಲಿ ದೇವರಾಜ್

ನಟ ದೇವರಾಜ್ ಬಹಳ ಕಾಲದ ನಂತರ ಮತ್ತೆ ನಾಯಕ ನಟರಾಗಿ ಬಣ್ಣ ಹಚ್ಚುತ್ತಿದ್ದಾರೆ. ಅವರ ನಟನೆಯ ಹಾರರ್, ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ‘ಚಂದ್ರಗಿರಿ’ ಚಿತ್ರ ಸೆಟ್ಟೇರಲು ಸಜ್ಜಾಗಿದೆ. ರಾಜೀವ್ ಕೃಷ್ಣ ಕಥೆ, ಚಿತ್ರಕಥೆ, ಬರೆದು ನಿರ್ದೇಶಿಸುತ್ತಿದ್ದಾರೆ.

‘ದೈವ ಮತ್ತು ಆತ್ಮದ ನಡುವಿನ ಹೋರಾಟದ ಕಥೆ ಈ ಚಿತ್ರದಲ್ಲಿದೆ. ಪ್ರತಿ ಅಮಾವಾಸ್ಯೆಯ ದಿನ ಕಾಣಿಸಿಕೊಳ್ಳುವ ಎರಡು ಶವಗಳು ಮತ್ತು ಚಂದ್ರಗಿರಿ ಊರಿನ ಬೀದಿ ಬೀದಿಗಳಲ್ಲಿ ರಕ್ತದ ಕಲೆಗಳನ್ನು ಹುಡುಕಿಕೊಂಡು ಹೋಗುವ ಕಥೆ. ಇತ್ತೀಚೆಗಷ್ಟೇ ಚಿತ್ರದ ಹಾಡುಗಳ ಧ್ವನಿಮುದ್ರಣ ಕಾರ್ಯ ಮುಗಿದಿದ್ದು, ಮೂರು ಹಾಡುಗಳಿಗೆ ಅನಿರುದ್ಧ ಶಾಸ್ತ್ರಿ, ಕಾರುಣ್ಯ ಮತ್ತು ಶ್ರೀಕೃಷ್ಣ ಧ್ವನಿಯಾಗಿದ್ದಾರೆ. ಜ.8ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ’ ಎಂದರು ನಿರ್ದೇಶಕ.

ಶಿಲ್ಪಾಶ್ರೀ ಪಿಕ್ಚರ್ಸ್ ಅರ್ಪಿಸಿ, ಸ್ನೇಹಾಲಯಂ ಕ್ರಿಯೇಷನ್ಸ್ ಲಾಂಛನದಲ್ಲಿ ಶಿಲ್ಪಾ ಶ್ರೀನಿವಾಸ್ ಬಂಡವಾಳ ಹೂಡುತ್ತಿದ್ದಾರೆ. ಚಿಕ್ಕಬಳ್ಳಾಪುರ, ಹೊಸಕೋಟೆ ಸುತ್ತಮುತ್ತ ಚಿತ್ರೀಕರಣ ನಡೆಸಲು ತಂಡ ಆಲೋಚಿಸಿದೆ. ಈ ಚಿತ್ರದಲ್ಲಿ ಬಾಹುಬಲಿ ಖ್ಯಾತಿಯ ಕಾಲಕೇಯ ಪ್ರಭಾಕರ್, ಶೋಭರಾಜ್, ಪ್ರಿಯ ಮುಂತಾದವರು ನಟಿಸುತ್ತಿದ್ದಾರೆ. ಪ್ರಮೋದ್ ಭಾರತೀಯ ಛಾಯಾಚಿತ್ರಗ್ರಹಣ, ಎಂ.ಎಲ್.ರಾಜ ಸಂಗೀತ, ಆರ್. ಕೆ.ಗಾಂಧಿ ಸಾಹಿತ್ಯ, ವಿನಯ್ ಜಿ. ಆಲೂರು ಸಂಕಲನವಿದೆ.


ರಶ್ಮಿಕಾ ಮಂದಣ್ಣ

‘ಮೈಸಾ’ ಫಸ್ಟ್‌ಲುಕ್ ಬಿಡುಗಡೆ

ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಅಭಿನಯದ ‘ಮೈಸಾ’ ಸಿನಿಮಾದ ಫಸ್ಟ್‌ಗ್ಲಿಮ್ಸ್ ಬಿಡುಗಡೆಯಾಗಿದೆ. ಹಿಂದೆಂದೂ ಕಾಣಿಸಿಕೊಳ್ಳದ ಪಾತ್ರದ ಮುಖಾಂತರ ರಶ್ಮಿಕಾ ಪ್ರೇಕ್ಷಕರೆದುರಿಗೆ ಬರಲಿದ್ದಾರೆ.

ರವೀಂದ್ರ ಪುಲ್ಲೆ ನಿರ್ದೇಶನದ ಈ ಸಿನಿಮಾ ಪ್ಯಾನ್ ಇಂಡಿಯಾ ಮಟ್ಟದಲ್ಲಿ ಬಿಡುಗಡೆ ಆಗಲಿದೆ. ರವೀಂದ್ರ ಅವರ ಚೊಚ್ಚಲ ಸಿನಿಮಾ ಇದಾಗಿದೆ. ಅನ್‌ಫಾರ್ಮ್ಯುಲಾ ಫಿಲ್ಮ್ಸ್ ಈ ಸಿನಿಮಾ ನಿರ್ಮಾಣ ಮಾಡುತ್ತಿದೆ. ಇದು ದೊಡ್ಡ ಬಜೆಟ್‌ನ ಸಿನಿಮಾವಾಗಿದೆ.

ಕಮರ್ಷಿಯಲ್ ಸಿನಿಮಾಗಳಲ್ಲಿ ನಟಿಸಿ ಸೈ ಎನ್ನಿಸಿಕೊಂಡಿರುವ ರಶ್ಮಿಕಾ ಈ ಬಾರಿ ಭಿನ್ನವಾದ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ‘ಮೈಸಾ’ ಗೊಂಡ್ ಸಮುದಾಯದ ಮಹಿಳಾ ನಾಯಕಿಯ ಕಥೆಯನ್ನೊಳಗೊಂಡಿದೆ. ಆಕೆಯನ್ನು ಅತ್ಯಂತ ಬಲಿಷ್ಠ, ಉಗ್ರ ಮತ್ತು ಭಾವನಾತ್ಮಕವಾಗಿ ತೋರಿಸುವ ಮೊದಲ ಚಲನಚಿತ್ರ ಇದಾಗಲಿದೆ ಎಂದಿದೆ ಚಿತ್ರತಂಡ. ಚಿತ್ರದಲ್ಲಿ ಈಶ್ವರಿ ರಾವ್, ಗುರು ಸೋಮಸುಂದರಂ ಮತ್ತು ರಾವ್ ರಮೇಶ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಶ್ರೇಯಾಸ್ ಪಿ.ಕೃಷ್ಣ ಛಾಯಾಚಿತ್ರಗ್ರಹಣ, ಜೇಕ್ಸ್ ಬಿಜೋಯ್ ಸಂಗೀತ ಹಾಗೂ ಆಂಡಿ ಲಾಂಗ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ಸದ್ಯ ತೆಲಂಗಾಣ ಮತ್ತು ಕೇರಳದ ಅರಣ್ಯ ಪ್ರದೇಶಗಳಲ್ಲಿ ಚಿತ್ರದ ಶೂಟಿಂಗ್ ನಡೆಯುತ್ತಿದೆ.

ಸನ್‌ಡಾನ್ಸ್ ಚಿತ್ರೋತ್ಸವದಲ್ಲಿ ‘ಪಂಕಜ’


ಅನೂಯಾ ಸ್ವಾಮಿ

ಕನ್ನಡದ ಕಿರುಚಿತ್ರ ‘ಪಂಕಜ’ ಮುಂದಿನ ವರ್ಷ ಅಮೆರಿಕದಲ್ಲಿ ನಡೆಯುವ ಸನ್‌ಡಾನ್ಸ್ ಚಿತ್ರೋತ್ಸವಕ್ಕೆ ಆಯ್ಕೆಗೊಂಡಿದೆ. ಅಮೆರಿಕದಲ್ಲಿಯೇ ಸಿನಿಮಾ ಪದವಿ ಓದುತ್ತಿರುವ ಕನ್ನಡತಿ ಅನೂಯಾ ಸ್ವಾಮಿ ಈ ಕಿರುಚಿತ್ರವನ್ನು ನಿರ್ದೇಶಿಸಿದ್ದಾರೆ.

‘ಪಂಕಜ’ ಕಿರುಚಿತ್ರವು ಆಘಾತ, ದುಃಖ ಮತ್ತು ನೈತಿಕ ಅಸ್ಪಷ್ಟತೆಯಂತಹ ಸಂಕೀರ್ಣ ವಿಷಯಗಳನ್ನು ಹೊಂದಿದೆ. ಮಹಿಳೆಯರು ಮತ್ತು ಮೈಬಣ್ಣಗಳ ಆಂತರಿಕ ಸಂಬಂಧ, ಅಳಿವಿನ ಅಂಚಿನಲ್ಲಿರುವ ಸಮುದಾಯಗಳತ್ತ ಗಮನ ಹರಿಸುತ್ತದೆ ಎಂದು ಅನೂಯಾ ಹೇಳಿದ್ದಾರೆ.

ಸನ್‌ಡಾನ್ಸ್ ಅಮೆರಿಕದಲ್ಲಿ ಅತಿದೊಡ್ಡ ಸ್ವತಂತ್ರ ಚಿತ್ರೋತ್ಸವವಾಗಿದ್ದು, 2026ರ ಜನವರಿ 22ರಿಂದ ಫೆಬ್ರುವರಿ 1ರವರೆಗೆ ಉತಾಹ್ಹ ಸಾಲ್ಟ್ ಲೇಕ್ ಸಿಟಿಯಲ್ಲಿ ನಡೆಯಲಿದೆ. ಅನೂಯಾ ಸ್ವಾಮಿ ನ್ಯೂಯಾರ್ಕ್ ವಿಶ್ವವಿದ್ಯಾಲಯದಲ್ಲಿ ಸಿನಿಮಾ ಮತ್ತು ಟಿವಿ ನಿರ್ಮಾಣದಲ್ಲಿ ಎಂ.ಎಫ್.ಎ ಪದವಿ ಓದುತ್ತಿದ್ದಾರೆ.


ಧ್ರುವ ಸರ್ಜಾ

ಏ.30ಕ್ಕೆ ‘ಕೆಡಿ’ ತೆರೆಗೆ

ಧ್ರುವ ಸರ್ಜಾ ಅಭಿನಯಿಸಿ, ‘ಜೋಗಿ’ ಪ್ರೇಮ್ ನಿರ್ದೇಶಿಸಿರುವ ಬಹುನಿರೀಕ್ಷಿತ ‘ಕೆಡಿ’ ಚಿತ್ರ ಬಿಡುಗಡೆಗೆ ಕೊನೆಗೂ ಮುಹೂರ್ತ ಕೂಡಿಬಂದಿದೆ. 2026ರ ಏಪ್ರಿಲ್ 30 ರಂದು ಚಿತ್ರ ತೆರೆಕಾಣಲಿದೆ ಎಂದು ಚಿತ್ರತಂಡ ಅಧಿಕೃತವಾಗಿ ಘೋಷಿಸಿದೆ.

ಚಿತ್ರದ ‘ಅಣ್ಣಮ್ಮ ಜೋಡಕ್ತ ಕಣೋ’ ಹಾಡು ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಜೋಗಿ ಪ್ರೇಮ್ ಅವರೇ ಈ ಹಾಡಿಗೆ ಧ್ವನಿಯಾಗಿದ್ದು, ಅರ್ಜುನ್ ಜನ್ಯ ಸಂಗೀತವಿದೆ.

‘ಕಥೆಯ ನಾಯಕ ಕಾಳಿದಾಸ ವಿರೋಧಿಗಳ ಪಡೆಯನ್ನು ಹೊಡೆದುರುಳಿಸುವುದೇ ಚಿತ್ರದ ಮುಖ್ಯಕಥೆ. ಧಾಕ್ ದೇವನಾಗಿ ಸಂಜಯ್ ದತ್ ನಟಿಸಿದ್ದಾರೆ. ಇವರು ಕಥೆಯ ಪ್ರಮುಖ ಖಳನಾಯಕ. ರವಿಚಂದ್ರನ್ ಅಣ್ಣಯ್ಯನಾಗಿ ಕಾಣಿಸಿಕೊಂಡರೆ, ರಮೇಶ್ ಅರವಿಂದ್ ಧರ್ಮನ ಪಾತ್ರದಲ್ಲಿದ್ದಾರೆ. ಮಹಾಲಕ್ಷ್ಮಿಯಾಗಿ ನಾಯಕಿ ರೀಷ್ಮಾ ನಾಣಯ್ಯ ನಟಿಸಿದ್ದು, ಸತ್ಯವತಿ ಪಾತ್ರದಲ್ಲಿ ಶಿಲ್ಪಾಶೆಟ್ಟಿ ಇದ್ದಾರೆ’ ಎಂದಿದೆ ಚಿತ್ರತಂಡ.

80 ರ ದಶಕದಲ್ಲಿ ಬೆಂಗಳೂರಿನ ರೌಡಿಸಂ ಕಥೆಯನ್ನು ಚಿತ್ರ ಹೊಂದಿದೆ. ಚಿತ್ರಕ್ಕೆ ವಿಲಿಯಂ ಡೇವಿಡ್ ಛಾಯಾಚಿತ್ರಗ್ರಹಣ, ಸಂಕೇತ್ ಆಚಾರ್ ಸಂಕಲನವಿದೆ.

20 ಸಾಧಕ ಮಕ್ಕಳಿಗೆ ಬಾಲ ಪುರಸ್ಕಾರ ಪ್ರದಾನ

ಶೌರ್ಯ, ಸಮಾಜ ಸೇವೆ ಸೇರಿ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಸಾಧನೆ

ನವದೆಹಲಿ (ಪಿಟಿಐ): ಕರ್ನಾಟಕದ ಈಬಬಾಬು ಧ್ರಿನಿಧಿ ದೇಸಾಯಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ 20 ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಶುಕ್ರವಾರ ಪ್ರದಾನ ಮಾಡಿದರು.

ಶೌರ್ಯ, ಸಮಾಜ ಸೇವೆ, ಪರಿಸರ, ಕ್ರೀಡೆ, ಕಲೆ, ಸಂಸ್ಕೃತಿ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಸಾಧನೆಗಾಗಿ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ವೀರ ಬಾಲ ದಿನದ (ಡಿಸೆಂಬರ್ 26) ಅಂಗವಾಗಿ ನವದೆಹಲಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪುರಸ್ಕಾರ ಸ್ವೀಕರಿಸಿದ ಮಕ್ಕಳನ್ನು ಅಭಿನಂದಿಸಿದರು.

‘ವಿಜೇತ ಮಕ್ಕಳು ತಮ್ಮ ಕುಟುಂಬ, ಸಮುದಾಯ ಮತ್ತು ಇಡೀ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಈ ಪ್ರಶಸ್ತಿಯು ದೇಶದ ಎಲ್ಲ ಮಕ್ಕಳಿಗೆ ಸ್ಫೂರ್ತಿಯಾಗಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಐದು ವರ್ಷದ ವಾಕಾ ಲಕ್ಷ್ಮಿ ಪ್ರಾಜ್ಞಿಕಾ ಅಂತಹ ಪ್ರತಿಭಾನ್ವಿತ ಮಕ್ಕಳಿಂದಾಗಿ ವಿಶ್ವದ ವೇದಿಕೆಗಳಲ್ಲಿ ಭಾರತವನ್ನು ‘ಚೆಸ್ ಪವರ್‌ಹೌಸ್’ ಎಂದು ಪರಿಗಣಿಸಲಾಗುತ್ತಿದೆ. ಅಜಯ್ ರಾಜ್ ಮತ್ತು ಮಹಮ್ಮದ್ ಸಿದಾನ್ ಪಿ. ತಮ್ಮ ಜಾಣ್ಮೆ ಮತ್ತು ಶೌರ್ಯದಿಂದ ಹಲವು ಜನರ ಜೀವವನ್ನು ಉಳಿಸಿದ್ದಾರೆ. ಇವರು ಎಲ್ಲ ಶ್ಲಾಘನೆಗೆ ಅರ್ಹರು’ ಎಂದು ಹೇಳಿದರು.

‘9 ವರ್ಷದ ವ್ಯೋಮ ಪ್ರಿಯಾ ಮತ್ತು 11 ವರ್ಷದ ಕಮ್ಲೇಶ್ ಕುಮಾರ್ ಜನರ ಜೀವವನ್ನು ಉಳಿಸಲು ಹೋಗಿ ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. 10 ವರ್ಷದ ಶ್ರವಣ್ ಸಿಂಗ್ ಆಪರೇಷನ್ ಸಿಂಧೂರ ಸಂದರ್ಭದಲ್ಲಿ ಅಪಾಯವನ್ನೂ ಲೆಕ್ಕಿಸದೆ ಮನೆ ಸಮೀಪ ನಿಯೋಜನೆಗೊಂಡಿದ್ದ ಭಾರತೀಯ ಸೈನಿಕರಿಗೆ ನಿತ್ಯ ನೀರು, ಹಾಲು ಮತ್ತು ಮಜ್ಜಿಗೆ ನೀಡಿದ್ದಾರೆ. ಅಂಗವಿಕಲ ಬಾಲಕಿ ಶಿವಾನಿ ಹೊಸೂರು ಉಪ್ಪಾರ ಅವರು ದೈಹಿಕ ಮತ್ತು ಆರ್ಥಿಕ ಮಿತಿಯನ್ನೂ ಲೆಕ್ಕಿಸದೆ ವಿಶ್ವ ಕ್ರೀಡೆಯಲ್ಲಿ ಸಾಧನೆ ಮಾಡಿದ್ದಾರೆ’ ಎಂದು ತಿಳಿಸಿದರು.

‘ವೈಭವ್ ಸೂರ್ಯವಂಶಿ ಕ್ರಿಕೆಟ್‌ನಲ್ಲಿ ಛಾಪು ಮೂಡಿಸಿ ಹಲವು ದಾಖಲೆ ಮಾಡಿದ್ದಾರೆ’ ಎಂದು ಹೇಳಿದರು.



ವಿವಿಧ ಕ್ಷೇತ್ರಗಳಲ್ಲಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ ಪ್ರಶಸ್ತಿಯನ್ನು ಶುಕ್ರವಾರ ಪ್ರದಾನ ಮಾಡಿದರು –ಪಿಟಿಐ ಚಿತ್ರ

ನಕ್ಸಲ್ ಪೀಡಿತ ಹಳ್ಳಿ ಹುಡುಗಿಯ ಸಾಧನೆ

ರಾಯ್‌ಪುರ/ಕೊಂಡಗಾವ್: ಛತ್ತೀಸಗಢದ ನಕ್ಸಲ್ ಪೀಡಿತ ಕೊಂಡಗಾವ್ ಜಿಲ್ಲೆಯ ಸಣ್ಣ ಗ್ರಾಮದ ಬುಡಕಟ್ಟು ಬಾಲಕಿ ಯೋಗಿತಾ ಮಾಂಡವಿ (14) ಅವರು ಬಾಲ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಸಾಮಾಜಿಕ ಸವಾಲುಗಳು ಮತ್ತು ಕೌಟುಂಬಿಕ ಸಂಕಷ್ಟದ ನಡುವೆಯೂ ಯೋಗಿತಾ ಅವರು ರಾಷ್ಟ್ರ ಮಟ್ಟದ ಜುಡೊ ಸ್ಪರ್ಧೆಗಳಲ್ಲಿ ಅಪ್ರತಿಮ ಸಾಧನೆ ತೋರಿದ್ದಾರೆ.

ಯೋಗಿತಾ ನಾಲ್ಕು ವರ್ಷದವರಿದ್ದಾಗಲೇ ತಂದೆ ಮತ್ತು ತಾಯಿಯನ್ನು ಕಳೆದುಕೊಂಡರು. ಅನಂತರ ಚಿಕ್ಕಪ್ಪ ಮತ್ತು ಚಿಕ್ಕಮ್ಮನ ನೆರಳಲ್ಲಿ ಬೆಳೆದರು. 10ನೇ ವಯಸ್ಸಿನಲ್ಲಿ ಜುಡೊ ತರಬೇತಿ ಪಡೆದು ತಮ್ಮ ಪ್ರತಿಭೆಯನ್ನು ಅನಾವರಣ ಮಾಡಿದರು.

ಮಿಜೋರಾಂ ಪುಟ್ಟ ಗಾಯಕಿಗೆ ಪ್ರಶಸ್ತಿ

ಐಜ್ವಾಲ್: ಮಿಜೋರಾಂನ ಖ್ಯಾತ ಬಾಲ ಗಾಯಕಿ ಎಸ್ತೆರ್ ಲಾಲ್ದುಹಾಮಿ ಹನಾಮ್ಟೆ ಅವರ ಸಂಗೀತ ಮತ್ತು ಸಾಂಸ್ಕೃತಿಕ ಕ್ಷೇತ್ರಕ್ಕೆ ನೀಡಿದ ಸೇವೆಯನ್ನು ಪರಿಗಣಿಸಿ ಬಾಲ ಪುರಸ್ಕಾರವನ್ನು ನೀಡಲಾಗಿದೆ.

ದಕ್ಷಿಣ ಮಿಜೋರಾಂನ ಹನಾಮ್ಟೆ ಮೂರು ವರ್ಷದವರಿದ್ದಾಗಿನಿಂದಲೇ ಚರ್ಚ್ ಮತ್ತು ಇತರ ಕಾರ್ಯಕ್ರಮಗಳಲ್ಲಿ ಹಾಡುತ್ತಿದ್ದರು.

ಎ.ಆರ್.ರೆಹಮಾನ್ ಖಾನ್ ಅವರ ‘ವಂದೇ ಮಾತರಂ’ ಗೀತೆಯಲ್ಲಿ ಹನಾಮ್ಟೆ ಅವರು ಹಾಡಿದ್ದ ವಿಡಿಯೊವನ್ನು ಮಿಜೋರಾಂನ ಮಾಜಿ ಮುಖ್ಯಮಂತ್ರಿ ಜೋರಾಮ್‌ತಂಗಾ ಅವರು ಹಂಚಿಕೊಂಡಿದ್ದರು. ಬಳಿಕ ಪ್ರಧಾನಿ ಮೋದಿ ಅವರೂ ಹಂಚಿಕೊಂಡಿದ್ದರು. 2020ರಲ್ಲಿ ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಹಂಚಿಕೆಯಾಗಿತ್ತು. ಅಲ್ಲಿಂದ ಹನಾಮ್ಟೆ ಪ್ರಖ್ಯಾತಿ ಪಡೆದರು. ನಂತರ ಅವರ ಪ್ರತಿ ವಿಡಿಯೊಗಳಿಗೂ ಮೆಚ್ಚುಗೆಯ ಮಹಾಪೂರವೇ ಹರಿದು ಬರುತ್ತಿದೆ.

ಕೇರಳ: ಬಿಜೆಪಿ ಮೊದಲ ಮೇಯರ್

ಪ್ರಜಾವಾಣಿ ವಾರ್ತೆ/ಪಿಟಿಐ


ತಿರುವನಂತಪುರ ಮೇಯರ್ ಆಗಿ ಆಯ್ಕೆಯಾದ ವಿ.ವಿ.ರಾಜೇಶ್ ಕೈಬೀಸಿ ಸಂಭ್ರಮ ವ್ಯಕ್ತಪಡಿಸಿದರು ಪಿಟಿಐ ಚಿತ್ರ

ತಿರುವನಂತಪುರ: ಕೇರಳದಲ್ಲಿ ಇದೇ ಮೊದಲ ಬಾರಿ ಮೇಯರ್ ಹುದ್ದೆ ಬಿಜೆಪಿಗೆ ದೊರೆತಿದೆ.

ತಿರುವನಂತಪುರ ಮಹಾನಗರ ಪಾಲಿಕೆ ನೂತನ ಮೇಯರ್ ಆಗಿ ಬಿಜೆಪಿ ನಾಯಕ ವಿ.ವಿ.ರಾಜೇಶ್ ಶುಕ್ರವಾರ ಆಯ್ಕೆಯಾಗುವ ಮೂಲಕ ಇತಿಹಾಸ ಸೃಷ್ಟಿಸಿದರು.

101 ಸದಸ್ಯ ಬಲದ ಪಾಲಿಕೆಗೆ ಶುಕ್ರವಾರ ಮೇಯರ್ ಸ್ಥಾನದ ಚುನಾವಣೆ ನಡೆಯಿತು. ರಾಜೇಶ್ 51 ಮತಗಳನ್ನು ಪಡೆದರು. ಪಕ್ಷೇತರ ಅಭ್ಯರ್ಥಿಯಾಗಿ ಜಯಗಳಿಸಿದ್ದ ತಿರುವನಂತಪುರ ಪ್ರೆಸ್‌ಕ್ಲಬ್ ಕಾರ್ಯದರ್ಶಿ ಪತ್ರಕರ್ತ ರಾಧಾಕೃಷ್ಣನ್ ಎನ್‌ಡಿಎ ಅಭ್ಯರ್ಥಿಗೆ ಬೆಂಬಲಿಸಿದರು.

ಎಲ್‌ಡಿಎಫ್‌ನ ಆರ್.ಪಿ.ಶಿವಾಜಿ ಅವರಿಗೆ 29 ಮತ, ಯುಡಿಎಫ್‌ನ ಕೆ.ಎಸ್. ಶಬರಿನಾಥನ್ ಅವರಿಗೆ 17 ಮತಗಳು ಲಭಿಸಿದವು. ಯುಡಿಎಫ್‌ನ ಇಬ್ಬರ ಮತಗಳು ಅಸಿಂಧುವಾದವು.

ಬಿಜೆಪಿ 50 ವಾರ್ಡ್, ಸಿಪಿಎಂ ನೇತೃತ್ವದ ಎಲ್‌ಡಿಎಫ್ 29 ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ 19 ವಾರ್ಡ್‌ಗಳಲ್ಲಿ ಜಯಗಳಿಸಿದ್ದವು.

2017ರ ... ರಿಂದಲೂ ...

ನಾಲ್ಕು ಪಾಲಿಕೆಗಳಲ್ಲಿ ಎಲ್‌ಡಿಎಫ್: ಯುಡಿಎಫ್‌ನಿಂದ ಕೊಲ್ಲಂ ಪಾಲಿಕೆಗೆ ಎ.ಕೆ.ಹಫೀಜ್ ಮೇಯರ್ ಆದರು. ಕೊಚ್ಚಿ ಪಾಲಿಕೆಗೆ ವಿ.ಕೆ.ಮಿನಿಮೋಲ್, ತ್ರಿಶೂರ್‌ಗೆ ನಿಜಿ ಜಸ್ಟಿನ್, ಕಣ್ಣೂರು ಮೇಯರ್ ಸ್ಥಾನಕ್ಕೆ ಪಿ.ಇಂದಿರಾ ಹೆಸರು ನಿರ್ಧಾರವಾಗಿದೆ. ಕೋಯಿಕ್ಕೋಡ್‌ನಲ್ಲಿ ಯುಡಿಎಫ್ ಬಹುಮತ ಹೊಂದಿದೆ.

ಆರು ಮಹಾನಗರ ಪಾಲಿಕೆಗಳ ಪೈಕಿ ಯುಡಿಎಫ್ 4ರಲ್ಲಿ, ಎಲ್‌ಡಿಎಫ್ ಮತ್ತು ಬಿಜೆಪಿ ತಲಾ ಒಂದರಲ್ಲಿ ಗೆದ್ದಿವೆ.

21 ವರ್ಷದ ದಿಯಾ ಬಿನು ಪುಲಿಕ್ಕಂಕಂಡಮ್ ಅವರು ಪಾಲಾ ಪುರಸಭೆಗೆ ಯುಡಿಎಫ್ ಬೆಂಬಲದಿಂದ ಅಧ್ಯಕ್ಷೆಯಾಗಿ ಕೇರಳದ ಅತಿ ಕಿರಿಯ ಅಧ್ಯಕ್ಷೆ ಎನ್ನುವ ಇತಿಹಾಸ ನಿರ್ಮಿಸಿದರು. ಪಕ್ಷೇತರರಾಗಿ ಸ್ಪರ್ಧಿಸಿ ಗೆದ್ದಿದ್ದ ದಿಯಾ ಯುಡಿಎಫ್‌ಗೆ ಬೆಂಬಲ ಸೂಚಿಸಿದ್ದರು.

ಸೆಂಗರ್ ಶಿಕ್ಷೆ ಅಮಾನತು: ಮೇಲ್ಮನವಿ

ನವದೆಹಲಿ (ಪಿಟಿಐ): ಉನ್ನಾವೊ ಅತ್ಯಾಚಾರ ಪ್ರಕರಣದ ಅಪರಾಧಿ, ಬಿಜೆಪಿಯ ಉಚ್ಚಾಟಿತ ನಾಯಕ ಕುಲದೀಪ್ ಸಿಂಗ್ ಸೆಂಗರ್ ಅನುಭವಿಸುತ್ತಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿದ ದೆಹಲಿ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸಿಬಿಐ ಶುಕ್ರವಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

2017ರ ಉನ್ನಾವೊ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಹೈಕೋರ್ಟ್‌ನ ವಿಭಾಗೀಯ ಪೀಠ ನೀಡಿದ ತೀರ್ಪನ್ನು ಅಧ್ಯಯನ ಮಾಡಿದ ನಂತರ ಮೇಲ್ಮನವಿ ಸಲ್ಲಿಸುವ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದಿದ್ದಾರೆ.

ಪ್ರತಿಭಟನೆ: ಜೀವಾವಧಿ ಶಿಕ್ಷೆ ಅಮಾನತುಗೊಳಿಸಿರುವುದನ್ನು ಖಂಡಿಸಿ ಸಂತ್ರಸ್ತೆ, ಅವರ ತಾಯಿ ಮತ್ತು ಮಹಿಳಾ ಪರ ಹೋರಾಟಗಾರರು ದೆಹಲಿ ಹೈಕೋರ್ಟ್ ಮುಂದೆ ಶುಕ್ರವಾರ ಪ್ರತಿಭಟನೆ ನಡೆಸಿದರು.

‘ಅನುಮಾನಾಸ್ಪದ ವ್ಯಕ್ತಿಗಳ ನಿಯಂತ್ರಣದಲ್ಲಿ ಪಿಎಂಒ’

ನವದೆಹಲಿ: ಪ್ರಧಾನ ಮಂತ್ರಿ ಕಚೇರಿಯು (ಪಿಎಂಒ) ಅನುಮಾನಾಸ್ಪದ ವ್ಯಕ್ತಿಗಳ ನಿಯಂತ್ರಣದಲ್ಲಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ‘ಭ್ರಷ್ಟಾಚಾರ ಆರೋಪಗಳನ್ನು ಎದುರಿಸುತ್ತಿರುವ ಪ್ರಸಾರ ಭಾರತಿ ಮಾಜಿ ಅಧ್ಯಕ್ಷ ನವನೀತ್ ಸೆಹಗಲ್ ಅವರನ್ನು ಪಿಎಂಒ ಕಚೇರಿಗೆ ನೇಮಿಸಲಾಗಿದೆಯೇ ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸ್ಪಷ್ಟಪಡಿಸಬೇಕು’ ಎಂದು ಆಗ್ರಹಿಸಿದೆ.


ಪವನ್ ಖೇರಾ

‘ಇತ್ತೀಚೆಗೆ ಪ್ರಸಾರ ಭಾರತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಸೆಹಗಲ್, ಉತ್ತರ ಪ್ರದೇಶದಲ್ಲಿ ನಡೆದ ₹112 ಕೋಟಿ ಲಂಚ ಹಗರಣದ ಪ್ರಮುಖ ಪಾತ್ರದಾರಿ ಆಗಿದ್ದಾರೆ ಎಂದು ಆದಾಯ ತೆರಿಗೆ ಇಲಾಖೆ ಸಿದ್ಧಪಡಿಸಿದ ವರದಿಯಲ್ಲಿ ಉಲ್ಲೇಖಿಸಲಾಗಿದೆ’ ಎಂದು ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಅಧ್ಯಕ್ಷ ಪವನ್ ಖೇರಾ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಪಿಎಂಒ ಕಚೇರಿಯಲ್ಲಿ ಆರೋಪಗಳನ್ನು ಎದುರಿಸುತ್ತಿರುವ ಹಿರೇನ್ ಜೋಶಿ ಅವರ ಜಾಗಕ್ಕೆ ಸೆಹಗಲ್ ಅವರನ್ನು ನೇಮಿಸಲಾಗುತ್ತದೆ ಎಂಬ ವರದಿಬರುತ್ತಿದೆ. ಇದನ್ನು ಪ್ರಧಾನಿ ಖಚಿತಪಡಿಸಬೇಕು ಎಂದು ಅವರು ಒತ್ತಾಯಿಸಿದರು.

ಇದಕ್ಕೂ ಮುನ್ನ ಸಂಸದ ಪ್ರಿಯಾಂಕಾ ಗಾಂಧಿ ವಾದ್ರಾ ಅವರು, ಪಿಎಂಒ ಕಚೇರಿಯ ಕಾರ್ಯವೈಖರಿಯನ್ನು ಪ್ರಶ್ನಿಸಿದ್ದರು. ಪಿಎಂಒದಲ್ಲಿ ಕುಳಿತಿರುವ ವ್ಯಕ್ತಿಯೊಬ್ಬರು ಬಹುಕೋಟಿ ಬೆಟ್ಟಿಂಗ್ ಅಪ್ಲಿಕೇಶನ್ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದ್ದರು.

ಎಐ, ಸೈಬರ್ ಅಪರಾಧಗಳು ಕಾನೂನು ವ್ಯವಸ್ಥೆಗೆ ಸವಾಲು: ಸಿಜೆಐ

ಪಣಜಿ (ಪಿಟಿಐ): ಕೃತಕ ಬುದ್ಧಿಮತ್ತೆ (ಎಐ) ಮತ್ತು ಸೈಬರ್ ಅಪರಾಧಗಳಿಂದ ಎದುರಾಗುವ ಸವಾಲುಗಳನ್ನು ನಿಭಾಯಿಸಲು ದೇಶದಾದ್ಯಂತ ವಕೀಲರಿಗೆ ತರಬೇತಿ ನೀಡಲು ರಾಷ್ಟ್ರೀಯ ಮಟ್ಟದಲ್ಲಿ ಕಾನೂನು ಅಕಾಡೆಮಿ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಶುಕ್ರವಾರ ಪ್ರತಿಪಾದಿಸಿದರು.

ದಕ್ಷಿಣ ಗೋವಾದ ‘ಇಂಡಿಯಾ ಇಂಟರ್‌ನ್ಯಾಷನಲ್ ಯುನಿವರ್ಸಿಟಿ ಆಫ್ ಲೀಗಲ್ ಎಜುಕೇಷನ್ ಅಂಡ್ ರಿಸರ್ಚ್’ನಲ್ಲಿ ಭಾರತದ ವಕೀಲರ ಸಂಘ ಆಯೋಜಿಸಿದ್ದ ಮಧ್ಯಸ್ಥಿಕೆ ಕುರಿತ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಕೃತಕ ಬುದ್ಧಿಮತ್ತೆಯು ಕಾನೂನು ವೇದಿಕೆಗಳಿಗೆ ವಿವಿಧ ರೀತಿಯಲ್ಲಿ ನೆರವಾಗುತ್ತಿವೆ. ಇದೇ ವೇಳೆ ತಂತ್ರಜ್ಞಾನ ಬಳಸಿಕೊಂಡು ಸೈಬರ್ ಅಪರಾಧಿಗಳು ಹೊಸ ಬಗೆಯ ಅಪರಾಧಗಳನ್ನು ಕಂಡುಕೊಳ್ಳುತ್ತಿರುವ ರೀತಿಯನ್ನು ಗಮನಿಸಿದರೆ ಮುಂಬರುವ ದಿನಗಳಲ್ಲಿ ಕಾನೂನು ವ್ಯವಸ್ಥೆಗೆ ಗಂಭೀರ ಸವಾಲುಗಳು ಎದುರಾಗುತ್ತವೆ ಎಂಬುದನ್ನು ಅಂದಾಜಿಸಬಹುದು’ ಎಂದರು.

ವೃತ್ತಿಪರ ತರಬೇತಿ ಅಗತ್ಯ: ಈ ಸವಾಲುಗಳನ್ನು ಮೆಟ್ಟಿನಿಲ್ಲಲು ವಕೀಲರ ಸಂಘದ ಸದಸ್ಯರು ತಮ್ಮನ್ನು ತಾವು ಸಜ್ಜುಗೊಳಿಸಬೇಕಿದೆ. ಅದಕ್ಕಾಗಿ ಸದಸ್ಯರಿಗೆ ಅಗತ್ಯ ವೃತ್ತಿಪರ ತರಬೇತಿ ನೀಡಬೇಕಿದೆ. ಈ ಕಾರ್ಯ ನಿರ್ವಹಿಸಲು ರಾಷ್ಟ್ರ ಮಟ್ಟದಲ್ಲಿ ಕಾನೂನು ಅಕಾಡೆಮಿ ಅಗತ್ಯವಿದೆ ಎಂದು ಸಿಜೆಐ ತಿಳಿಸಿದರು.

ನ್ಯಾಯಾಲಯಗಳ ವಿಚಾರಣೆ ಸ್ವರೂಪ ಅಷ್ಟೇ ಅಲ್ಲದೆ, ವಿವಾದಗಳ ಸಮಗ್ರ ಪರಿಹಾರ ಕೇಂದ್ರವೂ ಆಗಿ ಕಾರ್ಯ ನಿರ್ವಹಿಸಬೇಕು. ಮಧ್ಯಸ್ಥಿಕೆ ಸೇರಿದಂತೆ ‘ಬಹು ಬಾಗಿಲಿನ’ ನ್ಯಾಯಾಲಯ ಪರಿಕಲ್ಪನೆಯತ್ತಲೂ ಹೊರಳಬೇಕಿದೆ ಎಂದು ಸಿಜೆಐ ಪ್ರತಿಪಾದಿಸಿದರು. ಜಿಲ್ಲಾ ನ್ಯಾಯಾಲಯಗಳಿಂದ ಸುಪ್ರೀಂ ಕೋರ್ಟ್‌ವರೆಗೆ ಎಲ್ಲ ಹಂತಗಳಲ್ಲೂ ಹೆಚ್ಚಿನ ಸಂಖ್ಯೆಯ ಮಧ್ಯವರ್ತಿಗಳ ಅವಶ್ಯಕತೆಯಿದೆ ಎಂದರು.

‘ಸಂಘಟಿತ ಅಪರಾಧದ ವಿರುದ್ಧ ನಿರಂತರ ಕಣ್ಗಾವಲು’

ನವದೆಹಲಿ (ಪಿಟಿಐ): ಸಂಘಟಿತ ಅಪರಾಧ ಜಾಲಗಳ ದತ್ತಾಂಶ (ಡೇಟಾಬೇಸ್) ವ್ಯವಸ್ಥೆ ಮತ್ತು ಶಸ್ತ್ರಾಸ್ತ್ರ ದತ್ತಾಂಶ ವ್ಯವಸ್ಥೆಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಚಾಲನೆ ನೀಡಿದರು.

ಶಸ್ತ್ರಾಸ್ತ್ರ ದತ್ತಾಂಶ ವ್ಯವಸ್ಥೆಯು ಎನ್‌ಐಎ ಕಳೆದುಹೋದ, ಲೂಟಿಯಾದ ಮತ್ತು ವಶಕ್ಕೆ ಪಡೆದ ಶಸ್ತ್ರಾಸ್ತ್ರಗಳ ಮಾಹಿತಿ ಒಳಗೊಂಡಿರಲಿದೆ. ದೇಶದಾದ್ಯಂತ ತನಿಖಾ ಸಂಸ್ಥೆಗಳ ಬಳಕೆಗೆ ಈ ಎರಡು ಡೇಟಾಬೇಸ್‌ಗಳನ್ನು ರೂಪಿಸಲಾಗಿದೆ. ಎನ್‌ಐಎ ಆಯೋಜಿಸಿದ್ದ ಭಯೋತ್ಪಾದನೆ ವಿರೋಧಿ ಸಮಾವೇಶ-2025ರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಎನ್‌ಐಎ ಪರಿಷ್ಕೃತ ಅಪರಾಧ ಕೈಪಿಡಿಯನ್ನೂ ಅನಾವರಣ ಮಾಡಿದರು.

‘ಮುಂದಿನ ದಿನಗಳಲ್ಲಿ ಸಂಘಟಿತ ಅಪರಾಧಗಳ ಮೇಲೆ 360 ಡಿಗ್ರಿಯಲ್ಲಿ ಕಣ್ಗಾವಲಿಡಲಾಗುತ್ತದೆ. ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣು ನೀತಿಯನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಈ ದತ್ತಾಂಶ ವ್ಯವಸ್ಥೆಯನ್ನು ರಚಿಸಲಾಗಿದೆ’ ಎಂದು ಅವರು ಹೇಳಿದರು.

ದೇವದತ್ತ–ಕರುಣ್ ಆಟಕ್ಕೆ ಕೇರಳ ಚಿತ್

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿ • ಕರ್ನಾಟಕ ತಂಡಕ್ಕೆ ಸತತ ಎರಡನೇ ಜಯ

ಅಹಮದಾಬಾದ್ (ಪಿಟಿಐ): ಸತತ ಎರಡನೇ ಶತಕ ಗಳಿಸಿದ ದೇವದತ್ತ ಪಡಿಕ್ಕಲ್ ಮತ್ತು ಕರುಣ್ ನಾಯರ್ ಅಂದದ ಬ್ಯಾಟಿಂಗ್ ಬಲದಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಜಯಭೇರಿ ಬಾರಿಸಿತು.


ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಟೂರ್ನಿಯ ಎ ಗುಂಪಿನ ಎರಡನೇ ಪಂದ್ಯದಲ್ಲಿ ಕರ್ನಾಟಕವು 8 ವಿಕೆಟ್‌ಗಳಿಂದ ಕೇರಳ ವಿರುದ್ಧ ಜಯಿಸಿತು. ಟೂರ್ನಿಯಲ್ಲಿ ಕರ್ನಾಟಕ ತಂಡವು ಸತತ ಎರಡನೇ ಪಂದ್ಯದಲ್ಲಿ ಗುರಿ ಬೆನ್ನಟ್ಟಿ ಗೆದ್ದಿತು.

ಟಾಸ್ ಗೆದ್ದ ಕರ್ನಾಟಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಎಡಗೈ ವೇಗಿ ಅಭಿಲಾಷ್ ಶೆಟ್ಟಿ (59ಕ್ಕೆ3) ಹಾಗೂ ಸ್ಪಿನ್ನರ್ ಶ್ರೇಯಸ್ ಗೋಪಾಲ್ (61ಕ್ಕೆ2) ಅಮೋಘ ಬೌಲಿಂಗ್ ಮಾಡಿದರು. ಕೇರಳ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 284 ರನ್ ಗಳಿಸಿತು. ತಂಡದ ಮೂರು ವಿಕೆಟ್‌ಗಳು 49 ರನ್‌ಗಳಿಗೇ ಪತನವಾಗಿದ್ದವು. ಇದರಿಂದಾಗಿ ಕೇರಳ ತಂಡವು ಸಾಧಾರಣ ಮೊತ್ತಕ್ಕೆ ಕುಸಿಯುವ ಭೀತಿ ಎದುರಿಸಿತ್ತು. ಆದರೆ, ಬಾಬಾ ಅಪರಾಜಿತ್ (71; 62ಎ, 4X8, 6X2) ಮತ್ತು ಮೊಹಮ್ಮದ್ ಅಜರುದ್ದೀನ್ (ಔಟಾಗದೇ 84; 58ಎ, 4X3, 6X4) ಅವರ ಬೀಸಾಟದಿಂದಾಗಿ ಹೋರಾಟದ ಮೊತ್ತ ಗಳಿಸಿತು. ಕೊನೆಯ ಹಂತದ ಓವರ್‌ಗಳಲ್ಲಿ ನಿಧೀಶ್ (ಅಜೇಯ 34) ಕೂಡ ಮಿಂಚಿದರು.

ಗುರಿ ಬೆನ್ನಟ್ಟಿದ ಕರ್ನಾಟಕ ತಂಡಕ್ಕೆ ಎರಡನೇ ಓವರ್‌ನಲ್ಲಿ ಆಘಾತವಾಯಿತು. ನಾಯಕ ಮಯಂಕ್ ಅಗರವಾಲ್ ವಿಕೆಟ್ ಪಡೆದ ಅಖಿಲ್ ಸ್ಕಾರಿಯಾ ಕೇರಳಕ್ಕೆ ಉತ್ತಮ ಆರಂಭ ನೀಡಿದರು. ಆದರೆ ಅವರ ಸಂತಸ ಬಹಳ ಹೊತ್ತು ಉಳಿಯಲಿಲ್ಲ. ದೇವದತ್ತ (124; 137ಎ, 4X12, 6X3) ಮತ್ತು ಕರುಣ್ ನಾಯರ್ (ಅಜೇಯ 130; 130ಎ, 4X14) ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 223 (236ಎ) ರನ್ ಸೇರಿಸಿ ಜಯವನ್ನು ಸುಲಭಗೊಳಿಸಿದರು. ಇದರಿಂದಾಗಿ ತಂಡವು 48.2 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 285 ರನ್ ಗಳಿಸಿತು. ಸ್ಮರಣ್ ರವಿಚಂದ್ರನ್ 16 ಎಸೆತಗಳಲ್ಲಿ 25 ರನ್ ಗಳಿಸಿ, ದರು.

ಟೂರ್ನಿಯ ಮೊದಲ ಪಂದ್ಯದಲ್ಲಿ ಜಾರ್ಖಂಡ್ ವಿರುದ್ಧ 413 ರನ್ ಗುರಿ ಬೆನ್ನಟ್ಟಿದ್ದ ಕರ್ನಾಟಕ ಗೆದ್ದಿತ್ತು. ಆ ಪಂದ್ಯದಲ್ಲಿಯೂ ದೇವದತ್ತ ಭರ್ಜರಿ ಶತಕ ಹೊಡೆದಿದ್ದರು. ಇಲ್ಲಿಯೂ ಮಿಂಚಿದರು. ಎಡಗೈ ಬ್ಯಾಟರ್ ದೇವದತ್ತ ಸೊಗಸಾದ ಡ್ರೈವ್, ಪಂಚ್ ಮತ್ತು ಪುಲ್‌ಗಳನ್ನು ಪ್ರದರ್ಶಿಸಿದರು. ಬೌಲರ್‌ಗಳು ಅವರ ಆಟದ ಮುಂದೆ ಬಸವಳಿದರು.

ಇನ್ನೊಂದು ಬದಿಯಲ್ಲಿ ಅನುಭವಿ ಕರುಣ್ ಕೂಡ ಅಬ್ಬರಿಸಿದರು. 100ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದರು. ಇದರಿಂದಾಗಿ ವಿಕೆಟ್ ಗಳಿಸಲು ಕೇರಳದ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ.





ಶತಕ ದಾಖಲಿಸಿದ ಕರುಣ್ ನಾಯರ್ (ಎಡ), ದೇವದತ್ತ ಪಡಿಕ್ಕಲ್ 'ಎಕ್ಸ್' ಚಿತ್ರಗಳು

ಸ್ಕೋರ್ ಕಾರ್ಡ್

ಕೇರಳ: 50 ಓವರುಗಳಲ್ಲಿ 7 ವಿಕೆಟ್‌ಗೆ 284
ಕುನ್ನುಮಲ್ ಸಿ ಶ್ರೀಜಿತ್ ಬಿ ಅಭಿಲಾಷ್ 12 (21ಎ, 4x2)
ಅಭಿಷೇಕ್ ಸಿ ಶ್ರೀಜಿತ್ ಬಿ ಅಭಿಲಾಷ್ 7 (8ಎ, 4x1)
ಇಮ್ರಾನ್ ಎಲ್‌ಬಿಡಬ್ಲ್ಯು ಬಿ ಅಭಿಲಾಷ್ 0 (1ಎ)
ಅಪರಾಜಿತ್ ಸಿ ಸ್ಮರಣ್ ಬಿ ಶ್ರೇಯಸ್ 71 (62ಎ, 4x8, 6x2)
ಅಖಿಲ್ ಸ್ಕರಿಯಾ ಸಿ ಶ್ರೀಜಿತ್ ಬಿ ವಿದ್ವತ್ 27 (60ಎ, 6x1)
ವಿಷ್ಣು ಸಿ ಶ್ರೀಶ ಬಿ ಶ್ರೇಯಸ್ 35 (37ಎ, 4x3, 6x1)
ಅಜರುದ್ದೀನ್ ಔಟಾಗದೇ 84 (58ಎ, 4x3, 6x4)
ಅಂಕಿತ್ ಸಿ ಶ್ರೀಜಿತ್ ಬಿ ಪಾಟೀಲ್ 2 (7ಎ)
ನಿಧೀಶ್ ಔಟಾಗದೇ 34 (47ಎ, 4x2, 6x1)
ಇತರೆ: 12 (ಲೆಗ್‌ಬೈ 2, ನೋಬಾಲ್ 1, ವೈಡ್ 9)
ವಿಕೆಟ್ ಪತನ: 1–12 (ಅಭಿಷೇಕ್ ಜೆ.ನಾಯರ್, 3.1), 2–12 (ಅಹಮ್ಮದ್ ಇಮ್ರಾನ್, 3.2), 3–49 (ರೋಹನ್ ಕುನ್ನುಮಲ್, 7.6), 4–126 (ಬಾಬಾ ಅಪರಾಜಿತ್, 24.1), 5–128 (ಅಖಿಲ್ ಸ್ಕರಿಯಾ, 25.5), 6–182 (ವಿಷ್ಣು ವಿನೋದ್, 34.4), 7–185 (ಅಂಕಿತ್ ಶರ್ಮಾ, 35.6).
ಬೌಲಿಂಗ್: ವಿದ್ವತ್ ಕಾವೇರಪ್ಪ 10–0–70–1; ಅಭಿಲಾಷ್ ಶೆಟ್ಟಿ 10–1–59–3; ವಿದ್ಯಾಧರ ಪಾಟೀಲ 10–0–36–1; ಶ್ರೀಶ ಎಸ್. ಆಚಾರ್ 10–0–56–0; ಶ್ರೇಯಸ್ ಗೋಪಾಲ್ 10–0–61–2.

ಕರ್ನಾಟಕ: 48.2 ಓವರುಗಳಲ್ಲಿ 2 ವಿಕೆಟ್‌ಗೆ 285
ಮಯಂಕ್ ಎಲ್‌ಬಿಡಬ್ಲ್ಯು ಬಿ ಅಖಿಲ್ 1 (7ಎ)
ಪಡಿಕ್ಕಲ್ ಸಿ ವಿಘ್ನೇಶ್ ಬಿ ನಿಧೀಶ್ 124 (137ಎ, 4x12, 6x3)
ಕರುಣ್ ಔಟಾಗದೇ 130 (130ಎ, 4x14)
ಆರ್.ಸ್ಮರಣ್ ಔಟಾಗದೇ 25 (16ಎ, 4x4)
ಇತರೆ: 5 (ಲೆಗ್ ಬೈ 1, ವೈಡ್ 4)
ವಿಕೆಟ್ ಪತನ: 1–1 (ಮಯಂಕ್, 1.2), 2–224 (ದೇವದತ್ತ ಪಡಿಕ್ಕಲ್, 40.4).
ಬೌಲಿಂಗ್: ಎಂ.ಡಿ. ನಿಧೀಶ್ 9.2–1–48–1; ಅಖಿಲ್ ಸ್ಕರಿಯಾ 7–1–44–1; ಆಸಿಎಫ್ ಕೆ.ಎಂ. 8–0–60–1; ವಿಘ್ನೇಶ್ ಪುತ್ತೂರು 10–0–48–0; ಬಾಬಾ ಅಪರಾಜಿತ್ 8–0–52–0; ಅಂಕಿತ್ ಶರ್ಮಾ 6–0–32–0.
ಪಂದ್ಯದ ಆಟಗಾರ: ಕರುಣ್ ನಾಯರ್

ಗುಜರಾತ್ ಎದುರು ಗೆದ್ದ ದೆಹಲಿ • ಪಂತ್ ಅರ್ಧಶತಕ

ಬೆಂಗಳೂರಿನಲ್ಲಿ ಕೊಹ್ಲಿ ಆಟದ ಗತ್ತು

• ಗಿರೀಶ ದೊಡ್ಡಮನಿ

ಬೆಂಗಳೂರು: ವಿರಾಟ್ ಕೊಹ್ಲಿ ಅವರು ಟೆಸ್ಟ್ ಮತ್ತು ಟಿ20 ಕ್ರಿಕೆಟ್ ಮಾದರಿಗಳಿಂದ ನಿವೃತ್ತರಾಗಿದ್ದಾರೆ. ಆದರೆ ಅವರ ರನ್ ಗಳಿಕೆಯ ಹಸಿವು ಮಾತ್ರ ಕಡಿಮೆಯಾಗಿಲ್ಲ.

37 ವರ್ಷದ ವಿರಾಟ್ ಏಕದಿನ ಕ್ರಿಕೆಟ್‌ನಲ್ಲಿ ತಮ್ಮ ಆಟವನ್ನು ಮುಂದುವರಿಸಿದ್ದಾರೆ. ಕಳೆದ ಆರು ಇನಿಂಗ್ಸ್‌ಗಳಲ್ಲಿ 50 ರನ್‌ಗಳಿಗಿಂತ ಹೆಚ್ಚಿನ ಸ್ಕೋರ್ ಗಳಿಸಿದ್ದಾರೆ. ಅದರಲ್ಲಿ ಆಸ್ಟ್ರೇಲಿಯಾ ಎದುರಿನ ಅರ್ಧಶತಕ, ದಕ್ಷಿಣ ಆಫ್ರಿಕಾ ಎದುರಿನ ಎರಡು ಶತಕಗಳು ಮತ್ತು ಒಂದು ಅರ್ಧಶತಕ ಸೇರಿವೆ. ಎರಡು ದಿನಗಳ ಹಿಂದೆ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಂಧ್ರದ ಎದುರಿನ ಶತಕ ಮತ್ತು ಶುಕ್ರವಾರ ಗುಜರಾತ್ ಎದುರಿನ 77 ರನ್‌ಗಳ ಇನಿಂಗ್ಸ್ ಕೂಡ ಮಹತ್ವದ್ದಾಗಿವೆ. ಅಂತರರಾಷ್ಟ್ರೀಯ ಮತ್ತು ದೇಶಿ ಟೂರ್ನಿಗಳಲ್ಲಿ ಅವರ ಯಶಸ್ಸಿನ 'ಓಟ' ಮುಂದುವರಿದಿದೆ.

ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿ ಎ ಗುಂಪಿನ ಎರಡನೇ ಪಂದ್ಯದಲ್ಲಿ ದೆಹಲಿ ತಂಡವು 7 ರನ್‌ಗಳಿಂದ ರೋಚಕ ಜಯ ಸಾಧಿಸಿತು.

ಟಾಸ್ ಗೆದ್ದ ಗುಜರಾತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವಿರಾಟ್ ಮತ್ತು ನಾಯಕ ರಿಷಭ್ ಪಂತ್ (70; 79ಎ, 4X8, 6X2) ಅವರ ಚೆಂದದ ಬ್ಯಾಟಿಂಗ್ ಬಲದಿಂದ ದೆಹಲಿ 50 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 254 ರನ್ ಗಳಿಸಿತು. ಅದಕ್ಕುತ್ತರವಾಗಿ ದಿಟ್ಟ ಹೋರಾಟ ಮಾಡಿದ ಗುಜರಾತ್ ತಂಡವು 47.4 ಓವರ್‌ಗಳಲ್ಲಿ 247 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಆರ್ಯ ದೇಸಾಯಿ (57; 77ಎ, 4X8, 6X2) ಹಾಗೂ ಸೌರವ್ ಚೌಹಾಣ್ (49; 43ಎ, 4X5, 6X2) ಅವರ ಬ್ಯಾಟಿಂಗ್‌ಗೆ ಗೆಲುವು ಒಲಿಯಲಿಲ್ಲ. ತಂಡದ ವಿಶಾಲ್ ಜೈಸ್ವಾಲ್ (42ಕ್ಕೆ4 ಹಾಗೂ 26 ರನ್) ಆಲ್‌ರೌಂಡ್ ಆಟವಾಡಿದರು. 41.4 ಓವರ್‌ಗಳಲ್ಲಿ ತಂಡವು 213 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿತು. ಈ ಹಂತದಿಂದ 34 ರನ್‌ಗಳ ಅಂತರದೊಳಗೆ ನಾಲ್ಕು



ಅರ್ಧಶತಕ ಸಿಡಿಸಿದ ವಿರಾಟ್ ಕೊಹ್ಲಿ ಚಿತ್ರ: ಪ್ರಶಾಂತ್ ಎಚ್‌.ಜಿ.

ವಿಕೆಟ್ ಕಳೆದುಕೊಂಡು ಸೋಲಿನತ್ತ ಸಾಗಿತು. ದೆಹಲಿ ತಂಡದ ಪ್ರಿನ್ಸ್ ಯಾದವ್ (37ಕ್ಕೆ3), ಇಶಾಂತ್ ಶರ್ಮಾ (28ಕ್ಕೆ2) ಮತ್ತು ಅರ್ಪಿತ್ ರಾಣಾ (39ಕ್ಕೆ2) ಎದುರಾಳಿಗಳನ್ನು ಕಟ್ಟಿಹಾಕಿದರು.

ಗುಜರಾತ್ ಬೌಲರ್ ಚಿಂತನ್ ಗಜ ಅವರು ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ದೆಹಲಿಯ ಆರಂಭ ಆಟಗಾರ ಪ್ರಿಯಾಂಶ್ ಆರ್ಯ ಅವರ ವಿಕೆಟ್ ಗಳಿಸಿದರು. ವಿರಾಟ್ ಕೊಹ್ಲಿ ಕ್ರೀಸ್‌ಗೆ ಬಂದರು. ಮೈದಾನದಲ್ಲಿದ್ದ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಹಾಗೂ ಕಾಂಪೌಂಡ್ ಹೊರಗಿನಿಂದ ನೋಡಲು ಸಾಹಸಪಡುತ್ತಿದ್ದ ಅಭಿಮಾನಿಗಳು ಚಪ್ಪಾಳೆ ತಟ್ಟಿ ಸ್ವಾಗತಿಸಿದರು. ಈ ದಿನವೂ ಹೆಚ್ಚು ಸಂಖ್ಯೆಯಲ್ಲಿದ್ದ ಪೊಲೀಸರು ಭದ್ರತಾ ಕಾರ್ಯ ನಿರ್ವಹಿಸಿದರು.

ಪವರ್‌ಪ್ಲೇನಲ್ಲಿ ವಿರಾಟ್ ವೇಗವಾಗಿ ರನ್ ಗಳಿಸಿದರು. 61 ಎಸೆತಗಳಲ್ಲಿ 77 ರನ್ ಗಳಿಸಿದರು. 13 ಬೌಂಡರಿ ಮತ್ತು 1 ಸಿಕ್ಸರ್ ಅದರಲ್ಲಿದ್ದವು. ಶತಕದತ್ತ ಸಾಗಿದ್ದ ಅವರು ಜೈಸ್ವಾಲ್ ಎಸೆತದಲ್ಲಿ ಮುನ್ನುಗ್ಗಿ ಹೊಡೆಯಲು ಯತ್ನಿಸಿ ಬೀಟ್ ಆದರು. ವಿಕೆಟ್‌ಕೀಪರ್ ಊರ್ವಿಲ್ ಪಟೇಲ್ ಚುರುಕಾಗಿ ಸ್ಟಂಪಿಂಗ್ ಮಾಡಿದರು.

ಆಗ ರಿಷಭ್ ಪಂತ್ ಇನಿಂಗ್ಸ್ ಹೊಣೆ ಹೊತ್ತುಕೊಂಡರು. ಆರಂಭದಲ್ಲಿ ನಿಧಾನವಾಗಿ ಆಡಿದರೂ ನಂತರ ವೇಗ ಹೆಚ್ಚಿಸಿದರು. 8 ಬೌಂಡರಿ, 2 ಸಿಕ್ಸರ್ ಹೊಡೆದರು. ಅವರ ವಿಕೆಟ್ ಕೂಡ ಜೈಸ್ವಾಲ್ ಪಾಲಾಯಿತು. ಕೊನೆ ಹಂತದ ಓವರ್‌ಗಳಲ್ಲಿ ಹರ್ಷ ತ್ಯಾಗಿ (40; 47ಎ, 4X2, 6X1) ಬೀಸಾಟವಾಡಿದರು. ಅದರಿಂದಾಗಿ ಹೋರಾಟದ ಮೊತ್ತ ಪೇರಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ದೆಹಲಿ: 50 ಓವರ್‌ಗಳಲ್ಲಿ 9ಕ್ಕೆ254 (ವಿರಾಟ್ ಕೊಹ್ಲಿ 77, ರಿಷಭ್ ಪಂತ್ 70, ಹರ್ಷ ತ್ಯಾಗಿ 40, ರವಿ ಬಿಷ್ಣೋಯಿ 50ಕ್ಕೆ2, ವಿಶಾಲ್ ಜೈಸ್ವಾಲ್ 42ಕ್ಕೆ4) ಗುಜರಾತ್:47.4 ಓವರ್‌ಗಳಲ್ಲಿ 247 (ಆರ್ಯ ದೇಸಾಯಿ 57, ಊರ್ವಿಲ್ ಪಟೇಲ್ 31, ಅಭಿಷೇಕ್ ದೇಸಾಯಿ 26, ಸೌರವ್ ಚೌಹಾನ್ 49, ವಿಶಾಲ್ ಜೈಸ್ವಾಲ್ 26, ಪ್ರಿನ್ಸ್ ಯಾದವ್ 37ಕ್ಕೆ3, ಅರ್ಪಿತ್ ರಾಣಾ 39ಕ್ಕೆ2, ಇಶಾಂತ್ ಶರ್ಮಾ 28ಕ್ಕೆ2) ಫಲಿತಾಂಶ:ದೆಹಲಿ ತಂಡಕ್ಕೆ 7 ರನ್ ಜಯ. **ಪಂದ್ಯದ ಆಟಗಾರ:** ವಿರಾಟ್ ಕೊಹ್ಲಿ.

ರೇಣುಕಾ, ದೀಪ್ತಿ ದಾಳಿಗೆ ಕುಸಿದ ಲಂಕಾ

ಟಿ20 ಸರಣಿ ಭಾರತದ ಕೈವಶ • ಶಫಾಲಿ ವರ್ಮಾ ಸತತ ಎರಡನೇ ಅರ್ಧಶತಕ

ತಿರುವನಂತಪುರ (ಪಿಟಿಐ): ಸ್ಪಿನ್ ಮತ್ತು ವೇಗದ ಬೌಲರ್‌ಗಳು ಶ್ರೀಲಂಕಾ ತಂಡವನ್ನು ಮಗದೊಮ್ಮೆ ಅಲ್ಪಮೊತ್ತಕ್ಕೆ ಕಟ್ಟಿಹಾಕಿದ ಬಳಿಕ ಶಫಾಲಿ ವರ್ಮಾ (ಔಟಾಗದೇ 79, 42ಎ) ಸತತ ಎರಡನೇ ಅಜೇಯ ಅರ್ಧಶತಕ ಬಾರಿಸಿದರು. ಇದರಿಂದ ಭಾರತ ಮಹಿಳಾ ತಂಡ ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ಶುಕ್ರವಾರ ಎಂಟು ವಿಕೆಟ್‌ಗಳ ನಿರಾಯಾಸ ಗೆಲುವು ಪಡೆಯಿತು.

ಇನ್ನೂ ಎರಡು ಪಂದ್ಯಗಳು ಉಳಿದಿರುವಂತೆ ಆತಿಥೇಯರು ಸರಣಿಯನ್ನು 3–0 ಯಿಂದ ಕೈವಶಮಾಡಿಕೊಂಡರು. ಇದೇ ಕ್ರೀಡಾಂಗಣದಲ್ಲಿ ಡಿಸೆಂಬರ್ 28 ಮತ್ತು 30ರಂದು ಕ್ರಮವಾಗಿ ನಾಲ್ಕನೇ ಮತ್ತು ಅಂತಿಮ ಪಂದ್ಯ ನಡೆಯಲಿದೆ.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಸತತ ಮೂರನೇ ಸಲ ಟಾಸ್ ಗೆದ್ದು ಪ್ರವಾಸಿ ತಂಡವನ್ನು ಆಡಲಿಳಿಸಿದರು. ಮೊದಲ ಎರಡು ಪಂದ್ಯಗಳ ರೀತಿಯಲ್ಲೇ ಶ್ರೀಲಂಕಾದ ಅಗ್ರ ಬ್ಯಾಟರ್‌ಗಳ ಪರದಾಟ ಮುಂದುವರಿಯಿತು. ಅರುಂಧತಿ ರೆಡ್ಡಿ ಬದಲು ಅವಕಾಶ ಪಡೆದ ಅಗ್ರ ಬೌಲರ್ ರೇಣುಕಾ ಸಿಂಗ್ 21 ರನ್ನಿಗೆ 4 ವಿಕೆಟ್ ಪಡೆದರೆ, ದೀಪ್ತಿ ಶರ್ಮಾ 18 ರನ್ನಿಗೆ 3 ವಿಕೆಟ್ ಪಡೆದು ಬಲವಾದ ಪೆಟ್ಟು ನೀಡಿದರು.

ಲಂಕಾ ಪರ ಆರಂಭ ಆಟಗಾರ್ತಿ ಹಸಿನಿ ಪೆರೇರಾ (25) ಗರಿಷ್ಠ ವೈಯಕ್ತಿಕ ಮೊತ್ತ ಗಳಿಸಿದರು. ಯಾವ ಹಂತದಲ್ಲೂ ತಂಡ ಆರರ ಸರಾಸರಿ ದಾಟಲಿಲ್ಲ.

ಭಾರತ ತಂಡವು ಉಪ ನಾಯಕಿ ಸ್ಮೃತಿ ಮಂದಾನ (1) ಅವರನ್ನು ಬೇಗ ಕಳೆದುಕೊಂಡಿತು. ಆದರೆ ಶಫಾಲಿ ಎಂದಿನಂತೆ ಮಿಂಚಿನ ಆಟವಾಡಿ ಸಿಂಹಪಾಲು ರನ್ ಗಳಿಸಿದರು. ಜೆಮಿಮಾ ಫರ್ನಾಂಡಿಸ್ (9) ಕೂಡ ವಿಫಲರಾದರು. ಶಫಾಲಿ ಜೊತೆಗೂಡಿದ ನಾಯಕಿ ಹರ್ಮನ್‌ಪ್ರೀತ್ ಕೌರ್ (ಅಜೇಯ 21, 18ಎ) ಮುರಿಯದ ಮೂರನೇ ವಿಕೆಟ್‌ಗೆ 48 ರನ್ ಸೇರಿಸಿದರು. ಶಫಾಲಿ ಆಟದಲ್ಲಿ 11 ಬೌಂಡರಿ, ಮೂರು ಸಿಕ್ಸರ್‌ಗಳಿದ್ದವು.



ಶಫಾಲಿ ವರ್ಮಾ ಪಿಟಿಐ ಚಿತ್ರ

ದೀಪ್ತಿಗೆ ಜಂಟಿ ಅಗ್ರಸ್ಥಾನ



ತಿರುವನಂತಪುರ: ಶುಕ್ರವಾರ ಲಂಕಾ ವಿರುದ್ಧ ಮೂರು ವಿಕೆಟ್ ಪಡೆಯುವ ಮೂಲಕ ಭಾರತ ಮಹಿಳಾ ತಂಡದ ಸ್ಟಾರ್ ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಅತ್ಯಧಿಕ ವಿಕೆಟ್ ಪಡೆದ ಗೌರವವನ್ನು ಆಸ್ಟ್ರೇಲಿಯಾದ ಮೇಘನ್ ಶುಟ್ ಜೊತೆ ಹಂಚಿಕೊಂಡರು. ಇಬ್ಬರೂ ತಲಾ 151 ವಿಕೆಟ್ ಪಡೆದಿದ್ದಾರೆ.

ನಾಯಕಿಯಾಗಿ ಹೆಚ್ಚು ಟಿ20 ಪಂದ್ಯ ಗೆಲುವು

ನಾಯಕಿ	ಗೆಲುವು	ಪಂದ್ಯ	ತಂಡ
ಹರ್ಮನ್‌ಪ್ರೀತ್	77	130	ಭಾರತ
ಮೆಗ್ ಲ್ಯಾನಿಂಗ್	76	100	ಆಸ್ಟ್ರೇಲಿಯಾ
ಹೀದರ್ ನೈಟ್	72	96	ಇಂಗ್ಲೆಂಡ್

ರೇಣುಕಾ ಸಿಂಗ್ ಪಂದ್ಯದ ಆಟಗಾರ್ತಿ ಎನಿಸಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ 20 ಓವರುಗಳಲ್ಲಿ 7ಕ್ಕೆ112 (ಹಸಿನಿಪೆರೇರಾ 25, ಇಮೇಶಾ ದುಲಾನಿ 27; ರೇಣುಕಾ ಸಿಂಗ್ 21ಕ್ಕೆ4, ದೀಪ್ತಿ ಶರ್ಮಾ 18ಕ್ಕೆ3); ಭಾರತ: 13.2 ಓವರುಗಳಲ್ಲಿ 2ಕ್ಕೆ 115 (ಶಫಾಲಿ ವರ್ಮಾ ಔಟಾಗದೇ 79, ಹರ್ಮನ್‌ಪ್ರೀತ್ ಕೌರ್ ಔಟಾಗದೇ 21; ಕವಿಶಾ ದಿಲ್ಹಾರಿ 18ಕ್ಕೆ2).

ಕ್ಯಾಚ್ ಪಡೆಯುವಾಗ ರಘುವಂಶಿಗೆ ಗಾಯ



ಜೈಪುರ (ಪಿಟಿಐ): ಮುಂಬೈ ತಂಡದ ಅಂಗ್‌ಕ್ರಿಶ್ ರಘುವಂಶಿ ಅವರು ಶುಕ್ರವಾರ ವಿಜಯ್ ಹಜಾರೆ ಟ್ರೋಫಿ ಟೂರ್ನಿಯಲ್ಲಿ ನಡೆದ ಉತ್ತರಾಖಂಡ ಎದುರಿನ ಪಂದ್ಯದಲ್ಲಿ ಕಠಿಣವಾದ ಕ್ಯಾಚ್ ಪಡೆಯುವ ಯತ್ನದಲ್ಲಿ ಗಾಯಗೊಂಡರು. ಅವರ ಭುಜ ಮತ್ತು ಕುತ್ತಿಗೆಯ ಭಾಗಕ್ಕೆ ಗಾಯವಾಗಿ, 'ಕಂಕಷನ್' ಎಂದು ಘೋಷಿಸಲಾಯಿತು.

ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅವರಿಗೆ ತೀವ್ರ ಸ್ವರೂಪದ ಗಾಯವಾಗಿಲ್ಲ ಎಂಬುದು ಸ್ಕ್ಯಾನಿಂಗ್‌ನಲ್ಲಿ ಖಚಿತವಾಯಿತು.

ಪಂದ್ಯದ 30ನೇ ಓವರ್‌ನಲ್ಲಿ ಈ ಘಟನೆ ನಡೆದಿದೆ. ಆಫ್ ಸ್ಪಿನ್ನರ್ ತನುಷ್ ಕೋಟ್ಯಾನ್ ಹಾಕಿದ ಎಸೆತದಲ್ಲಿ ಬಲಗೈ ಬ್ಯಾಟರ್ ಸೌರಭ್ ರಾವತ್ ಅವರು ಸ್ಲಾಗ್ ಸ್ವೀಪ್ ಮಾಡಲು ಪ್ರಯತ್ನಿಸಿದರು. ಡೀಪ್ ಮಿಡ್ ವಿಕೆಟ್‌ನಲ್ಲಿ ನಿಂತಿದ್ದ ರಘುವಂಶಿ ಮಿಡ್ ವಿಕೆಟ್ ಕಡೆಗೆ ವೇಗವಾಗಿ ಧಾವಿಸಿ ಒಂದು ಕೈಯಿಂದ ಕ್ಯಾಚ್ ಪಡೆಯಲು ಯತ್ನಿಸಿದರು. ಈ ವೇಳೆ ನಿಯಂತ್ರಣ ತಪ್ಪಿ ಬಿದ್ದರು. ತಕ್ಷಣ ಫಿಜಿಯೊ ಮೈದಾನಕ್ಕೆ ಧಾವಿಸಿ ಪ್ರಥಮ ಚಿಕಿತ್ಸೆ ನೀಡಿದರು.

ತಮೋರೆ ಮಿಂಚು: ಮುಂಬೈಗೆ ಜಯ

ಜೈಪುರ (ಪಿಟಿಐ): ಉತ್ತರಾಖಂಡ ವಿರುದ್ಧದ ಎಲೀಟ್ ಸಿ ಗುಂಪಿನ ಪಂದ್ಯವನ್ನು ಮುಂಬೈ 51 ರನ್‌ಗಳಿಂದ ಜಯಿಸಿತು. ಶಾರ್ದೂಲ್ ನಾಯಕತ್ವದ ಮುಂಬೈ ತಂಡಕ್ಕೆ ಇದು ಸತತ ಎರಡನೇ ಗೆಲುವು.

ಸಿಕ್ಕಿಂ ವಿರುದ್ಧ ಶತಕ ಸಿಡಿಸಿದ್ದ ಭಾರತ ತಂಡದ ಮಾಜಿ ನಾಯಕ ರೋಹಿತ್ ಶರ್ಮಾ 'ಗೋಲ್ಡನ್ ಡಕ್' ಆದರು. ಹಾರ್ದಿಕ್ ತಮೋರೆ (ಔಟಾಗದೇ 93;52ಎ) ಅವರ ಬ್ಯಾಟಿಂಗ್ ನೆರವಿನಿಂದ ಮುಂಬೈ ತಂಡವು 50 ಓವರ್‌ಗಳಲ್ಲಿ 7 ವಿಕೆಟ್‌ಗೆ 331 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಉತ್ತರಾಖಂಡ 9 ವಿಕೆಟ್‌ಗಳಿಗೆ 280 ರನ್ ಗಳಿಸಿ ಹೋರಾಟ ಮುಗಿಸಿತು. ಆರಂಭಿಕ ಆಟಗಾರ ಯುವರಾಜ್ ಚೌಧರಿ (96;96ಎ) ಅವರು ನಾಲ್ಕು ರನ್‌ಗಳಿಂದ ಶತಕ ತಪ್ಪಿಸಿಕೊಂಡರು.

ಸಂಕ್ಷಿಪ್ತ ಸ್ಕೋರ್: ಮುಂಬೈ: 50 ಓವರ್‌ಗಳಲ್ಲಿ 7 ವಿಕೆಟ್‌ಗೆ 331 (ಮುಷೀರ್ ಖಾನ್ 55, ಸರ್ಫರಾಜ್ ಖಾನ್ 55, ಹಾರ್ದಿಕ್ ತಮೋರೆ ಔಟಾಗದೇ 93, ಶಮ್ಸ್ ಮುಲಾನಿ 48; ದೇವೇಂದ್ರ ಸಿಂಗ್ ಬೋರಾ 74ಕ್ಕೆ 3). ಉತ್ತರಾಖಂಡ: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 280 (ಯುವರಾಜ್ ಚೌಧರಿ 96, ಜಗದೀಶ ಸಚ್ಚಿತ್ 51; ಶಾರ್ದೂಲ್ ಠಾಕೂರ್ 28ಕ್ಕೆ 2, ಓಂಕಾರ್ ತರ್ಮಲೆ 40ಕ್ಕೆ 2, ಮುಷೀರ್ ಖಾನ್ 57ಕ್ಕೆ 2). ಪಂದ್ಯದ ಆಟಗಾರ: ಹಾರ್ದಿಕ್ ತಮೋರೆ

ಆಲೂರು ಕ್ರೀಡಾಂಗಣ 3: ಸರ್ವಿಸಸ್: 21.5 ಓವರ್‌ಗಳಲ್ಲಿ 83 (ಪಿ.ಎಸ್.ಪೂನಿಯಾ 25; ರಾಜೇಶ್ ಮೊಹಾಂತಿ 25ಕ್ಕೆ 4, ಸಂಬಿತ್ ಎಸ್. ಬರಾಲ್ 21ಕ್ಕೆ 4). ಒಡಿಶಾ: 24.3 ಓವರ್‌ಗಳಲ್ಲಿ 6 ವಿಕೆಟ್‌ಗೆ 84 (ಸಂದೀಪ್ ಪಟ್ನಾಯಕ್ ಔಟಾಗದೇ 32; ಪಿ.ಎಸ್. ಪೂನಿಯಾ 27ಕ್ಕೆ 4). ಫಲಿತಾಂಶ: ಒಡಿಶಾ ತಂಡಕ್ಕೆ 4 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ರಾಜೇಶ್ ಮೊಹಾಂತಿ.

ಆಲೂರು ಕ್ರೀಡಾಂಗಣ 2: ಸೌರಾಷ್ಟ್ರ: 48.1 ಓವರ್‌ಗಳಲ್ಲಿ 253 (ಹರ್ವಿಕ್ ದೇಸಾಯಿ 101, ಗಜ್ಜರ್ ಸಮ್ಮರ್ 83; ಅನ್ಮೋಲ್ ಕಂಬೋಜ್ 30ಕ್ಕೆ 3, ಅನುಜ್ ಟಿ. 38ಕ್ಕೆ 2). ಹರಿಯಾಣ: 39 ಓವರ್‌ಗಳಲ್ಲಿ 4 ವಿಕೆಟ್‌ಗೆ 256 (ಯಶವರ್ಧನ್ ದಲಾಲ್ ಔಟಾಗದೇ 164, ಪಾರ್ಥ್ ವಿ. 67; ಅಂಕುರ್ ಪನ್ವಾರ್ 51ಕ್ಕೆ 3). ಫಲಿತಾಂಶ: ಹರಿಯಾಣಕ್ಕೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಯಶವರ್ಧನ್ ದಲಾಲ್

ಆಲೂರು ಕ್ರೀಡಾಂಗಣ: ರೈಲ್ವೇಸ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 266 (ಅಂಶ್ ಯಾದವ್ 59, ರವಿ ಸಿಂಗ್ 76, ಝುಡ್. ಎ. ಖಾನ್ 48; ಪಿ.ರಾಜು 41ಕ್ಕೆ 3, ಕೆ.ಎಸ್.ರಾಜು 68ಕ್ಕೆ 3, ಎಂ.ಹೇಮಂತ್ ರೆಡ್ಡಿ 34ಕ್ಕೆ 2). ಆಂಧ್ರ: 44.4 ಓವರ್‌ಗಳಲ್ಲಿ 4 ವಿಕೆಟ್‌ಗೆ 271 (ಎಸ್.ಕೆ.ರಶೀದ್ 40, ರಿಕಿ ಭುಯಿ 76, ನಿತೀಶ್ ಕುಮಾರ್ ರೆಡ್ಡಿ ಔಟಾಗದೇ 55, ಎಂ.ಹೇಮಂತ್ ರೆಡ್ಡಿ ಔಟಾಗದೇ 41; ಕರ್ಣ್ ಶರ್ಮಾ 46ಕ್ಕೆ 3). ಆಂಧ್ರ ತಂಡಕ್ಕೆ 6 ವಿಕೆಟ್‌ಗಳ ಜಯ. ಪಂದ್ಯದ ಆಟಗಾರ ಹೇಮಂತ್ ರೆಡ್ಡಿ.

ಮೊದಲ ದಿನವೇ 20 ವಿಕೆಟ್ ಪತನ

ಬಾಕ್ಸಿಂಗ್ ಡೇ ಟೆಸ್ಟ್: ಆಸ್ಟ್ರೇಲಿಯಾ ತಂಡಕ್ಕೆ ಅಲ್ಪ ಮುನ್ನಡೆ

ಮೆಲ್ಬರ್ನ್ (ಎಎಫ್‌ಪಿ): ಆ್ಯಷಸ್ ಸರಣಿಯ ನಾಲ್ಕನೇ ಟೆಸ್ಟ್‌ನ ಮೊದಲ ದಿನವಾದ ಶುಕ್ರವಾರವೇ 20 ವಿಕೆಟ್‌ಗಳು ಪತನವಾದವು. ಆಸ್ಟ್ರೇಲಿಯಾ ತಂಡ 152 ರನ್‌ಗಳಿಗೆ ಕುಸಿಯಿತು. ಆದರೆ ಇಂಗ್ಲೆಂಡ್‌ಗೆ ತಿರುಗೇಟು ನೀಡಿ 110 ರನ್‌ಗಳಿಗೆ ಉರುಳಿಸಿತು. ಹೀಗಾಗಿ ಪಂದ್ಯ ಮೊದಲ ದಿನವೇ ಕುತೂಹಲಕರ ಸ್ಥಿತಿಗೆ ತಲುಪಿತು.

ದಿನದಾಟದ ಕೊನೆಗೆ ಆಸ್ಟ್ರೇಲಿಯಾ ಎರಡನೇ ಇನಿಂಗ್ಸ್ ನಲ್ಲಿ ವಿಕೆಟ್ ನಷ್ಟವಿಲ್ಲದೇ 4 ರನ್ ಗಳಿಸಿದ್ದು, ಒಟ್ಟಾರೆ 46 ರನ್ ಮುಂದಿದೆ. ಟ್ರಾವಿಸ್ ಹೆಡ್ ಜತೆ ಆಟ ಆರಂಭಿಸಿದ ಸ್ಕಾಟ್ ಬೋಲ್ಯಾಂಡ್ ಅಜೇಯ 4 ರನ್ ಗಳಿಸಿದ್ದಾರೆ.

ಹಸಿರಿನಿಂದ ಕೂಡಿದ್ದ ಎಂಸಿಜಿ ಪಿಚ್‌ನಲ್ಲಿ ಟಾಸ್ ಗೆದ್ದ ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. 94,199 ಪ್ರೇಕ್ಷಕರು ಹಾಜರಿದ್ದು, ಇದು ಈ ಕ್ರೀಡಾಂಗಣ ದಲ್ಲಿ ಅತಿ ಹೆಚ್ಚು ಎನಿಸಿತು. 2015ರ ಏಕದಿನ ವಿಶ್ವಕಪ್ ಫೈನಲ್‌ಗೆ 93,013 ಮಂದಿ ಸೇರಿದ್ದು ಈ ಹಿಂದಿನ ದಾಖಲೆಯಾಗಿತ್ತು.



ಜೋಶ್ ಟಂಗ್

ಜೋಶ್ ಟಂಗ್ (45ಕ್ಕೆ5) ನೇತೃತ್ವದಲ್ಲಿ ಇಂಗ್ಲೆಂಡ್ ವೇಗಿಗಳು ನಾಯಕನ ನಿರ್ಧಾರ ಸಮರ್ಥಿಸುವಂತೆ ಬೌಲಿಂಗ್ ಮಾಡಿದರು. ಆತಿಥೇಯ ತಂಡ 45.2 ಓವರುಗಳಲ್ಲಿ ಆಲೌಟ್ ಆಯಿತು. ಕೆಳಕ್ರಮಾಂಕದಲ್ಲಿ ಮೈಕೆಲ್ ನೆಸೆರ್ 35 ರನ್ (49ಎ, 4X7) ಗಳಿಸಿದ್ದೇ ತಂಡದ ಪರ ಅತಿ ಹೆಚ್ಚಿನ ವೈಯಕ್ತಿಕ ಮೊತ್ತವಾಯಿತು.

ಇಂಗ್ಲೆಂಡ್ ತಂಡದ ಸಂತಸ ಹೆಚ್ಚು ಕಾಲ ಉಳಿಯಲಿಲ್ಲ. ವೇಗದ ಬೌಲರ್ ನೆಸೆರ್ (45ಕ್ಕೆ4) ಬೌಲಿಂಗ್‌ನಲ್ಲೂ ಮಿಂಚಿದರು. ಇಂಗ್ಲೆಂಡ್ 30 ಓವರುಗಳ ಒಳಗೆ 110 ರನ್ನಿಗೆ ಆಲೌಟ್ ಆಯಿತು. ಮಿಚೆಲ್ ಸ್ಟಾರ್ಕ್ ಎರಡು ಮತ್ತು ಬೋಲ್ಯಾಂಡ್ ಮೂರು ವಿಕೆಟ್‌ಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 45.2 ಓವರುಗಳಲ್ಲಿ 152 (ಉಸ್ಮಾನ್ ಖ್ವಾಜಾ 20, ಅಲೆಕ್ಸ್ ಕ್ಯಾರಿ 20, ಮೈಕೆಲ್ ನೆಸೆರ್ 35; ಗಸ್ ಅಟ್ಕಿನ್ಸನ್ 28ಕ್ಕೆ2, ಜೋಶ್ ಟಂಗ್ 45ಕ್ಕೆ5); ಇಂಗ್ಲೆಂಡ್: 29.5 ಓವರುಗಳಲ್ಲಿ 110 (ಹ್ಯಾರಿ ಬ್ರೂಕ್ 41, ಗಸ್ ಅಟ್ಕಿನ್ಸನ್ 28; ಮಿಚೆಲ್ ಸ್ಟಾರ್ಕ್ 23ಕ್ಕೆ2, ಮೈಕೆಲ್ ನೆಸೆರ್ 45ಕ್ಕೆ4, ಸ್ಕಾಟ್ ಬೋಲ್ಯಾಂಡ್ 30ಕ್ಕೆ3); ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ: 1 ಓವರಿನಲ್ಲಿ ವಿಕೆಟ್ ನಷ್ಟವಿಲ್ಲದೇ 4

ಶ್ರೇಯಾಂಕ ಆಟಗಾರರ ಗೆಲುವಿನ ಓಟ

ಮಂಗಳೂರು: ಅಗ್ರಶ್ರೇಯಾಂಕಿತ, ಕೇರಳದ ಮಾರ್ತಾಂಡನ್ ಕೆ.ಯು ಹಾಗೂ ಎರಡನೇ ಶ್ರೇಯಾಂಕಿತ, ಇಂಟರ್ ನ್ಯಾಷನಲ್ ಮಾಸ್ಟರ್ ತಮಿಳುನಾಡಿನ ಬಾಲಸುಬ್ರಹ್ಮಣ್ಯಂ ಆರ್. ಇಲ್ಲಿ ಶುಕ್ರವಾರ ಆರಂಭಗೊಂಡ ರಾಷ್ಟ್ರ ಮಟ್ಟದ ಫಿಡೆ ರೇಟೆಡ್ ಮುಕ್ತ ಚೆಸ್ ಟೂರ್ನಿಯ ಅಗ್ರ ಸ್ಥಾನ ಹಂಚಿಕೊಂಡರು.

ಮೊದಲ ಎರಡು ಸುತ್ತುಗಳಲ್ಲಿ ಜಯ ಗಳಿಸಿದ ಇವರಿಬ್ಬರು ತಲಾ 2 ಪಾಯಿಂಟ್ ಗಳಿಸಿದ್ದಾರೆ. ಮೂರನೇ ಶ್ರೇಯಾಂಕಿತ ಪ್ರಸನ್ನ ಕಾರ್ತಿಕ್, 6ನೇ ಶ್ರೇಯಾಂಕಿತ ಕೇರಳದ ಶ್ರೀದತ್ ಶ್ರೀಧರನ್, 8ನೇ ಶ್ರೇಯಾಂಕಿತ ವಿಘ್ನೇಶ್ವರನ್ ಎಸ್, 9ನೇ ಶ್ರೇಯಾಂಕದ ಗೋವಾ ಆಟಗಾರ್ತಿ ಜೋಶುವಾ ಮಾರ್ಕ್ ಟೆಲಿಸ್ ಮತ್ತು ಕರ್ನಾಟಕದ 10ನೇ ಶ್ರೇಯಾಂಕದ ಅಯು ಅತೀಂದ್ರಿಯ ಶೆಟ್ಟಿ ಕೂಡ ತಲಾ 2 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ರಾಷ್ಟ್ರೀಯ ನೆಟ್‌ಬಾಲ್ ಟೂರ್ನಿ ರಾಜ್ಯ ಬಾಲಕ–ಬಾಲಕಿಯರಿಗೆ ಜಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕದ ಬಾಲಕ ಮತ್ತು ಬಾಲಕಿಯರು ಪದವಿಪೂರ್ವ ವಿದ್ಯಾರ್ಥಿಗಳ ರಾಷ್ಟ್ರಮಟ್ಟದ ನೆಟ್‌ಬಾಲ್ ಟೂರ್ನಿಯ ಲೀಗ್ ಪಂದ್ಯಗಳಲ್ಲಿ ಶುಕ್ರವಾರ ಅಮೋಘ ಗೆಲುವು ದಾಖಲಿಸಿದರು.

ಶಾಲಾ ಶಿಕ್ಷಣ ಇಲಾಖೆ ಹಾಗೂ ಮಂಗಳೂರು ತಾಲ್ಲೂಕಿನ ಎಡಪದವು ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜು ಆಶ್ರಯದಲ್ಲಿ ಪಿಲಿಕುಳದ ಸ್ಕೌಟ್ಸ್ ಭವನದಲ್ಲಿ ನಡೆಯುತ್ತಿರುವ ಟೂರ್ನಿಯ ಬಾಲಕರ ವಿಭಾಗದಲ್ಲಿ ಕರ್ನಾಟಕ 28–18ರಲ್ಲಿ ಗೋವಾ ತಂಡವನ್ನು ಮಣಿಸಿತು. ಗುರುವಾರ ಮೊದಲ ಪಂದ್ಯದಲ್ಲಿ ಒಡಿಶಾವನ್ನು 35–3ರಲ್ಲಿ ಸೋಲಿಸಿದ್ದ ಬಾಲಕಿಯರು ಶುಕ್ರವಾರ ರಾಜಸ್ತಾನ ಎದುರು 19–16ರಲ್ಲಿ ಜಯ ಸಾಧಿಸಿದರು.

ಮೊದಲ ಪಂದ್ಯದಲ್ಲಿ ಪಂಜಾಬ್ ವಿರುದ್ಧ 25–11ರಲ್ಲಿ ಸೋತಿದ್ದರೂ ಗೋವಾ ಆಟಗಾರರು ಕರ್ನಾಟಕದ ವಿರುದ್ಧ ಭರವಸೆಯಿಂದಲೇ ಕಣಕ್ಕೆ ಇಳಿದಿದ್ದರು. ಆದರೆ ಆರಂಭದಲ್ಲೇ ಆಕ್ರಮಣಕ್ಕೆ ಮುಂದಾದ ಕರ್ನಾಟಕ ಬಾಲಕರು ಪಾಯಿಂಟ್‌ಗಳನ್ನು ಗಳಿಸುತ್ತ ಸಾಗಿದರು. ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಳದ ಸ್ವತಂತ್ರ ಪದವಿಪೂರ್ವ ಕಾಲೇಜು ಆಟಗಾರ, ನಾಯಕ ಗಣೇಶ ಮತ್ತು ಸಂತೋಷ್ ಶೂಟಿಂಗ್‌ನಲ್ಲಿ ಮಿಂಚಿದರು. ನಿರೂಪ್ ಮತ್ತು ಚಂದನ್ ಅವರ ಪ್ರತಿರೋಧವನ್ನು ಬೇಧಿಸಲು ಗೋವಾ ತಂಡ ಪರದಾಡಿತು. 'ಸೆಂಟರ್'ನಲ್ಲಿ ಕರ್ನಾಟಕಕ್ಕೆ ನಿಹಾಲ್ ಉತ್ತಮ ಸಹಕಾರ ನೀಡಿದರು.

ಮೊದಲಾರ್ಧದಲ್ಲಿ 15 ಪಾಯಿಂಟ್ ಗಳಿಸಿದ ಕರ್ನಾಟಕ ಕೇವಲ ಐದು ಪಾಯಿಂಟ್ ಬಿಟ್ಟುಕೊಟ್ಟಿತು. ದ್ವಿತೀಯಾರ್ಧದಲ್ಲಿ ಆಕ್ರಮಣಕ್ಕೆ ಇಳಿದ ಗೋವಾ 13 ಅಂಕ ಕಲೆ ಹಾಕಿತು. ಬಾಲಕಿಯರ ವಿಭಾಗದಲ್ಲಿ ರಾಜಸ್ಥಾನದ ಪ್ರಬಲ ಪೈಪೋಟಿ ನೀಡಿದರೂ ಪಟ್ಟುಬಿಡದೆ ಸೆಣಸಿದ ಕರ್ನಾಟಕ ತಂಡದವರು ಗೆಲುವು ತಮ್ಮದಾಗಿಸಿಕೊಂಡರು.

ವಿಶ್ವ ರ‍್ಯಾಪಿಡ್ ಚೆಸ್: ಅರ್ಜುನ್, ಕಾರ್ಲ್‌ಸನ್ ಮುನ್ನಡೆ

ದೋಹಾ: ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಮತ್ತು ಭಾರತದ ಅರ್ಜುನ್ ಇರಿಗೇಶಿ ಅವರು ಶುಕ್ರವಾರ ಆರಂಭವಾದ ಫಿಡೆ ವಿಶ್ವ ರ‍್ಯಾಪಿಡ್ ಚೆಸ್ ಚಾಂಪಿಯನ್‌ಷಿಪ್‌ನ ನಾಲ್ಕನೇ ಸುತ್ತಿನ ನಂತರ ತಲಾ ನಾಲ್ಕು ಅಂಕಗಳೊಂದಿಗೆ ಮುನ್ನಡೆ ಹಂಚಿಕೊಂಡಿದ್ದಾರೆ.



ಗೌತಮ್ ಕೃಷ್ಣ

12 ಮಂದಿ ತಲಾ 3.5 ಪಾಯಿಂಟ್ಸ್ ಗಳಿಸಿದ್ದು ಎರಡನೇ ಸ್ಥಾನದಲ್ಲಿದ್ದಾರೆ.

ಅಚ್ಚರಿಯ ಫಲಿತಾಂಶ ನೀಡಿದ ಭಾರತದ ಐಎಂ ಗೌತಮ್ ಕೃಷ್ಣ ಅವರೂ ಇವರಲ್ಲಿ ಒಳಗೊಂಡಿದ್ದಾರೆ. ಅವರು ತಮಗಿಂತ ಮೇಲಿನ ಕ್ರಮಾಂಕದ ಇಂಡ್ಜಿಕ್ ಅಲೆಕ್ಸಾಂಡರ್, ಸ್ವದೇಶದ ಅರವಿಂದ ಚಿದಂಬರಮ್, ಟಿಮೋರ್ ರಾಜಾಬೋವ್ ವಿರುದ್ಧ ಜಯಗಳಿಸಿದರಲ್ಲದೇ, ಅಲೆಕ್ಸಾಂಡರ್ ಗ್ರಿಶ್ಚುಕ್ ವಿರುದ್ಧ ಡ್ರಾ ಮಾಡಿಕೊಂಡರು.

ಮಹಿಳೆಯರ ವಿಭಾಗದಲ್ಲಿ ಚೀನಾದ ಝು ಜಿನೆರ್ (4 ಅಂಕ) ಅಗ್ರಸ್ಥಾನದಲ್ಲಿದ್ದಾರೆ. ಒಂಬತ್ತನೇ ಶ್ರೇಯಾಂಕದ ಭಾರತದ ದ್ರೋಣವಲ್ಲಿ ಹಾರಿಕಾ ಸೇರಿ ಏಳು ಮಂದಿ (ತಲಾ 3.5) ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ.

7 ವರ್ಷದ ಚೆಸ್‌ಪಟು ವಾಕಾ ಲಕ್ಷ್ಮಿ ಪ್ರಾಜ್ಞಿಕಾಗೆ ರಾಷ್ಟ್ರೀಯ ಬಾಲ ಪುರಸ್ಕಾರ

ವೈಭವ್ ಸೂರ್ಯವಂಶಿ, ಧಿನಿಧಿಗೆ ಗೌರವ

ನವದೆಹಲಿ (ಪಿಟಿಐ): 14 ವರ್ಷದ ಬ್ಯಾಟಿಂಗ್ ಪ್ರತಿಭೆ ವೈಭವ್ ಸೂರ್ಯವಂಶಿ, 7 ವರ್ಷದ ಚೆಸ್ ಪಟು ವಾಕಾ ಲಕ್ಷ್ಮಿ ಪ್ರಾಜ್ಞಿಕಾ ಸೇರಿ 20 ಮಕ್ಕಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರತಿಷ್ಠಿತ ಪ್ರಧಾನಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಶುಕ್ರವಾರ ಪ್ರದಾನ ಮಾಡಿದರು.

ಕ್ರೀಡೆ, ಶೌರ್ಯ, ಸಾಮಾಜಿಕ ಸೇವೆ ಮತ್ತು ಪರಿಸರ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಗಾಗಿ ನೀಡಲಾಗುವ ಈ ಪ್ರಶಸ್ತಿಗೆ ಕರ್ನಾಟಕದ ಈಜು ಪ್ರತಿಭೆ ಧಿನಿಧಿ ದೇಸಿಂಗು ಕೂಡ ಪಾತ್ರರಾಗಿದ್ದಾರೆ.

ವರ್ಷದ ಆರಂಭದಲ್ಲಿ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಪರ ಆಡಿದ್ದ ವೈಭವ್, ಗುಜರಾತ್ ಟೈಟನ್ಸ್ ವಿರುದ್ಧ 38 ಎಸೆತಗಳಲ್ಲಿ 101 ರನ್ ಗಳಿಸಿದ್ದರು. ಅದರೊಂದಿಗೆ ಟಿ20 ಕ್ರಿಕೆಟ್‌ನಲ್ಲಿ ಶತಕ ಬಾರಿಸಿದ ಅತ್ಯಂತ ಕಿರಿಯ ವಯಸ್ಸಿನ ಬ್ಯಾಟರ್ ಎಂಬ ದಾಖಲೆ ಬರೆದರು. 35 ಎಸೆತಗಳಲ್ಲಿ ಮೂರಂಕಿ ದಾಟಿದ ಅವರು, ಐಪಿಎಲ್ ಇತಿಹಾಸದಲ್ಲಿ ಎರಡನೇ ಅತ್ಯಂತ ವೇಗದ ಶತಕ ದಾಖಲಿಸಿದ್ದರು.

ಬುಧವಾರ ರಾಂಚಿಯಲ್ಲಿ ನಡೆದ ವಿಜಯ್ ಹಜಾರೆ ಟ್ರೋಫಿಯ ಪಂದ್ಯದಲ್ಲಿ ಬಿಹಾರ ತಂಡದ ಸೂರ್ಯವಂಶಿ 84 ಎಸೆತಗಳಲ್ಲಿ 190 ರನ್ ಗಳಿಸಿದ್ದರು. ಈ ಮೂಲಕ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಶತಕ ಗಳಿಸಿದ ಅತ್ಯಂತ ಕಿರಿಯ ವಯಸ್ಸಿನ (14 ವರ್ಷ, 272 ದಿನ) ಆಟಗಾರ ಎಂಬ ದಾಖಲೆ ಬರೆದರು. ಅವರು ಕೇವಲ 36 ಎಸೆತಗಳಲ್ಲಿ ಮೂರು ಅಂಕಿಗಳ ಗಡಿಯನ್ನು ದಾಟಿದ್ದರು.

ಸೂರತ್‌ನ ಪ್ರಾಜ್ಞಿಕಾ, ಸರ್ಬಿಯಾದಲ್ಲಿ ನಡೆದ 2025ರ ಫಿಡೆ ವಿಶ್ವ ಶಾಲಾ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ 7 ವರ್ಷದೊಳಗಿನ ಬಾಲಕಿಯರ ಪ್ರಶಸ್ತಿಯನ್ನು ಜಯಿಸಿದ್ದಾರೆ.



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ವೈಭವ್ ಸೂರ್ಯವಂಶಿ ಅವರಿಗೆ ನವದೆಹಲಿಯಲ್ಲಿ ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರವನ್ನು ಶುಕ್ರವಾರ ಪ್ರದಾನ ಮಾಡಿದರು

ಬೆಂಗಳೂರಿನ ಈಜುತಾರೆಗೆ ಪುರಸ್ಕಾರ

ಬೆಂಗಳೂರಿನ ಧಿನಿಧಿ ಮಹಿಳೆಯರ 200 ಮೀಟರ್ ಫ್ರೀಸ್ಟೈಲ್‌ನಲ್ಲಿ 2024ರ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಒಲಿಂಪಿಕ್ಸ್‌ನ ಭಾರತದ ತುಕಡಿಯಲ್ಲಿ ಅತ್ಯಂತ ಕಿರಿಯ ವಯಸ್ಸಿನ (14 ವರ್ಷ) ಕ್ರೀಡಾಪಟು ಅವರಾಗಿದ್ದರು.

200 ಮೀಟರ್ ಫ್ರೀಸ್ಟೈಲ್‌ನಲ್ಲಿ ಪರಿಣತಿ ಹೊಂದಿರುವ 15 ವರ್ಷದ ಧಿನಿಧಿ, 100 ಮೀಟರ್ ಫ್ರೀಸ್ಟೈಲ್ ಮತ್ತು 200 ಮೀಟರ್ ವೈಯಕ್ತಿಕ ಮೆಡ್ಲೆಯಲ್ಲೂ ಸ್ಪರ್ಧಿಸುತ್ತಾರೆ. 2022ರ ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸಿದ್ದ ಭಾರತದ ಅತ್ಯಂತ ಕಿರಿಯ ವಯಸ್ಸಿನ ಕ್ರೀಡಾಪಟು ಅವರಾಗಿದ್ದರು.



ಧಿನಿಧಿ ದೇಸಿಂಗು

ಸಿ.ವಿ.ರಾಮನ್ ನಗರದ ಡಿಆರ್‌ಡಿಒ ಕೇಂದ್ರೀಯ ವಿದ್ಯಾಲಯದಲ್ಲಿ 10ನೇ ತರಗತಿ ಓದುತ್ತಿರುವ ಧಿನಿಧಿ 2018ರಲ್ಲಿ ಹವ್ಯಾಸಕ್ಕಾಗಿ ಈಜು ಕಲಿಯಲು ಆರಂಭಿಸಿದ್ದರು. ಕ್ರಮೇಣ ಪರಿಣತಿ ಪಡೆದ ಅವರು ಸ್ಪರ್ಧಾತ್ಮಕ ಈಜಿನಲ್ಲಿ ತೊಡಗಿಸಿಕೊಂಡರು. ಅವರು ಡಾಲ್ಫಿನ್ ಅಕ್ವಾಟಿಕ್ಸ್‌ನ ಬಿ.ಎಂ. ಮಧು ಕುಮಾರ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ.

2023ರಲ್ಲಿ 100 ಮೀ ಫ್ರೀಸ್ಟೈಲ್‌ನಲ್ಲಿ ಜೂನಿಯರ್ ಮತ್ತು ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ರಾಷ್ಟ್ರೀಯ ದಾಖಲೆ ಬರೆದಿದ್ದರು. 200 ಮೀ ಫ್ರೀಸ್ಟೈಲ್ ಮತ್ತು 200 ಮೀ ವೈಯಕ್ತಿಕ ಮೆಡ್ಲೆಯಲ್ಲೂ ದಾಖಲೆ ನಿರ್ಮಿಸಿದ್ದರು.

ಗೋವಾದಲ್ಲಿ ನಡೆದ (2023) ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಏಳು ಚಿನ್ನದ ಪದಕಗಳನ್ನು ಗೆದ್ದರು. ದೋಹಾದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿಯೂ ಭಾಗವಹಿಸಿದ್ದರು. ಒಡಿಶಾದಲ್ಲಿ ನಡೆದ 78ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ 100 ಮೀ. ಮತ್ತು 200 ಮೀ.ಫ್ರೀಸ್ಟೈಲ್‌ನಲ್ಲಿ ರಾಷ್ಟ್ರೀಯ ದಾಖಲೆಗಳೊಂದಿಗೆ ಚಿನ್ನದ ಪದಕಗಳನ್ನು ಗೆದ್ದಿದ್ದಾರೆ.


LG
ಪೈ ಇಂಟರ್‌ನ್ಯಾಶನಲ್
LG OLED evo AI
LG QNED evo AI
ಗೆಲ್ಲಿರಿ 5 ಕೋಟಿ
ಜಾಕ್‌ಪಾಟ್
ಪ್ರತಿ ತಿಂಗಳು
Pai MONTHLY DRAW
CELEBRATION OFFERS
Up to 26%* Cashback (On Select Debit/Credit Cards)
Max. up to ₹26,000
(On Select Models)
3 YEAR* WARRANTY
(With Select LG TVs)
5 Year Warranty
(On PCB & Motor of Air Conditioner)
5 YEAR
FREE*
GLASS BOWL KIT
(On Select Convection Microwave Ovens)
UP TO 30% OFF ON LG SOUNDBAR*
(With Select LG TVs)
C5 OLED | 164 (65)
• OLED evo 4K with Brightness Booster
• α9 AI Processor 4K Gen8
• Dolby Vision™ / Dolby Atmos™
• 40W / 2.2 Ch
• NVIDIA G-Sync / AMD FreeSync Premium / VRR (Up to 144Hz)
• webOS 25 Re:New Program
• Multi-View (2 Screens)
• Virtual Surround Sound 11.1.2 Up-mix
• AI Sound Pro
• AI Picture Pro
• AI Customization
• HDR Expression Enhancer
FIXED EMI STARTING FROM ₹2,999
7.5% CASH BACK MAX UPTO ₹10,000
C5 OLED | 139 (55)
• OLED evo 4K with Brightness Booster
• α9 AI Processor 4K Gen8
• Dolby Vision™ / Dolby Atmos™
• 40W / 2.2 Ch
• NVIDIA G-Sync / AMD FreeSync Premium / VRR (Up to 144Hz)
• webOS 25 Re:New Program
• Multi-View (2 Screens)
• Virtual Surround Sound 11.1.2 Up-mix
• AI Sound Pro
• AI Picture Pro
• AI Customization
• HDR Expression Enhancer
FIXED EMI STARTING FROM ₹2,999
7.5% CASH BACK MAX UPTO ₹7,500
QNED8GA | 164 (65)
• 4K QNED evo MiniLED
• α8 AI Processor 4K Gen2
• Dolby Vision™ / Dolby Atmos™
• 20W / 2.0 Ch
• AMD FreeSync Premium / VRR (Up to 144Hz)
• webOS 25 Re:New Program
• Multi-View (2 Screens)
• Virtual Surround Sound 9.1.2 p-mix
• AI Sound Pro
• AI Picture Pro
• AI Customization
• AI Magic Remote
FIXED EMI STARTING FROM ₹1,999
5% CASH BACK MAX UPTO ₹7,500
QNED8GA | 139 (55)
• 4K QNED evo MiniLED
• α8 AI Processor 4K Gen2
• Dolby Vision™ / Dolby Atmos™
• 20W / 2.0 Ch
• AMD FreeSync Premium / VRR (Up to 144Hz)
• webOS 25 Re:New Program
• Multi-View (2 Screens)
• Virtual Surround Sound 9.1.2 p-mix
• AI Sound Pro
• AI Picture Pro
• AI Customization
• AI Magic Remote
FIXED EMI STARTING FROM ₹1,999
5% CASH BACK MAX UPTO ₹5,000
NANO83A | 189 (75)
• Pure Nano Color
• α7 AI Processor 4K Gen8
• Dolby Atmos™
• 20W / 2.0 Ch
• Game Optimizer, Game Dashboard, HGiG Profile
• FILMMAKER MODE™
• webOS 25 Re:New Program
• Virtual Surround Sound 9.1.2 Up-mix
• AI Sound Pro
• AI Brightness Control
• AI Customization
• AI Magic Remote
• 4K Expression Enhancer
FIXED EMI STARTING FROM ₹1,999
7.5% CASH BACK MAX UPTO ₹9,000
NANO83A | 109 (43)
• Pure Nano Color
• α7 AI Processor 4K Gen8
• Dolby Atmos™
• 20W / 2.0 Ch
• Game Optimizer, Game Dashboard, HGiG Profile
• FILMMAKER MODE™
• webOS 25 Re:New Program
• Virtual Surround Sound 9.1.2 Up-mix
• AI Sound Pro
• AI Brightness Control
• AI Customization
• AI Magic Remote
• 4K Expression Enhancer
5% CASH BACK MAX UPTO ₹3,500
UA8300 | 164 (65)
• Real 4K Display
• α7 AI Processor 4K Gen8
• Dolby Atmos
• 20W / 2.0 Ch
• Game Optimizer, Game Dashboard, HGiG Profile
• FILMMAKER MODE™
• webOS 25 Re:New Program
• Virtual Surround Sound 9.1.2 Up-mix
• AI Sound Pro
• AI Brightness Control
• AI Customization
• AI Magic Remote
• 4K Expression Enhancer
FIXED EMI STARTING FROM ₹1,999
7.5% CASH BACK MAX UPTO ₹6,000
UA8300 | 139 (55)
• Real 4K Display
• α7 AI Processor 4K Gen8
• Dolby Atmos
• 20W / 2.0 Ch
• Game Optimizer, Game Dashboard, HGiG Profile
• FILMMAKER MODE™
• webOS 25 Re:New Program
• Virtual Surround Sound 9.1.2 Up-mix
• AI Sound Pro
• AI Brightness Control
• AI Customization
• AI Magic Remote
• 4K Expression Enhancer
7.5% CASH BACK MAX UPTO ₹5,000
NANO83A | 139 (55)
• Pure Nano Color
• α7 AI Processor 4K Gen8
• Dolby Atmos™
• 20W / 2.0 Ch
• Game Optimizer, Game Dashboard, HGiG Profile
• FILMMAKER MODE™
• webOS 25 Re:New Program
• Virtual Surround Sound 9.1.2 Up-mix
• AI Sound Pro
• AI Brightness Control
• AI Customization
• AI Magic Remote
• 4K Expression Enhancer
5% CASH BACK MAX UPTO ₹6,000
DISHWASHER DFB532FP
• Capacity: 14 Place Setting
• TrueSteam®
• QuadWash™
• Inverter Direct Drive Motor
• 10-Year Warranty On Inverter Direct Drive Motor
• 2-Year Comprehensive Warranty On Product
• LG ThinQ™
• Color: Platinum Silver
MICROWAVE OVEN MJEN326UHW (32L)
• Scan to Cook Wi-Fi Model- ThinQ Enabled
• Charcoal Lighting Heater™
• 30 Healthy Heart™ Recipes~
• Motorised Rotisserie
• Diet Fry™ • Ghee In 12 Minutes#
• Multicook Tawa • Indian Roti Basket**
• Color/Pattern: Black/Wave
AMERICAN EXPRESS
AXIS BANK
BOBCARD CREDIT REIMAGINED
DBS
FEDERAL BANK YOUR PERFECT BANKING PARTNER
HDFC BANK
ICICI Bank
IDFC FIRST Bank Credit & Debit Cards
J&K Bank Serving To Empower
SBI card
Pai INTERNATIONAL
PRODUCT & SERVICE RELATED ENQUIRIES
+91 91084 44777
SERVICE/HELPLINE: 080-42 46 43 43 10AM TO 7PM
FOLLOW US!
FREE DELIVERY
FOR REFRIGERATORS, WASHING MACHINES, LED TV'S
24 HOURS DELIVERY CHALLENGE*
GET 100% ADDITIONAL LUCKY DRAW COUPON* IF NOT DELIVERED WITHIN 24 HOURS
(Within City Limits)
WE ARE CELEBRATING 220+ OUTLETS
STORE LOCATOR
*Terms and Conditions Apply. For more information please visit www.lg.com


MARUTI SUZUKI
NEXA
UNBELIEVABLE RATE OF INTEREST ON STRONG HYBRID VARIANTS.
AVAIL LOAN
@ 3.99%#
STRONG HYBRID
INVICTO
GRAND VITARA
INVICTO | GRAND VITARA
ECO MODE
POWER MODE
EV MODE
e-CVT
DRIVE MODES
360 VIEW CAMERA
5 YEAR WARRANTY~
3 YEARS + 2 YEARS COMPLIMENTARY
8 YEAR WARRANTY ON THE BATTERY^
BENEFITS UP TO ₹ 5 93 500*
NEXA SAFETY SHIELD
SCAN TO CONNECT TO A SHOWROOM NEAR YOU
E-BOOK TODAY @ WWW.NEXAEXPERIENCE.COM
Contact us at
1800-200-[6392]
1800-102-[6392]
For detailed T&C kindly visit nearest dealership. Maruti Suzuki India Limited reserves the right to discontinue offers without notice and offers may vary across models/variants. *Offer includes consumer offer, exchange bonus and institutional or rural offer (wherever applicable) on select models/variants. Above offers are valid till 31st December 2025. Features and accessories shown may not be part of standard fitment. Images used are for illustration purposes only. Car color may vary due to printing on paper. ^Maruti Suzuki offers warranty of ninety six (96) months or 1 60 000 kilometers (whichever occurs first) for Hybrid Electric Vehicle (HEV) battery from the date of invoice to the first owner ~This extended warranty is applicable for Delta+, Zeta, Zeta+, Alpha & Alpha+ variants except CNG variants of Grand Vitara. #Scheme valid for limited period. Finance at the sole discretion of the financier and may vary based on customer profile. Special Rate of Interest may vary basis subvention amount and customer credit evaluation by the financier. Customer may choose to avail either special rate of interest or applicable customer offer(s).

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331



REAL ESTATE SELLING

House

Banashankari

BANASHANKARI 6TH Stage 10th Block 20x30, 4 BHK House Rs. 1.17 Crore. Contact: 9148914809/ 9993959099

Kanakapura Road

KANAKAPURA ROAD,BCC Layout,30x50, G+3 Brand New House 4.60cr/ 900Sft, 3BHK Duplex 2.50cr 9845704509

Shivajinagar

**BUILDING-SALE OFF QUEENS`ROAD** Modi Masjid Road Chick-Bazaar Road 3000sft South`Facing on`40ft-Road 23K Per sft full-Cheque Payment Call:9845922769

Mysore Road

SALE BEAUTIFUL_HOUSE Mysore Road, Near.RRHospital, Under Construction Site`30x50,Facing East in a Gated_Community BDA`Approved Layout Basement Parking 1st&2nd_Floor Independent 3`BHK. 3&4`Floor Duplex with,Open Terrace, Lift,Till Top`Floor. Call:9632224247

Nagarabhavi

30X40 G+3 House For Sale. Nagarabhavi D-group. Rental Income 80k. 2.80cr Negotiable. 9342874483, 9844333109

Vishweshwariah Layout

"VISHVESWARAIAH 6TH-BLOCK 60`ft Road 75 Squares Building on 50x80 South facing for sale. 9845500019/ 7019314962"

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Electronic City

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan
Call : 70260 13388

Arkavathi Layout

RESIDENTIAL BDA SITE No. 364 for sale in Arkavathi layout, 15th Block measuring 40'60 west facing, 11,500/ sq.ft negotiable. Call: 9986185983.

J P Nagar

JPNAGAR 1ST TO 6TH Phases Sale Sites/Houses 30'x40', 40'x60', 45'x60', 40'x70', 50'x80' Contact: 9448052264

Doddaballapur Road

DODDABALAPURA TO BANGALORE Main Road Facing 20x30 Near Doddabalapura Railway Station SALE 49 LakhS: 9342552428

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

BDA SITE South facing, measuring 50x80, 1st K Sector, 60 ft Double Road (Commercial), Connects Business Corridor, Kempegowda Layout, Site Sale. 13000/- psqft. +919353534340.

Magadi Road

750 SQFT Vacant Site, WF Herohalli, Sunkadakatte, Magadi Road, E Katha, 53L, Direct Owner 9739957911

"BEL 2ND STAGE Magadi Main Road 1425 Sqft x 2 Sites South West Corner 60`ft Road, 9845500019/ 7019314962"

Vijayanagar

SITE FOR SALE 60x90 RPC LAYOUT VIJAYANAGAR
SALE: 60X90 West Facing
Only Genuine Buyers Contact:
6363250343
9845038343

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

Multiple Locations

SMV 6TH Block 40×67 Corner, A.G.S. 30×50, BSK 8th 50×80, 11th 20×30, MUDA 60X90. 9448448432

Vishweshwariah Layout

"AVAILABLE VESHVESHWARAIAH -LAYOUT 20x30, 30x40 builder location, Immediate Registration, Contact Genuine Buyers only. 9035444429/ 7259675150"

BDA SITE SALE VISHWESHWARAIAH LAYOUT 2ND BLOCK 40X60 NORTH FACE, NEAR 100FT ROAD, GOOD LOCATION CONTACT: 8892901567

DIRECT OWNER 30x40 N/F BDA Site Sale, VISHWESHWARAIAH LAYOUT BLOCK-1 near 100ft Road. 9742681666, 9886634578

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616



'DIRECT OWNER' 20x30 N/F Vishvesvaraiah Layout 2nd Block, Near Kommagatta, Full Developed Area: 8496030007/ 8310885235

Banashankari

BANASHANKARI 6TH Stage 10th Block 40X60 West Facing Price. 2.40 CR. Stlightly Negotiable: 9148914809/ 9993959099

Koramangala

KORAMANGALA 8TH Block Commercial property for sale 3200sqft. INR 37.7k/sqft Slightly Negotiable. Whatsapp Message Only 9663766492

Flat

Banashankari

SALE BSK 3rd stage- 3 BHK + 3T, 1651 SF. A- khata. Recently Renovated. Mob- 9801269356 EMail :sfylaptop@gmail.com

Malleshwaram

17TH CROSS Near Cloud-9 Hospital Sale 2BHK (1100sft) Flat West facing, Carparking. Owner: 7013351639/ 9945617455

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Commerical

Vijayanagar

450-SQFT COMMERCIAL Office Space Floor Wise For Sale Opposite to Vijayanagar Metro Station Contact: 7676900174 9945569909

Commercial Land

Bangalore North

KOCHOHALLI-10000(100X100)SQFT COMMERCIAL vacant land for sale-opposite Sri Vani School-South West Corner-100 mts from Magadi Main Road-8000 per/sqft- call-8778666035

Residential/ Commercial

Anjanapura

ANJANAPURA SITE for Sale 3rdA Block 3600 Sqft, Commercial BDA NE CORNER @13K, & 40X60 ADJOINING 80' ROAD @18K Per Sqft CALL OWNER RAJESH 9845167755

REAL ESTATE BUYING

Sites

Anjanapura

BDA-SITES WANTED @ Banashankari 6th Stage, Visveshwaraiah Layout, Anjanapura, Kempegowda Layout 30x40,40x60, 50x80 Rajesh: 9945610779

Electronic City

WANTED SITE Surya City Chandapura KHB Layout 2 and 3 phase 20x30 30x40. Call: 9900556688

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

RENTAL PROPERTIES

Accommodation Available

Commercial

FOR RENT: PRIME COMMERCIAL BUILDING, Mariappa Rd, off CMR Main Rd, Kalyan Nagar. Ideal for Clinic, Diagnostic, Tuition, Corporate Office, Banks. GF-300 sqft, FF- 1250 sqft, SF-1250 sqft, TF-500 sqft. Ample parking (4 cars & 25 two-wheelers). 24/7 power & water. Ph: 9845123866, 9880016254. Location: Google Maps -13.021880, 77.638321

JOB OPPORTUNITIES

Walk-in

ಬೇಕಾಗಿದ್ದಾರೆ
AMB ಸಿನಿಮಾಸ್ ಬೆಂಗಳೂರಿನ ಕಪಾಲಿ ಮಾಲ್ ನಲ್ಲಿ ಕಾರ್ಯಾಚರಣೆಯನ್ನು ಪ್ರಾರಂಭಿಸುತ್ತಿದೆ, ನಮ್ಮೊಂದಿಗೆ ಕೆಲಸ ಮಾಡಲು ನಾವು ESP ಗಳನ್ನು ನೇಮಿಸಿಕೊಳ್ಳುತ್ತಿದ್ದೇವೆ,
ಆಸಕ್ತರು AMB ಸಿನಿಮಾಸ್, ಕಪಾಲಿ ಮಾಲ್, ಗಾಂಧಿನಗರ ಬೆಂಗಳೂರು ಇಲ್ಲಿಗೆ ಭೇಟಿ ನೀಡಬಹುದು.
ಅರ್ಹತೆ: 10+ 2.
ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು ನಮ್ಮ ತಂಡವನ್ನು ಸಂಪರ್ಕಿಸಿ.
ಯೋಗೇಶ್: 9739221899
ಕುಶಾಲ್: 8050116194

Marketing & Sales

WANTED SALES Managers (Male & Female), Sales Executives, Deliver Boys and Telecallers. Contact 8867627879

PERSONAL

Lost

DOCUMENT LOST
I, Starlin Jayanthi R/at No.136, Sri Rama Temple Road, Ejipura, Bangalore-47, have lost the Original Lease cum Sale Agreement Dated:13/03/89 registered as Doc.No.16396, Book-I, Vol.No.3065, at Pages 159 to 163, Possession Certificate Dated: 07/06/89 & Allotment Letter of BDA Plot No.837, I Stage, II Block, HBR Layout, Bangalore-45. **If found, contact 9481788031** within 15 days.

Change of Name

CHANGE OF NAME
I, **RAJESH M MAHALE & RAJESH,** residing at No.903, 19th Main, Jnanabharathi 2nd Stage, Near S S Choultry, Mariyappanapalya, Bengaluru-560056, declare that the above names pertain to me only. Henceforth I shall be known as **RAJESH M MAHALE** vide affidavit 26.12.2025 before notary Devaraja E, Bengaluru.







email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

